
ನಮ್ಮ ಮಾನಸ

ಸಂಪುಟ : 3 ಜನವರಿ 2010 ಸಂಚಿಕೆ : 9



ಜನಸ್ಪಂದನ

ಸರ್ಕಾರವೇ ಗ್ರಾಮೀಣ ಜನರ ಬಳಿಗೆ ತೆರಳುವ ವಿಶಿಷ್ಟ ಕಾರ್ಯಕ್ರಮ

ಜನರ ಬಳಿಗೆ ಸರ್ಕಾರ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸಾರ್ವಜನಿಕರ ಕುಂದು-ಕೊರತೆಗಳನ್ನು ಪರಿಹರಿಸುವ ದಿಶೆಯಲ್ಲಿ ವಿನೂತನ ವಿಧಾನಕ್ಕೆ ಚಾಲನೆ ನೀಡುತ್ತಿದೆ. ಹೋಬಳಿ ಮಟ್ಟದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಪಡೆದುಕೊಳ್ಳುವ ಅಪೂರ್ವ ಅವಕಾಶವೇ 'ಜನಸ್ಪಂದನ' ಕಾರ್ಯಕ್ರಮ

20-09-2008ರಿಂದ ಈ ವಿನೂತನ ಕಾರ್ಯಕ್ರಮ ಚಾಲನೆಯಲ್ಲಿದೆ

ಗ್ರಾಮೀಣ ಜನರಿಗೆ ಅನುಕೂಲವಾಗಲೆಂದೇ ರೂಪಿಸಿರುವ ಈ ವಿಶಿಷ್ಟ ಕಾರ್ಯಕ್ರಮವು ಪ್ರತಿ ಶನಿವಾರ (ತಿಂಗಳ 2ನೇ ಶನಿವಾರ ಹೊರತುಪಡಿಸಿ) ಆಯ್ದ ಬೇರೆ ಬೇರೆ ಹೋಬಳಿ ಕೇಂದ್ರಗಳಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮ ನಡೆಯುವ ಕುರಿತು ಅಧಿಕಾರಿಗಳು ಹೋಬಳಿ ವ್ಯಾಪ್ತಿಯ ಸಾರ್ವಜನಿಕರಿಗೆ ಸಾಕಷ್ಟು ಮುಂಚಿತವಾಗಿಯೇ ಮಾಹಿತಿ ಒದಗಿಸುತ್ತಾರೆ. ನಿಗದಿತ ದಿನಾಂಕದಂದು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಸಾರ್ವಜನಿಕರು ಭೇಟಿ ನೀಡಿ ತಮ್ಮ ಅಹವಾಲುಗಳಿಗೆ ಸೂಕ್ತ ಉತ್ತರ/ಪರಿಹಾರ ಪಡೆಯಬಹುದಾಗಿದೆ. ನಿಮ್ಮ ಕುಂದು-ಕೊರತೆಗಳ ನಿವಾರಣೆಗೆ ಇನ್ನು ಮುಂದೆ ದೂರದ ಜಿಲ್ಲಾ ಕೇಂದ್ರಗಳಿಗೆ ಹೋಗುವ ಅಗತ್ಯವಿಲ್ಲ. ಸರ್ಕಾರವೇ ನಿಮ್ಮ ಬಳಿಗೆ ಬರುತ್ತದೆ.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಜನವರಿ 2010

ಸಂಪುಟ : 3 ಸಂಚಿಕೆ : 9

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ನೋವು–ನಲಿವುಗಳ ಅನಾವರಣ

ನೈಸರ್ಗಿಕ ವಿಪತ್ತಿನ ಪರಿಣಾಮವಾಗಿ ನಮ್ಮ ದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಸುನಾಮಿಯಂತಹ ಘಟನೆಗಳು ನಡೆಯುತ್ತಲೇ ಇವೆ. ಇಂತಹ ಅನಾಹುತಗಳು ನಡೆದಾಗ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ವಿವಿಧ ಸಂಘ ಸಂಸ್ಥೆಗಳು, ಮಾನವೀಯ ಕಾಳಜಿಯುಳ್ಳ ಜನಸಾಮಾನ್ಯರಿಂದ ನೆರವಿನ ಮಹಾಪೂರ ಹರಿದು ಬರುವುದು ಸಾಮಾನ್ಯ.

ಉತ್ತರ ಕರ್ನಾಟಕದಲ್ಲಿ ಉಂಟಾದ ಅತಿವೃಷ್ಟಿ ಜನರ ಬದುಕನ್ನು ಬಂಧು–ಬಾಂಧವರು, ಮನೆ, ಮಠ, ಜಾನುವಾರುಗಳನ್ನು ಬಲಿ ತೆಗೆದುಕೊಂಡಿದೆ. ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಆರ್ಥಿಕವಾಗಿ ಜನರು ಚೇತರಿಸಿಕೊಳ್ಳಲಾರದಷ್ಟು ನಷ್ಟವನ್ನು ಅನುಭವಿಸಿದ್ದಾರೆ. ಉತ್ತರಕರ್ನಾಟಕದ ಜನತೆ ಈ ದುರಂತವನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ನೆರೆ ಪರಿಹಾರ ಕಾರ್ಯವನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಬೇಕಾಗಿದ್ದ ರಾಜ್ಯ ಸರ್ಕಾರ, ಪಕ್ಷದ ಆಂತರಿಕ ಬಿಕ್ಕಟ್ಟಿನ ಪರಿಹಾರ ಕಾರ್ಯದಲ್ಲಿ ತೊಡಗಿದ್ದು ವಿಪರ್ಯಾಸವೇ ಸರಿ. ಇದು ರಾಜಕೀಯ ಅಧಿಕಾರದ ಗದ್ದುಗೆಯಾಸೆಯ ಅತಿರೇಕವಾಗಿದೆ. ರೈತರ ಹೆಸರಿನಲ್ಲಿ ರೈತರ ಪರವೆಂದು ಘೋಷಿಸಿ ಅಧಿಕಾರಕ್ಕೆ ಬಂದ ಸರ್ಕಾರ ಗಣಿಧಣಿಗಳ ಒತ್ತಡಕ್ಕೆ ಮಣಿದು ದೆಹಲಿ, ಹೈದರಾಬಾದ್‌ನಲ್ಲಿ ರಾಜಕೀಯ ಪರಿಹಾರವನ್ನು ಹುಡುಕಲು ಪ್ರಯತ್ನಿಸಿ ಕೊನೆಗೆ ಶೋಭಾ ಕರಂದ್ಲಾಜೆಯವರ ರಾಜೀನಾಮೆಗೂ ಕಾರಣವಾಯಿತು.

ರಾಜಕೀಯ ಮುಖಂಡರು ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬಾಯಿಮಾತಿನ ಪರಿಹಾರವನ್ನು ಹೇಳಿ, ಪ್ರಚಾರ ಗಿಟ್ಟಿಸುವ ರಾಜಕೀಯ ಕುಟಿಲತೆಯನ್ನು ಅರಿಯದಷ್ಟು ಮುಗ್ಧರು ನಮ್ಮ ಜನರಲ್ಲ. ಆದರೆ ಜನರಿಂದ ಆಯ್ಕೆಯಾದ ಪ್ರತಿನಿಧಿಗಳು, ಜನರ ಹಿತವನ್ನು ಕಡೆಗಣಿಸಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಅಧಿಕಾರ, ಅಂತಸ್ತು, ತಮ್ಮ ಪಟ್ಟಭದ್ರ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ವ್ಯಂಗ್ಯವೇ ಸರಿ.

ನೆರೆ ಪರಿಹಾರದ ಕಾರ್ಯವನ್ನು ಅವಲೋಕಿಸಿದಾಗ ಒಂದು ಅಂಶ ತುಂಬಾ ಸ್ಪಷ್ಟವಾಗುತ್ತದೆ. ಸಾಮಾನ್ಯ ಜನತೆಗೆ ಸರ್ಕಾರ ಹಾಗೂ ಆಡಳಿತ ಯಂತ್ರದ ಬಗ್ಗೆ ಎಳ್ಳಷ್ಟೂ ನಂಬಿಕೆ ಇಲ್ಲದಿರುವುದು ಕಂಡುಬರುತ್ತದೆ. ಬರಪರಿಹಾರ ಕಾರ್ಯಕ್ಕೆ ಸರ್ಕಾರೇತರ ಸಂಘ ಸಂಸ್ಥೆಗಳು, ಮಾಧ್ಯಮಗಳು ಕೋರಿದ ಮನವಿಗೆ ನೆರವಿನ ಮಹಾಪೂರವೇ ಹರಿದು ಬಂದಿದೆ. ಸರ್ಕಾರದ ಪರಿಹಾರದ ಕಾರ್ಯಕ್ರಮಗಳಲ್ಲಿ ಪಕ್ಷ ರಾಜಕೀಯ, ಜಾತಿ, ಧರ್ಮ, ಮಹಿಳೆಯರ ಸಮಸ್ಯೆಗಳ ನಿರ್ಲಕ್ಷ್ಯ ಮುಂತಾದವು ಢಾಳಾಗಿ ಕಂಡುಬಂದಿವೆ. ನಮ್ಮ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಅಧಿಕಾರಶಾಹಿಗಳ ದಳ್ಳಾಳಿ ಮನೋಭಾವಕ್ಕೆ, ಭ್ರಷ್ಟಾಚಾರಕ್ಕೆ ಜನರು ರೋಸಿ ಹೋಗಿದ್ದಾರೆ.

ಹಂಪಿ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ವಿಭಾಗದವರು ಕ್ಷೇತ್ರಕಾರ್ಯ ನಡೆಸಿ, ನೆರೆಹಾವಳಿ, ಪರಿಣಾಮ ಮತ್ತು ಪರಿಹಾರ ಅಧ್ಯಯನ ವರದಿಯನ್ನು ಪ್ರಕಟಿಸಿದ್ದಾರೆ. ಮಹಿಳಾ ದೃಷ್ಟಿಕೋನದಿಂದ ನೆರೆಪೀಡಿತ ಜನರ ಸಮಸ್ಯೆಯನ್ನು ಆರ್ಥಿಕ, ಸಾಮಾಜಿಕ, ಆರೋಗ್ಯ, ಶೈಕ್ಷಣಿಕ ನೆಲೆಯಲ್ಲಿ ವಿಶ್ಲೇಷಿಸಿರುವ ಈ ವರದಿ ಬಹಳ ಮುಖ್ಯವಾದುದು. ಸಮಾಜಮುಖಿಯಾದ ಈ ವರದಿಯನ್ನು ಕೆಲವು ಕಂತುಗಳಲ್ಲಿ 'ನಮ್ಮ ಮಾನಸ'ದಲ್ಲಿ ಪ್ರಕಟಿಸಲಾಗುವುದು. ಈ ವರದಿಯಲ್ಲಿ ಜನರು ಎದುರಿಸುವ ಸಂಕಷ್ಟಗಳ ನಡುವೆ ಮಹಿಳೆಯರು ಎದುರಿಸುವ ವಿಶಿಷ್ಟ ಸಮಸ್ಯೆಗಳಿಗೆ ಒತ್ತು ನೀಡಲಾಗಿದೆ. ಉತ್ತರಕರ್ನಾಟಕ ನೆರೆಹಾವಳಿಯ ಪ್ರಾಕೃತಿಕ ವಿಕೋಪದ ಪರಿಹಾರಕ್ಕೆ ತಾತ್ಕಾಲಿಕ ಹಾಗೂ ದೀರ್ಘಕಾಲಿಕ ಶಿಫಾರಸ್ಸುಗಳನ್ನು ಮಾಡಲಾಗಿದೆ. ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸುವಾಗ ಮಹಿಳೆಯರ ಸ್ನಾನದ ಅಗತ್ಯ ಗಮನಿಸಿ ನಿರ್ಮಿಸುವುದು, ಅರ್ಧಬಿದ್ದ ಮನೆಗಳ ಪುನರ್‌ನಿರ್ಮಾಣ, ಶಾಲಾ ಕಟ್ಟಡಗಳ ಬಗ್ಗೆ ಸರಿಯಾದ ತೀರ್ಮಾನ, ಶೆಡ್ಡುಗಳ ವಿಸ್ತೀರ್ಣವನ್ನು ಹೆಚ್ಚಿಸುವುದು, ತಾತ್ಕಾಲಿಕ ಶೆಡ್ಡುಗಳಲ್ಲಿ ಮೂಲಭೂತ ಸೌಕರ್ಯ, ಒತ್ತುವರಿ ಮಾಡಿಕೊಂಡ ಸರ್ಕಾರಿ ಜಮೀನನ್ನು ತೆರವುಗೊಳಿಸುವುದು, ದೊಡ್ಡ ಡ್ಯಾಂಗಳ ಎತ್ತರವನ್ನು ಹೆಚ್ಚಿಸದಿರುವುದು, ದೀರ್ಘಾವಧಿ ಕಾರ್ಯಕ್ರಮಗಳನ್ನು 10 ವರ್ಷಗಳವರೆಗೆ ಹಮ್ಮಿಕೊಳ್ಳುವುದು, ಎಲ್ಲಾ ಕ್ಷೇತ್ರದ ತಜ್ಞರ ಸಮಿತಿಯನ್ನು ರಚಿಸುವುದು ಮುಂತಾದ ಮುಖ್ಯವಾದ ಶಿಫಾರಸ್ಸುಗಳನ್ನು ವರದಿಯಲ್ಲಿ ನೀಡಲಾಗಿದೆ.

ಒಳಗಿನ ಪುಟಗಳಲ್ಲಿ....

ಪ್ರಾಕೃತಿಕ ವಿಪತ್ತು ನಿರ್ವಹಣೆಗೆ ತಾತ್ಕಾಲಿಕ ಪರಿಹಾರಗಳು ಉತ್ತರವಲ್ಲ. ಶಾಶ್ವತ ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವಾಗ ಎಲ್ಲಾ ಇಲಾಖೆಗಳು ಪರಸ್ಪರ ಸಂಬಂಧವಿಟ್ಟುಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ. ವರದಿಯಲ್ಲಿ ಹೇಳುವಂತೆ ವಿಜ್ಞಾನಿಗಳು, ಎಂಜಿನಿಯರ್ಸ್, ಸಮಾಜಶಾಸ್ತ್ರಜ್ಞರು, ನೀರಾವರಿ ತಜ್ಞರು, ಕೃಷಿ ತಜ್ಞರು, ಮಹಿಳಾ ಅಧ್ಯಯನದಲ್ಲಿ ನುರಿತ ವಿದ್ವಾಂಸರು, ಅಭಿವೃದ್ಧಿ ಪರಿಣಿತರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಅಧ್ಯಯನ ನಡೆಸಬೇಕು. ಗ್ರಾಮೀಣ ಜನರ ಅನುಭವವನ್ನು ಸಲಹೆಗಳನ್ನು ಈ ತಜ್ಞರ ಸಮಿತಿ ಪರಿಗಣಿಸಬೇಕು.

ಪ್ರಾಕೃತಿಕ ವಿಪತ್ತು ನಿರ್ವಹಣೆಗೆ ಒಂದು ನಿಗಮವನ್ನು ಪ್ರಾರಂಭಿಸಿ ಶಾಶ್ವತಯೋಜನೆಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ. ಇಂತಹ ಬೇಡಿಕೆಯನ್ನು ಸರ್ಕಾರದ ಮುಂದಿಡುವ, ಒತ್ತಡ ಹಾಕುವ ಪ್ರಯತ್ನವನ್ನು ಜನರು ಮಾಡಬೇಕಾಗುತ್ತದೆ.

* * *

ಹೈದರಾಬಾದ್ ರಾಜ್ಯಪಾಲ ಎನ್.ಡಿ. ತಿವಾರಿ ಲೈಂಗಿಕ ಹಗರಣದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿರುವುದು, ಅರುಣಾಳ ದಯಾಮರಣ ಸಾವಿಗೆ ವರದಿಗಾರ್ತಿಯೊಬ್ಬರು ಅರ್ಜಿಹಾಕಿರುವುದು, ಹರ್ಯಾಣದಲ್ಲಿ ಸಿ.ಬಿ.ಡಿ. ನ್ಯಾಯಾಲಯದ ರುಚಿತಾ ಸಾವಿಗೆ ಸಂಬಂಧಿಸಿದ ತೀರ್ಪು ಇವು ಆಘಾತಕಾರಿ ಅಂಶಗಳನ್ನು ಬೆಳಕಿಗೆ ತರುತ್ತವೆ. ವೃತ್ತಿಯಲ್ಲಿ ನರ್ಸ್ ಆಗಿದ್ದ ಅರುಣಾಳ ಮೇಲೆ ವಾರ್ಡ್‌ಬಾಯ್ ಅತ್ಯಾಚಾರ ನಡೆಸಿದ್ದ, ಆಕೆ ಆಘಾತದಿಂದ ಕೋಮಾ ಸ್ಥಿತಿ ತಲುಪಿ, ಇನ್ನೂ ಜೀವಂತ ಶವವಾಗಿ ಮಲಗಿದ್ದಾಳೆ. ಆಕೆಗೆ ನಳಿಕೆಯ ಮೂಲಕ ಆಹಾರವನ್ನು ನೀಡಲಾಗುತ್ತಿದೆ. ಅದನ್ನು ನಿಲ್ಲಿಸುವುದರ ಮೂಲಕ ಆಕೆಯ ಸಾವಿಗೆ ಅವಕಾಶ ನೀಡಬೇಕೆಂಬುದು ವರದಿಗಾರ್ತಿಯ ಅಭಿಪ್ರಾಯ. ಆಕೆಯ ಈ ದುರವಸ್ಥೆಗೆ ಕಾರಣವಾದ ಅಪರಾಧಿ ಕೇವಲ ಆರುವರ್ಷ ಜೈಲುಶಿಕ್ಷೆಯನ್ನು ಅನುಭವಿಸಿ ಬಿಡುಗಡೆಯಾಗಿದ್ದಾನೆ!


ರುಚಿತಾ ಸತ್ತು 19 ವರ್ಷಗಳು ಸಂದಿವೆ. ಆಗ ಆಕೆಗೆ 14 ವರ್ಷ ವಯಸ್ಸು. ಆಕೆ ಉದಯೋನ್ಮುಖ ಟೆನ್ನಿಸ್ ಆಟಗಾರ್ತಿ. ಹರಿಯಾಣದ ಡಿ.ಸಿ.ಪಿ. ಆಗಿದ್ದ ರಾಥೋಡ್ ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದ. ರಾಥೋಡ್ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಆಕೆಯ ಸಹೋದರನ ಮೇಲೆ ಸುಳ್ಳು ಆಪಾದನೆ ಹೊರಿಸಿ, ಹಿಂಸೆ ನೀಡಿದ್ದ. ಆಕೆಯ ತಂದೆಯ ಸ್ನೇಹಿತರು ಹಾಗೂ ಆಕೆಯ ಗೆಳತಿ ಅನುರಾಧ ಅವರ 19 ವರ್ಷದ ಹೋರಾಟದ ನಂತರ ನ್ಯಾಯಾಲಯ ರಾಥೋಡ್‌ಗೆ **ಆರು ತಿಂಗಳ** ಅವಧಿಯ ಜೈಲುಶಿಕ್ಷೆಯನ್ನು ನೀಡಿದೆ! ಸಿ.ಬಿ.ಐ. ನ್ಯಾಯಾಲಯ ತನಿಖೆಯನ್ನು ನಡೆಸಿ ನೀಡಿದ ಈ ತೀರ್ಪು ಮಾನವೀಯ ಕಾಳಜಿಯುಳ್ಳವರಲ್ಲಿ ಅಸಮಧಾನದ ಬೆಂಕಿಯನ್ನು ಹೊತ್ತಿಸಿದೆ. ರಾಥೋಡ್ ಮೇಲಿನ ಆರೋಪ ಸಾಬೀತಾಗಿದ್ದರೂ, ಕೇವಲ ಆರು ತಿಂಗಳ ಶಿಕ್ಷೆಯನ್ನು ನ್ಯಾಯಾಲಯ ವಿಧಿಸಿರುವುದು ಆಶ್ಚರ್ಯಕರವಾಗಿದೆ. ಹರ್ಯಾಣದಲ್ಲಿ ಬಂದು ಹೋಗಿರುವ ಮುಖ್ಯ ಮಂತ್ರಿಗಳೆಲ್ಲರೂ ರಾಥೋಡ್‌ರವರಿಗೆ ರಾಜಕೀಯ ರಕ್ಷಣೆಯನ್ನು ನೀಡಿರುವುದು ಸ್ಪಷ್ಟವಾಗಿದೆ. ಸರ್ಕಾರೇತರ ಸಂಸ್ಥೆ ಮಾನವ ಹಕ್ಕುಗಳ ನಾಗರಿಕ ವೇದಿಕೆಯ ಮುಂದಾಳತ್ವದಲ್ಲಿ ನೂರಾರು ಮಂದಿ ಮಾನವ ಸರಪಳಿಯನ್ನು ನಿರ್ಮಿಸಿ ಇತ್ತೀಚೆಗೆ ಪ್ರತಿಭಟಿಸಿದರು. 2002ರಲ್ಲಿ ನಿವೃತ್ತಿಯಾಗಿದ್ದ ರಾಥೋಡ್ ಅವರಿಗೆ 1985ರಲ್ಲಿ ಅತ್ಯುತ್ತಮ ಸೇವೆಗಾಗಿ ಪ್ರಶಸ್ತಿಯನ್ನು ನೀಡಲಾಗಿತ್ತು. ಈಗ ಕೇಂದ್ರ ಗೃಹಸಚಿವಾಲಯ ಷೋಕಾಸ್ ನೋಟಿಸ್ ಜಾರಿಮಾಡಿ, ಪೊಲೀಸ್ ಪದಕವನ್ನು ವಾಪಸ್ ಪಡೆದು ಪಿಂಚಣಿಯನ್ನು ಕಡಿಮೆಗೊಳಿಸುತ್ತಿದೆ. ಸಾಕೆ?

ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಕ್ಕೆ ಸಂಬಂಧ ಪಟ್ಟ ಕಾನೂನಿನಲ್ಲಿರುವ ನ್ಯೂನತೆಗಳು ಅನೇಕ. ಅಧಿಕಾರದ ದುರ್ಬಳಕೆ, ಭ್ರಷ್ಟಾಚಾರ ಹಾಗೂ ರಾಜಕೀಯ ಪ್ರಭಾವದಿಂದ ಹೆಣ್ಣುಮಕ್ಕಳು ನ್ಯಾಯ ಪಡೆಯುವದರಿಂದ ವಂಚಿತರಾಗುತ್ತಿದ್ದಾರೆಂಬುದು ವೇದ್ಯ. ಇಂತಹ ಘಟನೆಗಳು ಖಾಸಗೀ ಸ್ಥಳದಲ್ಲಿ ನಡೆಯುವುದರಿಂದ ಸಾಬೀತು ಪಡಿಸುವುದು ದುರ್ಲಭವಾಗುತ್ತದೆ. ಹಾಗೂ ಆರೋಪಿಗಳು ವಿವಿಧ ರೀತಿಯಲ್ಲಿ ಅಮಾನುಷವಾದ ಮಾನಸಿಕ ಹಿಂಸೆ, ಕಿರುಕುಳ ನೀಡುವುದರಿಂದ ಜರ್ಝರಿತರಾದ ಹೆಣ್ಣುಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತಾರೆ. ಅಪರಾಧವೆಸಗಿರುವುದು ಸಾಬೀತಾಗಿದ್ದರೂ, ನ್ಯಾಯಾಧೀಶರು ಕಡಿಮೆ ಪ್ರಮಾಣದ ಶಿಕ್ಷೆಯನ್ನು ನೀಡುವಲ್ಲಿ ಉದಾರ ನೀತಿಯನ್ನು ಅನುಸರಿಸಿರುವುದು ಪ್ರಶ್ನಾರ್ಹವಾಗಿದೆ. ನ್ಯಾಯಾಲಯದ ಈ ತೀರ್ಪನ್ನು ವಿರೋಧಿಸಿ ಸಾರ್ವಜನಿಕರು ಪ್ರತಿಭಟಿಸುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಲೈಂಗಿಕ ಕಿರುಕುಳದ ಪ್ರಕರಣಗಳು ಸಾರ್ವಜನಿಕವಾಗಿ ಚರ್ಚಿತವಾಗಿ, ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗುವುದರ ಮೂಲಕ ಮಹಿಳೆಯರಿಗೆ ನ್ಯಾಯ ದೊರೆಯಬೇಕಿದೆ. ನಾಲ್ಕು ಗೋಡೆಗಳ ನಡುವೆ ಸದ್ದಿಲ್ಲದೆ ನಡೆಯುವ ಇಂತಹ ಶೋಷಣೆಯ ಕಪ್ಪು ಮುಖಗಳು ಬೆಳಕಿಗೆ ಬರಬೇಕಾಗಿದೆ.

* * *

'ನಮ್ಮ ಮಾನಸ'ದ ಎಲ್ಲ ಓದುಗ, ಬರಹಗಾರ ಬಳಗಕ್ಕೆ ಹೊಸ ವರ್ಷದ ಶುಭಾಶಯಗಳು. 2010, ನಿನ್ನೆಗಳ ನೋವಿನ ನೆನಪಷ್ಟೇ ಅಲ್ಲ, ಮಹಿಳಾ ಲೋಕಕ್ಕೆ ಸಂತೋಷ–ಹೆಮ್ಮೆ ತರುವ ಕೆಲವು ಸುದ್ದಿಗಳನ್ನು ಅನಾವರಣಗೊಳಿಸುತ್ತ ಪ್ರಾರಂಭವಾಗಿದೆ. ನಮ್ಮೆಲ್ಲರ ಮೆಚ್ಚಿನ ಲೇಖಕಿ ಶ್ರೀಮತಿ ವೈದೇಹಿ ಅವರಿಗೆ ಕೇಂದ್ರಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಅವರಿಗೆ ಅಭಿನಂದನೆಗಳನ್ನು ಹೇಳಲು ಸಂತೋಷಿಸುತ್ತೇವೆ. ❑

2009ರ ಡಿಸೆಂಬರ್ ಸಂಚಿಕೆಯ ಮುಖಪುಟ ಚಿತ್ರ ಕೃಪೆ: **ಮುತ್ತು ಹಾಳಗೇರಿ**







ವೈದೇಹಿ ಕಿರೀಟಕ್ಕೆ ಮತ್ತೊಂದು ಗರಿ

• ಡಾ. ಬಿ.ಎನ್. ಸುಮಿತ್ರಾಬಾಯಿ

ದೆಹಲಿಯ ಸಾಹಿತ್ಯ ಅಕಾಡೆಮಿ (ಇದನ್ನು ಏಕೋ ಕೇಂದ್ರ ಸಾಹಿತ್ಯ ಅಕಾಡೆಮಿ ಎಂದೇ ಕರೆಯುವ ರೂಢಿ ಬಂದುಬಿಟ್ಟಿದೆ) ಈ ಬಾರಿ 'ಈ ಲೋಕ ಸಂಭವೆಯೆಮ್ಮ ಭೂಜಾತೆ ಜಾನಕಿ'ಯ 'ಕ್ರೌಂಚ ಪಕ್ಷಿಗಳು' ಕಥಾಸಂಕಲನಕ್ಕೆ ಪ್ರಶಸ್ತಿ ನೀಡಿದೆ. 'ವೈದೇಹಿ' ಕಾವ್ಯನಾಮದಿಂದಲೇ ಕನ್ನಡಿಗರಿಗೆಲ್ಲ ಸುಪರಿಚಿತವಾದ ಲೇಖಕಿ ಜಾನಕಿ ಶ್ರೀನಿವಾಸ ಮೂರ್ತಿ. (ಅವರ ಹೆಸರನ್ನು ಹಾಗೆ ಬಣ್ಣಿಸಿದ್ದಕ್ಕಾಗಿ ನಾನು ಕುವೆಂಪು ಅವರ ಕ್ಷಮೆ ಕೋರುತ್ತೇನೆ) ಈ ಕಿರೀಟಕ್ಕಾಗಿ ವೈದೇಹಿಗೆ ಮನದುಂಬಿ ಅಭಿನಂದಿಸುತ್ತೇನೆ.

ಹಾಗೆ ನೋಡಿದರೆ ಎಷ್ಟೋ ವರ್ಷಗಳ ಹಿಂದಿನಿಂದಲೇ ನಾನೂ ನನ್ನಂಥವರೂ ವೈದೇಹಿಗೆ ಇಂತಹ ರಾಷ್ಟ್ರಮಟ್ಟದ ಮಾನ್ಯತೆ ದೊರಕಬೇಕೆಂದು ಬಯಸಿದ್ದೆವು. ಕೊನೆಗೂ ಅದು ಸಿಕ್ಕಿದೆ. ಇದೇನೂ ವೈದೇಹಿಗೆ ಹೊಸತಲ್ಲ. ಕರ್ನಾಟಕದ ಸರ್ಕಾರಿ, ಸರ್ಕಾರೇತರ ಜಾಗಗಳಿಟ್ಟಿರುವ 'ಮೌಲಿಕ' ಅಥವಾ'ಗಣ್ಯ' 'ಪ್ರತಿಷ್ಠಿತ' ಪ್ರಶಸ್ತಿಗಳೆಲ್ಲ ಎಂದೋ ಅವರ ಮಡಿಲು ತುಂಬಿದ್ದಾಗಿದೆ. ಅವುಗಳು ಅವರ ತಲೆಗೇರಿ, ತಲೆಗೆಡಿಸಿಲ್ಲ. ಬದಲಾಗಿ ಹೆಚ್ಚು ಹೆಚ್ಚು ಮಾನವೀಯ ಅರ್ಥವುಳ್ಳ ಹೊಸ ಸೃಷ್ಟಿಯ ಕಾಯಕವನ್ನು ಈಕೆ ಇನ್ನಷ್ಟು ಗಾಢವಾಗಿ ಕೈಗೊಳ್ಳುತ್ತಿದ್ದಾರೆ ಎಂಬುದು ನಮ್ಮ ಪುಣ್ಯ, ನಾಡಿನ ಭಾಗ್ಯವೂ ಹೌದು.

ದೆಹಲಿಯದಿರಲಿ, ಬೇರೆ ಯಾವುದೇ ಪ್ರಶಸ್ತಿ ಇರಲಿ ಒಂದು 'ಕೃತಿಗೆ' ಎಂದಿರುವುದು ಪ್ರಕಟಿತ ವರ್ಷದ ಲೆಕ್ಕಾಚಾರದ ಅನುಕೂಲಕ್ಕಾಗಿ ಅಷ್ಟೆ. ನಿಜವಾಗಿ ಅದು ಬರಹಗಾರರ ಒಟ್ಟು ಕಾಣಿಕೆಗೇ ಸಲ್ಲುವ ಗೌರವ. ಹಾಗೆ ವೈದೇಹಿ ಕಳೆದ 1970ರ ದಶಕದ ನಡುಗಾಲದಿಂದ ಇಂದಿನವರೆಗೂ ಕನ್ನಡಕ್ಕೆ ಕೊಟ್ಟಿರುವ ಸಾಹಿತ್ಯದ ಘನವಾದ ಕೊಡುಗೆಗೆ ಮಾತ್ರವಲ್ಲ, ಕನ್ನಡದ ಮಹಿಳಾ ಬರಹಗಾರರೆಲ್ಲರ ಪ್ರತಿನಿಧಿತ್ವದ ದೃಷ್ಟಿಯಿಂದಲೂ ದಕ್ಕಿದ ಈ ಪ್ರಶಸ್ತಿಗಾಗಿ ನಾವು ಹೆಮ್ಮೆ ಪಡಬಹುದಾಗಿದೆ. (ಇವರಿಗಿಂತ ಮೊದಲು ಇಂಥ ಹೆಮ್ಮೆ ನಮಗೆ ಕೊಟ್ಟಿರುವ ಗೀತಾ ನಾಗಭೂಷಣರನ್ನು ಹೊರತು ಪಡಿಸದೆ ಈ ಸಂತಸ ನಮ್ಮೆಲ್ಲರದೂ ಎಂದು ನನಗೆ ಅನ್ನಿಸುತ್ತದೆ.)

'ಕ್ರೌಂಚ ಪಕ್ಷಿಗಳು' (2005) ವೈದೇಹಿ ಕಥಾಲೋಕದ ಈ ದಶಕದ ಮಾದರಿ. ಅದರ ಒಳಗಿರುವ ಹತ್ತು ಕಥೆಗಳಲ್ಲಿ ಎಲ್ಲವೂ ಒಂದೇ ತೆರನಾಗಿ ನಮ್ಮ ಎದೆಗೂಡಿಗೆ ತಾಗುತ್ತವೆ ಎಂದು ಹೇಳಲಾರೆ. ಉದಾಹರಣೆಗೆ 'ದಾಳಿ' ಕಥೆ ಅನಂತಮೂರ್ತಿಯವರ 'ಮೌನಿ'ಯ ಹಾಗೆ, 'ಅವರವರ ಭಾವಕ್ಕೆ' ನವೋದಯದ ಕಾಲದ ಕೊಡಗಿನ ಗೌರಮ್ಮ ಇಲ್ಲವೆ ಶ್ಯಾಮಲಾದೇವಿಯವರು ಬರೆಯಬಹುದಾದ ಕಥೆಯ ಹಾಗೆ ಭಾಸವಾದರೆ ಆಶ್ಚರ್ಯವಿಲ್ಲ. ವೈದೇಹಿಯವರ ಹಿಂದಿನ ಸಂಕಲನಗಳಲ್ಲಿ ನಮ್ಮ ಮನದೊಳಗೆ ಅಚ್ಚಳಿಯದಮುದ್ರೆ ಮೂಡಿಸಿದಂಥ 'ಶಕುಂತಲೆಯೊಡನೆ ಕಳೆದ ಅಪರಾಹ್ನ' 'ಅಂತರಂಗದ ಪುಟಗಳು' 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' 'ಹಗಲು ಗೀಚಿದ ನೆಂಟ' 'ಆರತಿ ತಟ್ಟೆ' 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಅಮ್ಮಚ್ಚಿಯೆಂಬ ನೆನಪು' 'ಆತ' 'ಸೌಗಂಧಿಯ ಸ್ವಗತಗಳು' ಮುಂತಾದ ಕಥೆಗಳಂತೆ ಮನದಲ್ಲಿ ಬೇರು ಬಿಡುವ ತರಹೆಯ ಕಥೆಗಳ ಧಾಟಿಯನ್ನು ಮೀರಲು ಬದಲಿಸಿಕೊಳ್ಳಲು ಅಥವಾ ಹೊಸ ಯತ್ನ ನಡೆಸಲು ವೈದೇಹಿ ಯತ್ನಿಸಿದಂತೆ ಕಾಣಿಸುತ್ತದೆ. 'ನಟ' ಕಥೆಯಲ್ಲಿ ಬೇರೆಲ್ಲಾ ಹೆಣ್ಣುಮಕ್ಕಳ ಭಾವ, ಧಾಟಿ, ಮಾತುಗಳನ್ನು ಅಣಕಮಾಡಿ ತೋರಿಸಿ ನಗಿಸುವ ಅಸಾಧಾರಣ ನಟನಕಲೆಯ ರತ್ನ ವೈಯಕ್ತಿಕ ಬದುಕಿನ ದುರಂತದ ಪ್ರಶ್ನೆಯೆದುರು ತನ್ನನ್ನು ಅಣಕ ಮಾಡಿಕೊಳ್ಳಲಾರದ ದುರಂತದ ಧ್ವನಿಯಿದೆ. 'ಒಗಟು' ಕಥೆಯ ನಾಯಕಿಯು ಮದುವೆಯಾಗಿ ಹೋಗಿ ಸೇರಿದ ಮನೆ, ಗಂಡನೊಡನೆ ಅಪ್ಪಟ ಸ್ವೀಕೃತಿ, ಸಂತೃಪ್ತಿಯ ಬದುಕು ಬಾಳುವಂತೆ ತೋರುವಾಗಲೇ ಎಲ್ಲರ ಕಣ್ತಪ್ಪಿಸಿ ಎಲ್ಲೋ ಹೋಗಿ ಖುಷಿಯ ಗಳಿಗೆಗಳನ್ನು ಹುಡುಕಿಕೊಂಡು, ಮತ್ತೆ ಏನೂ ಆಗದವಳಂತೆ ಗುಟ್ಟಾಗಿದ್ದು ಎಂದಿನಂತೆ ತನ್ನ ಗೂಡಿನೊಳಕ್ಕೆ 'ಸಹಜ'ವಾಗಿ ತೂರಿಹೋಗುವುದರ ಹಿಂದೆ ಪ್ರಶ್ನೆ, ಅಚ್ಚರಿ, ಕುತೂಹಲದ ಭಾವಗಳಿವೆ. 'ಮಾತು ಸೋತ ಕ್ಷಣ' ತೀರಾ ಅಸ್ಪಷ್ಟವಾದ ಪ್ರೇಮದ ಎಳೆಯನ್ನು ಒಬ್ಬಾಕೆಯ ಸಾವಿನೆದುರು ಅವಳ ಆಪ್ತನೊಬ್ಬನಲ್ಲಿ ಹೊಮ್ಮಿ ಬಂದ ಮಾತಿಗೆ ಹಾದಿಯಿಲ್ಲದ ಅಸಾಧಾರಣದ ದುಃಖದ ಅನುಭವದ ಮೂಲಕ ಹುಡುಕುವ ಯತ್ನಮಾಡುತ್ತದೆ. 'ತೆರೆಯದ ಪುಟಗಳು' ಕೂಡ ಮಾತಾಗಲು ಬಿಡದಂಥ ಬಿರುಕಿನ ಸಂಬಂಧದ ನೋವನ್ನು ಹುದುಗಿಸಿಕೊಂಡ ಅನುಭವ ನೀಡುತ್ತದೆ.

ಒಟ್ಟಾರೆ ಈ ಎಲ್ಲ ಕಥೆಗಳು ಹಿಂದೆ ಕೆ.ವಿ. ಅಕ್ಷರ ತಮ್ಮ ಪ್ರಕಾಶಕ ಟಿಪ್ಪಣಿಯಲ್ಲಿ ಹೇಳಿರುವಂತೆ "'ಗಂಡು'–'ಹೆಣ್ಣು'ಗಳು ಕೂಡಿರುವ ಒಂದು ಲೋಕವಿದೆ; ಆ ಲೋಕದಲ್ಲಿ ಮಿಥುನವಿರುವಂತೆಯೇ ವಿಚ್ಛೇದನವೂ ಇದೆ". 'ಕ್ರೌಂಚ ಪಕ್ಷಿಗಳು' ಎಂಬ ಕಥೆ ರಾಮಾಯಣದ ಕಾಲದಿಂದಲೂ ಅನ್ಯೋನ್ಯ ಪ್ರೇಮಕ್ಕೆ ಸಂಕೇತವಾದ ಕ್ರೌಂಚವನ್ನು ಆದಿ ಪ್ರತಿಮೆಯಾಗಿಟ್ಟುಕೊಂಡು ಈ ಕಾಲದ "ಪ್ರೇಮಕಥನ"ಗಳನ್ನು ನೈಜ ಬದುಕಿನಲ್ಲಿ ತೆರೆದುಕೊಳ್ಳುವ ರೀತಿಯಲ್ಲಿಯೇ ಓದಲೆತ್ನಿಸುವ ವಿಶಿಷ್ಟ ಹುಡುಕಾಟವುಳ್ಳ ಕಥೆಯಾಗಿದೆ. ಕರಾವಳಿಯಿಂದ ದೆಹಲಿಗೆ, ದೆಹಲಿಯಿಂದ ಮತ್ತೆ ಕರಾವಳಿಗೆ ಚಲಿಸುವ ನಿತ್ಯವಿರಹಿ ಅರ್ಷ್ಣಾರ್ಣಭಟ್ಟರ 'ದುರಂತ ಪ್ರೇಮ'ದ ಹೆಸರ್ಹೊತ್ತ ಬದುಕಿಗೆ ಮತ್ತೊಬ್ಬ ಪತ್ನಿ, ಅವಳಿಂದ ಹುಟ್ಟಿರುವ ನಾಲ್ಕು ಮಕ್ಕಳ ಸಂಸಾರದೊಳಗಿದ್ದೂ ಮಾಗದಂಥ ಮೆರುಗು ಇದೆ. ದೇಶ ವಿಭಜನೆಯ ಹೊತ್ತಿನಲ್ಲಿ ಕೋಮುಗಲಭೆಕೋರರಿಂದ ಅಪಹೃತಳಾಗಿ, ಅತ್ಯಾಚಾರಕ್ಕೆ ಬಲಿಯಾಗಿ, ನಿರಾಶ್ರಿತರ ಶಿಬಿರ ಸೇರಿ ಕೊನೆಗೆ ಸಮಾಜ ಸುಧಾರಕಿ ರಾಜಕೀಯ ಮುಖಂಡೆ ವಿಶಾಖಾಬೆನ್‌ರಿಂದ ರಕ್ಷಿತಳಾಗಿ ಬದುಕುವ ಆತನ ಮೊದಲಹೆಂಡತಿ ಲಕ್ಷ್ಮಮ್ಮನ ಜೊತೆ ಕತೆಗಾರಿಕೆ ಮುಖಾಮುಖಿ ಆದಾಗ 'ನಿತ್ಯವಿರಹಿ' ಯಾರೆಂಬ ಪ್ರಶ್ನೆ ಏಳುತ್ತದೆ.

ಈ ಸಂಕಲನದ ಎಲ್ಲ ಕಥೆಗಳು ಒಂದಲ್ಲ ಒಂದು ರೀತಿ ಪ್ರಶ್ನೆಯ ಧ್ವನಿಯೊಂದಿಗೇ ಕೊನೆಗೊಳ್ಳುತ್ತವೆ. 'ಕ್ರೌಂಚ ಪಕ್ಷಿಗಳು' ವೈದೇಹಿಯ ಒಟ್ಟು ಕಥಾಲೋಕದ ಒಂದು ಮುಖ್ಯ ಬದುಕಿನ ಅರ್ಥದ ಹುಡುಕಾಟಕ್ಕೆ ಪ್ರತೀಕವಾಗಿದೆ. ❑



ಸುಮಿತ್ರಾ ಪ್ರಶ್ನೆಗಳು: ನನ್ನ ಉತ್ತರಗಳು

• *ವೈದೇಹಿ*

ಪ್ರಸ್ತುತ ಸಂದರ್ಶನ ಲೇಖನವು ಡಾ॥ ವೀಣಾಶಾಂತೇಶ್ವರ ಅವರ ಅಭಿನಂದನ ಗ್ರಂಥ 'ನಿರ್ದಿಗಂತ'ಕ್ಕಾಗಿ ಡಾ. ಎಲ್.ಸಿ. ಸುಮಿತ್ರಾ ಅವರು ಸಿದ್ಧಪಡಿಸಿದ್ದು, ವೈದೇಹಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದ ಈ ಸಂದರ್ಭದಲ್ಲಿ ಅವರ ಚಿಂತನೆಗಳನ್ನು ಮರುಚಿಂತನೆಗೆ ಒಡ್ಡಲು ಅನುಮತಿಸಿದ್ದಾರೆ. ಅವರಿಬ್ಬರಿಗೂ 'ನಮ್ಮ ಮಾನಸ' ಕೃತಜ್ಞವಾಗಿದೆ.

1. ಲೇಖಕ ಮತ್ತು ಲೇಖಿಕೆಯರ ಸಂವೇದನೆಗಳು ಭಿನ್ನ ಎಂದು ನೀವು ಒಪ್ಪಿಕೊಳ್ಳುತ್ತೀರಾ? ಭಿನ್ನ ಎಂದಾದರೆ ಈ ಭಿನ್ನ ಸಂವೇದನೆಗಳು ಅವರ ಕೃತಿಯನ್ನು ಹೇಗೆ ಪ್ರಭಾವಿಸುತ್ತವೆ?

ಈ ಪ್ರಶ್ನೆ ಹೆಣ್ಣಿನ ಸಂವೇದನೆ ಗಂಡಿನಕ್ಕಿಂತ ಭಿನ್ನ ಅಂತಲೂ ಇರಬಹುದಲ್ಲ? ಸರಿಯೆ. ಖಂಡಿತವಾಗಿಯೂ ಭಿನ್ನ. ಆದರೆ ಲೇಖಕ ಲೇಖಿಕಿಯರ ವಿಷಯಕ್ಕೆ ಬಂದರೆ - ಬರವಣಿಗೆ ಎಂಬುದು ಪರಕಾಯ ಪ್ರವೇಶದ ಸಾಮರ್ಥ್ಯ ಕೂಡ ಆಗಿರುವುದರಿಂದ, ಬರೆವ ಚೇತನಗಳನ್ನು ಕೇವಲ ಹೆಣ್ಣು ಗಂಡು ಅಂತ ವಿಂಗಡಿಸುವುದಾದರೂ ಎಲ್ಲಿಯವರೆಗೆ ಎಂಬ ಪ್ರಶ್ನೆಯೂ ಏಳುತ್ತದೆ. ಎಷ್ಟೋ ಸಲ ಹೆಣ್ಣುಮಕ್ಕಳ ಬದುಕಿನ ವಿವಿಧ ಸುಖಸಂಕಟಗಳ, ಸವಾಲುಗಳ ಪದರುಗಳನ್ನು ನಮ್ಮ ಪ್ರಮುಖ ಲೇಖಕರು ನಿಭಾಯಿಸಿದ ರೀತಿ ನೋಡಿದರೆ ಆಶ್ಚರ್ಯವಾಗುತ್ತದೆ. ಬರೆವ ಹೊತ್ತಿನಲ್ಲಿ ಹೆಣ್ಣು ಗಂಡೆಂಬ ಎರಡೂ ಪಾತ್ರಗಳ ಒಳ ಹೊಕ್ಕು ಹೊರ ಬರುವರೆಂದ ಮೇಲೆ ಬರೆದವರು ಯಾರು, ಪುರುಷನೋ ಸ್ತ್ರೀಯೋಎಂಬ ಪ್ರಶ್ನೆಯೇ ಅಡಗಿ ಚೇತನ ಮಾತ್ರ ಅಥವಾ ಪ್ರಜ್ಞೆ ಮಾತ್ರರೆನಿಸುವರಲ್ಲವೆ. ಇಲ್ಲಿ ಪ್ರಧಾನ ಅಂಶವೆಂದರೆ ಲೇಖಕ/ಲೇಖಿಕಿಯರಿಗೆ ಪರಸ್ಪರ ಸಂಪೂರ್ಣ ಭಿನ್ನವಿರುವ ಸ್ತ್ರೀಲೋಕ ಮತ್ತು ಪುರುಷ ಲೋಕದ ಕುರಿತು ಎಷ್ಟು ಪರಿಚಯ/ಅನುಭವವಿದೆ ಎಂಬುದೇ. ನಿಕಟ ಪರಿಚಯವೋ ದಟ್ಟ ಅನುಭವವೋ ಇಲ್ಲದೆ ನಾವು ಲೇಖಿಕಿಯರು ಪುರುಷಲೋಕದ ಬಗ್ಗೆ ಬರೆಯುವುದಾಗಲೀ ಲೇಖಕರು ನಮ್ಮ ಲೋಕದ ಕುರಿತು ಬರೆಯುವುದಾಗಲೀ ಪರಿಧಿಯಲ್ಲಿಯೇ ಉಳಿದು ಬಿಡುತ್ತದೆ. ಇನ್ನೂ ಒಂದೆಂದರೆ ವ್ಯಕ್ತಿವಿಶಿಷ್ಟ ಸಂವೇದನೆ/ಅನುಭವ, ಸಮುದಾಯ ವಿಶಿಷ್ಟ ಸಂವೇದನೆ/ಅನುಭವಗಳು ಇರುವ ಹಾಗೆಯೇ ಕೆಲ ಪುರುಷ ವಿಶಿಷ್ಟ ಹಾಗೂ ಸ್ತ್ರೀ ವಿಶಿಷ್ಟ ಸಂವೇದನೆ ಮತ್ತು ಅನುಭವಗಳೂ ಇದ್ದೇ ಇರುತ್ತವಲ್ಲ, ಅವುಗಳ ಅಭಿವ್ಯಕ್ತಿ ಮಟ್ಟಿಗೆ ಅವರು ಅವರೇ ಆಗಿದ್ದರೇನೇ ಅಧಿಕೃತವಾಗುತ್ತದೆ ಮತ್ತು ಅವು ಅವರ ಕೃತಿಯನ್ನು ನಿಶ್ಚಯವಾಗಿ ಪ್ರಭಾವಿಸುತ್ತವೆ. ಅವರವರ ಕೃತಿ ಏನಾದರೂ ಭಿನ್ನವಾಗುವುದಿದ್ದರೆ ಅದು, ಇಲ್ಲಿ.

2. ಸಣ್ಣ ಕತೆಯನ್ನು ನಿಮ್ಮ ಅಭಿವ್ಯಕ್ತಿಗಾಗಿ ಆಯ್ದುಕೊಂಡಿರುವುದರ ಹಿನ್ನೆಲೆ ‹ಏನು? ಸಾಹಿತ್ಯಪ್ರಕಾರವಾಗಿ ಸಣ್ಣಕಥೆಯ ಅಭಿವ್ಯಕ್ತಿಯ ಅನುಕೂಲತೆ ಮತ್ತು ಸವಾಲು ಏನು?

ನಮ್ಮ ಹೈಸ್ಕೂಲಿನಲ್ಲಿ ಆಗೆಲ್ಲ ಪ್ರತೀ ಕ್ಲಾಸು ವರ್ಷಕ್ಕೆ ಒಂದೊಂದು ಹಸ್ತಪತ್ರಿಕೆ ಹೊರತರುತಿತ್ತು. ಅದಕ್ಕೆ ಬೇಕಾಗುವುದು ಸಣ್ಣ ಸಣ್ಣ ಬರಹಗಳು. ದೊಡ್ಡದು ಬರೆದರೆ ಉಳಿದವರಿಗೆ ಜಾಗ ಬೇಕಲ್ಲ? ಸಣ್ಣ ಬರಹ ಹಾಗೆ ನನ್ನಲ್ಲಿ ಸುರುವಾದದ್ದು ಬಹುಶಃ ಖಾಯಂ ಉಳಿದುಬಿಟ್ಟಿತು. ತ್ರಿವೇಣಿ ಕಾದಂಬರಿಗಳನ್ನೆಲ್ಲ ನಾವು ಕಸಿಕಸಿದು ಓದುತ್ತಿದ್ದ ಕಾಲವದು. ಓದುತ್ತ ಅದನ್ನೇ ಹೋಲುವ ಒಂದು ಕಿರು ಕಾದಂಬರಿ (ಅಂತ ಅಂದು ನಾನಂದುಕೊಂಡಿದ್ದು)ಯನ್ನೂ ತ್ರಿವೇಣಿಯವರದೇ ಕನ್ನಡದಲ್ಲಿ ಬರೆದಿದ್ದೆ; 'ಸಾಹಿತ್ಯ ಜ್ಯೋತಿ' ಎಂಬ ನಮ್ಮ ಮನೆಯೊಳಗಿನ ಹಸ್ತಪತ್ರಿಕೆಗೆ. ಆದರೆ ನಿಧಾನವಾಗಿ ಯಾಕೋ ವಿಸ್ತಾರಕ್ಕಿಂತ ಸಾಂದ್ರತೆಯೇ ನನ್ನನ್ನು ಹೆಚ್ಚು ಹಿಡಿದಿಟ್ಟಿತು. ಸುಧಾ ಪತ್ರಿಕೆ ಹುಟ್ಟಿಕೊಂಡ ಕಾಲವದು, ಅದರ ಸಂಪಾದಕರಾದ ಇ. ಆರ್. ಸೇತೂರಾಂ ಹಾಗೂ ಮುಂದೆ ಎಂ. ಬಿ. ಸಿಂಗ್ ಅವರಿಂದ 'ಒಂದು ಕಥೆ ಕಳಿಸಿ' ಎಂದು ಬರುವ ಪತ್ರಗಳೂ ಕಥೆ ಬರೆವ ಆಸಕ್ತಿಗೆ ಪೂರಕವಾದುವು. ವೈಯಕ್ತಿಕವಾಗಿಯೂ ನನಗೆ ಕಥಾರಚನೆ ಹೆಚ್ಚು ಆಕರ್ಷಕವೆನಿಸಿತು. ಅಷ್ಟೇ ಅಲ್ಲ, ವಿಸ್ತಾರವಾಗಿ ಕಾದಂಬರಿಯೊಳಗಿನ ಜೀವಜಗತ್ತಿನಲ್ಲಿ ದೀರ್ಘಕಾಲ ಒಡನಾಡುವುದೂ, 'ಅಂತರ ಮೇಲಿದ್ದಂತೆ' ಇರುವುದೂ, ನನ್ನ ವಾತಾವರಣದಲ್ಲಿ ಕಷ್ಟವೇ ಇತ್ತು. ಸದಾ ವರ್ತಮಾನದಲ್ಲಿ ಎಚ್ಚರದಲ್ಲಿ ಇದ್ದೇ ಇರಬೇಕಾದ ವಾತಾವರಣವದು. ಆದರೂ ಅನಿಸುತ್ತದೆ, ಕಾದಂಬರಿಯನ್ನು ಬರೆಯಲೇ ಬೇಕೆಂದು ತೀವ್ರವಾಗಿ ಅನಿಸಿದ್ದರೆ ಸಿದ್ಧ ವಾತಾವರಣವನ್ನೇ ತುಸು ಅತ್ತಿತ್ತ ಒತ್ತಿ ಹೇಗೆ ಎಡೆಮಾಡಿಕೊಳ್ಳಬಹುದೆಂಬ ಉಪಾಯವೂ ನನಗೆ ಹೊಳೆಯುತ್ತಿತ್ತು. ಆ ಹಂಬಲದ ತೀವ್ರತೆಯಲ್ಲೇ ಎಲ್ಲೋ ಕೊರತೆಯಾಯ್ತು ಅಂತ ಒಮ್ಮೊಮ್ಮೆ, 'ಮತ್ತೇನಲ್ಲವೆ. ನಿನಗೆ ಸಿಕ್ಕ ಅವಕಾಶದಲ್ಲಿ ಇಷ್ಟೇ ಸಾಧ್ಯ' ಅಂತಲೂ. ಈ ಎರಡೂ ಕೂಡ ಸತ್ಯವೇ ಇರಬೇಕು.

ಇನ್ನು, ಅನುಕೂಲವೆಂದರೆ ಬೇಗ ಮುಗಿಯುತ್ತದೆ ಎಂಬುದಷ್ಟೆ. ಆದರೆ ಬೇಗ ಮುಗಿಯುವುದು ಕಥೆಯೊಂದು ನೂಲೆಳೆಯಂತೆ ಮುಂದರಿದಾಗ ಮಾತ್ರ, ಒಮ್ಮೊಮ್ಮೆ ಬರೆದದ್ದು ಸಮಾಧಾನ ತಾರದೆ, ಹೇಳಹೊರಟದ್ದು ಇದಲ್ಲ ಇದಲ್ಲ ಅನಿಸುತ್ತ ಪುಟಗಟ್ಟಲೆ

ಬರೆದು ಕಾದಂಬರಿಯಷ್ಟು ದೀರ್ಘದಾರಿ ಸವೆದು ಅಂತಿಮವಾಗಿ, ಅದು ಒಂದು ಸಣ್ಣ ಕತೆಯಾಗಿ ಸಾಂದ್ರಗೊಳ್ಳುವುದಿದೆ. ಸವಾಲು ಎದುರಾಗುವುದು – ಇಲ್ಲಿ. ಜಾಳು ಜಾಳಾಗಿ ಅತ್ತ ಕಾದಂಬರಿಯೂ ಅಲ್ಲ ಇತ್ತ ಕತೆಯೂ ಅಲ್ಲದಂತಹ 'ಸುರುಪ'ದಲ್ಲಿರುವ ಬರಹವನ್ನು ಸಣ್ಣಕತೆಯ ರೂಪವಾಗಿ ಒಗ್ಗೂಡಿಸುತ್ತೀ ಹೇಗೆ ಎಂಬಲ್ಲಿ. ಎದುರಾಗುವ ಹಲವು ಸವಾಲುಗಳಲ್ಲಿ ಇದು ಒಂದು ಉದಾಹರಣೆ, ಅಷ್ಟೆ.

3. ಕಥೆಯೊಂದು ಸೃಷ್ಟಿಯಾಗುವಾಗ ನಿಮ್ಮ ಮನಸ್ಥಿತಿ ಹೇಗಿರುತ್ತದೆ? ಕಥೆಯ ರಚನೆಗೆ ಸಿದ್ಧತೆ ಮಾಡಿಕೊಳ್ಳುತ್ತೀರಾ? ಕಥನಕಲೆಗೆ ಪರಿಶ್ರಮ ಬೇಕೆ?

ಮನಸ್ಥಿತಿಯ ಕುರಿತು ಹೇಗೆ ಹೇಳುವುದು. ಒಳಗೇ ನಡೆವ ಚಿಂತನೆಗಳು, ಕಂಡ ಉಂಡ ನೋವು ನಲಿವುಗಳು ಚಿತ್ರಗಳು ಬದುಕುಗಳು ಚಕಮಕಿಗಳು ಪ್ರಸಂಗಗಳು ವ್ಯಕ್ತಿತ್ವಗಳು ನೂರಾರು –ಕೆಲವು ಸುಪ್ತವಾಗಿದ್ದು ಧಡ್ಡೆಂತ ಮರುಕಳಿಸುವ, ಪ್ರಕರಣವೊಂದು ದಿಢೀರನೆ ಇನ್ನಾವುದೋ ಪ್ರಕರಣಕ್ಕೆ ತಾಳೆ ಹಾಕಿಕೊಂಡು ಕಥಾನಕವಾಗಿ ಕಣ್ಣಿಗೆ ಕಟ್ಟುವ, ಇನ್ನು ಕೆಲವು ದಿನಗಟ್ಟಲೆ ತೀವ್ರವಾಗಿ ಕಾಡುವ, ಕನಲಿಸುವ, ಆವರಿಸಿಬಿಡುವ ಮನಸ್ಥಿತಿಯದು. ಸಿದ್ಧತೆಯೂ ಇದುವೇ. ಇಂಥ ಒಂದು ಮನಸ್ಥಿತಿಯಲ್ಲೇ ಬರಹದ ಸಾಲು ಹೊರ ಹೊರಟುಬಿಡುತ್ತದೆ. ಪರಿಶ್ರಮ ಬೇಕೇ ಬೇಕು, ಇದಕ್ಕೆ ಎರಡು ಮಾತಿಲ್ಲ. ಇವನ್ನೆಲ್ಲ ಬರಹದಲ್ಲಿ ಕಟ್ಟಿಡುವ ಏಕೋದ್ದೇಶದಿಂದ ಒಂದೆಡೆ ಸ್ಥಿರವಾಗಿ 'ಕುಳಿತುಕೊಳ್ಳು'ವುದೇ ಪ್ರಥಮ ಪರಿಶ್ರಮ.

4. ಸ್ತ್ರೀವಾದದ ಕುರಿತು ನಿಮ್ಮ ಅಭಿಪ್ರಾಯವೇನು? ಸ್ತ್ರೀವಾದಿ ಚಿಂತನೆಗಳು ಮಹಿಳಾ ಸಾಹಿತ್ಯದ ವ್ಯಾಪ್ತಿಯನ್ನು ಹೆಚ್ಚಿಸಿವೆಯೇ?

ಅಲಕ್ಷಿತತೆಯಿಂದ ಎಚ್ಚರಗೊಂಡು 'ಅಹಮಸ್ಮಿ' ಎಂದು ಆತ್ಮವಿಶ್ವಾಸದಿಂದ ಎದ್ದು ಬರುವುದು, ವಿಸ್ಮರಣೆಗೊಳಗಾದ ತನ್ನ ಸ್ಥಾನವನ್ನು ಸ್ಪಷ್ಟ ಪಡಿಸಿ ಮರು ಗಳಿಸಿಕೊಂಡು ದೃಢವಾಗುವುದು – ಆಪ್ಯಾಯಮಾನ ವಿಚಾರ, ನಿಸ್ಸಂಶಯ. ಸ್ತ್ರೀ ಅಸ್ಮಿತೆ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕ ವಾಗಿಯೋ ಮಹಿಳಾ ಬರಹಗಳನ್ನು ಗಾಢವಾಗಿ ಪ್ರಭಾವಿಸಿದೆ; ಆಗಲೇ ಹೇಳಿದಂತೆ 'ಸ್ತ್ರೀವಿಶಿಷ್ಟ ಸಂವೇದನೆ/ಅನುಭವ'ಗಳನ್ನು ಸ್ವಂತ ಛಾಪಿನಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನೂ ಈ ಮೂಲಕ ಅಧಿಕೃತತೆ ಮತ್ತು ಅಧಿಕ ವ್ಯಾಪ್ತಿಯನ್ನೂ ದಕ್ಕಿಸಿಕೊಟ್ಟಿದೆ.

5. ಲೇಖಕಿಯ ಬದುಕು, ಅವಳ ಕೌಟುಂಬಿಕ ಜೀವನದ ಸ್ಥಿತಿಗತಿಗಳು, ಅವಳ ಆರ್ಥಿಕ ಸ್ಥಿತಿ ಅವಳ ಬರವಣಿಗೆಯ ರೀತಿಯನ್ನು, ವಿನ್ಯಾಸ ವಸ್ತುಗಳನ್ನು ಪ್ರಭಾವಿಸುತ್ತವೆಯೇ?

ಖಂಡಿತವಾಗಿಯೂ. ಪ್ರಭಾವಿಸುತ್ತವೆ, ಅದಕ್ಕಿಂತ ಹೆಚ್ಚು ಅವಳ ಕೆನ್ವಾಸನ್ನು ವಿಸ್ತರಿಸುತ್ತವೆ. ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಅವಳ ನೆರವಿಗೆ ನಿಲ್ಲುತ್ತವೆ. ಸಮಾಜವನ್ನೂ ಬದುಕನ್ನೂ ಅರಿಯುವಲ್ಲಿ ಅವಳನ್ನು ಇನ್ನೂ ಚೆನ್ನಾಗಿ ಸಜ್ಜುಗೊಳಿಸುತ್ತವೆ.

6. ಬರೆಯುವಾಗ ನೀವು ಹೆಣ್ಣು ಎಂಬ ಕಾರಣದಿಂದ ಸಾಮಾಜಿಕ ವಿಧಿ ನಿಷೇಧಗಳು ನಿಮ್ಮ ಲೇಖನಿಯನ್ನು ನಿಯಂತ್ರಿಸುತ್ತವೆಯೇ?

ಒಮ್ಮೆ ಒಂದು ಕಲಾಪ್ರಕಾರದ ಒಳ ಬಂದಮೇಲೆ ನಮಗನಿಸಿದ್ದನ್ನು ಪ್ರಕಟಗೊಳಿಸಲು ನಾವು ಸ್ವತಂತ್ರರು, ನಿಜವೆ. ಆದರೆ ಮಿತಿ ಇದೆ. ನಾವು, ನಾವು ಮಾತ್ರವೇ ಅಲ್ಲವಲ್ಲ. ಮಾತಾಡಲು ಬರುತ್ತದೆಂತ ಮನಸ್ಸಿಗೆ ಬಂದದ್ದನ್ನೆಲ್ಲ ಆಡಿಬಿಡುತ್ತೇವೆಯೆ? ಮಾತುಗಾರಿಕೆ ಕಲೆಯಾಗುವುದೇ ಇತಿಮಿತಿ, ಗತಿ ಅಥವಾ ಸಾಗುವ ದಾರಿ ವೈಖರಿಯ



ವಿವೇಕದಲ್ಲಿ. ಪ್ರಾಯಶಃ ಮಾತು ಜ್ಯೋತಿರ್ಲಿಂಗವೆನಿಸುವುದೂ ಸ್ಫಟಿಕ ಶಿಲೆಯ ಹೋಲಿಕೆ ಪಡೆವುದೂ ಆ ವಿವೇಕದಲ್ಲಿ ಹೊಮ್ಮಿದಾಗ ಮಾತ್ರ. ವಿಧಿನಿಷೇಧಗಳು ಇಂತು ಅವರವರ ಸಮಾಜಕ್ಕೆ ತಕ್ಕಂತೆ ಸುಪ್ತವಾಗಿ ಕೆಲಸ ಮಾಡಿಯೇ ಮಾಡುತ್ತವೆ. ಅದಕ್ಕೆ ಮಹಿಳೆಗೊಂದು ಪುರುಷರಿಗೊಂದು ಎಂಬ ತಾರತಮ್ಯವಿಲ್ಲ. ತಾರತಮ್ಯವೇನಿದ್ದರೂ ಅದು ಕೃತಕವೆಂಬುದು ಈಗ ಸರ್ವವಿದಿತ. ಅಷ್ಟರಮಟ್ಟಿಗೆ ಅದು ನನ್ನ ಲೇಖನಿಯನ್ನೂ ನಿಯಂತ್ರಿಸಿರಬಹುದು. ಹಿನ್ನೆಲೆಯಲ್ಲಿ ನನ್ನೊಳಗಿರುವ ನಾನೇ ನಾನು ಬೆಳೆದು ಬಂದ ಹಾಗೂ ಬದುಕುತ್ತಿರುವ ಸಮಾಜವನ್ನು ಎಷ್ಟು ಮೀರಬಹುದು/ಬಾರದು ಎಂದು ನನಗೇ 'ತಿಳಿ ಹೇಳು'ತ್ತಿರಬಹುದು. ಜೊತೆಗೆ ಆ 'ನಾನೇ' ವಿಧಿನಿಷೇಧಕ್ಕೆ ಅಗೌರವವನ್ನೂ ತೋರದೆ ಅದನ್ನು ಮೀರಿ ಹೇಳಲೇ ಬೇಕೆನಿಸುತ್ತಿರುವ ವಿಚಾರವನ್ನು ಯಾವ ಪರಿಯಲ್ಲಿ ಹೇಗೆ ಹೇಳಬಹುದೆಂಬ ಮಾರ್ಗವನ್ನೂ ಹೊಳೆಸಬಹುದು. ಲೇಖನಿಯ ಯಶಸ್ಸು ಇರುವುದೂ 'ಏನು' ಹೇಳಲಿದೆಯೋ ಅದನ್ನು 'ಹೇಗೆ' ಹೇಳುತ್ತಿದೆ ಎಂಬಲ್ಲಿ ತಾನೆ?

7. ಸಾಹಿತ್ಯದಿಂದ ಸುಧಾರಣೆ ಸಾಧ್ಯ ಎಂದು ನಿಮಗನಿಸುತ್ತದೆಯೆ?

ಇಲ್ಲ ಎಂದು ಸಂಪೂರ್ಣ ನಕಾರ ಎತ್ತಲಾರೆ. ಸಾಧ್ಯ ಎಂದು ಖಡಾಖಂಡಿತವಾಗಿಯೂ ಹೇಳಲಾರೆ. ಸಮಾಜದ ಮೇಲೆ ನೇರವಾಗಿಯಲ್ಲವಾದರೂ ಅದರ ದೀರ್ಘಕಾಲೀನ ಮತ್ತು ಅಗೋಚರ ಪ್ರಭಾವವನ್ನು ಅಲ್ಲಗಳೆಯಲಾಗದು.

8. ಕಳೆದ ನಾಲ್ಕು ದಶಕಗಳಿಂದ ನೀವು ಬರೆಯುತ್ತಿದ್ದೀರಿ. ಲೇಖಕಿಯರ ಬರವಣಿಗೆಯ ಪರಿಸರ ಅಂದಿಗೂ ಇಂದಿಗೂ ಬದಲಾಗಿದೆಯೆ?

ಬದಲಾಗಿದೆ. ಅವಳ ಜಗತ್ತು ವಿಸ್ತರಿಸಿದೆ. ಇಂದು ಅವಳು ಹೆಚ್ಚು ಶಿಕ್ಷಿತಳಾಗುತಿದ್ದಾಳೆ. ಮನೆ ಮಾತ್ರವಲ್ಲದೆ ಅವಳ ದುಡಿಮೆಯ ಕ್ಷೇತ್ರಗಳೂ ಹೆಚ್ಚಿವೆ. ಮಹಿಳೆ ಬರೆಯುವುದು ಎಂದರೆ ಹೊರ ಜಗತ್ತಿಗೆ ತನ್ನ ಭಾವನೆಗಳನ್ನು ತಿಳಿಯಪಡಿಸುವುದು, ವಿಶೇಷವೆನಿಸಿದ್ದ ಕಾಲದಿಂದ ವಿಶೇಷ ಅಲ್ಲದ ಕಾಲಕ್ಕೆ ತಲುಪಿದೆ. ಮಾಧ್ಯಮಗಳ ಪಾಲೂ ಇಲ್ಲಿ ಗಣನೀಯ. ಈಗ ಆ ವಿಶೇಷದ ಒತ್ತು ಅವಳ ದನಿ ಯಾವ ಸಮುದಾಯ ಮೂಲದಿಂದ, ಯಾವ ನೆಲೆಯಿಂದ ಕೇಳಿಬರುತ್ತಿದೆ ಎಂಬಲ್ಲಿಗೆ ದಾಟಿದೆ. ಇನ್ನೂ ಕೇಳಿಲ್ಲದ ಸಮುದಾಯಗಳು, ನೆಲೆಗಳು, ಮೂಕಮೂಲೆಗಳು, ಒತ್ತಿಟ್ಟ ದನಿಗಳು, ಹೊರಟೇ ಇಲ್ಲದ ಆಲಾಪಗಳು ಎಷ್ಟಿವೆ! ಈಗ ಈಗ ಮೆಲ್ಲಗೆ ನಡೆ ಆರಂಭಿಸಿದವರಲ್ಲವೆ ನಾವು?

9. ನಮ್ಮ ಬಹಳಷ್ಟು ಲೇಖಕರು ತಮ್ಮ ಕೃತಿಗಳಲ್ಲಿ ಚಿತ್ರಿಸುವ ಸ್ತ್ರೀಯರು ಬೌದ್ಧಿಕವಾಗಿ ಸ್ವತಂತ್ರವಾದ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ. ಅವರಿಗೆ ಹೆಣ್ಣಿನ ಶರೀರ ಅಥವಾ ಹೆಣ್ತನವೇ ಮುಖ್ಯವೆನಿಸುತ್ತದೆ. ಈ ಕುರಿತು ನಿಮ್ಮ ಪ್ರತಿಕ್ರಿಯೆ ಏನು?

ಸ್ತ್ರೀಎಚ್ಚರ ಅಥವಾ ಸ್ತ್ರೀವಾದ ಹುಟ್ಟಿದ ಹಲವು ಕಾರಣಗಳಲ್ಲಿ ಇದೂ ಒಂದು. ಇದು ಲೇಖಕಿಯ ಜವಾಬ್ದಾರಿಯ ಕೈಕಂಬಗಳಲ್ಲೊಂದು. ಅಷ್ಟೇ ಅಲ್ಲ, ಇವತ್ತಿನ ಹೆಣ್ಣಿನ ಹೊಣೆಗಾರಿಕೆಯ ಸೂಕ್ಷ್ಮ ಸೂಚನೆ ಕೂಡ. ವಿಷಾದವೆಂದರೆ ದೇಹವೆಂಬ ಸಿರಿಯೇ ಶತ್ರುವಾಯಿತೆ ಎಂದು ಚಿಂತಿಸುವ ಹೊತ್ತಿನಲ್ಲಿ ದೇಹವೆಂಬುದು ಕೇವಲ ಸಂಪತ್ತು ಮಾತ್ರವೋ ಎಂಬಂತೆ ಹೆಣ್ಣೇ ಅದನ್ನು ಬಂಡವಾಳ ಮಾಡಿಕೊಳ್ಳುವ ಯುಗವೂ ನಮ್ಮ ಮುಂದೆಯೇ ತೆರೆದುಕೊಳ್ಳುತ್ತಿದೆ. ನಿಮ್ಮ ಪ್ರಶ್ನೆಯಲ್ಲಿರುವಂಥ ಗಂಡಿನ ದಾಳಕ್ಕೆ ತಕ್ಕಂತೆ ಕುಣಿದೋ, ಅವನದೇ ದಾಳದಿಂದ ಕುಣಿಸಿಯೋ ಸ್ವಂತ ಬದುಕನ್ನು ಕಟ್ಟುವ ವರ್ಗ ಹೊಟ್ಟೆಪಾಡಿಗಾಗಿ ಹೇಗೂ ಆಯಿತು, ಮೋಜು ಹಾಗೂ ಸ್ವಚ್ಛಂದದ ನೆಪದಲ್ಲಿಯೂ ಬೆಳೆಯುತ್ತಿದೆಯಲ್ಲ; ಹೇಗೆ, ಮುಂದೆ ಹೇಗೆ, ಇದು ತಲುಪುವುದೆಲ್ಲಿಗೆ – ದುಗುಡವಾಗುತ್ತಿದೆ. ಸವೆಸವೆದು ಇಲ್ಲಿಯವರೆಗೆ ಬಂದು ನಿಂತ ಸ್ತ್ರೀವರ್ಗದ ಶ್ರಮವೆಲ್ಲ ವ್ಯರ್ಥವಾಗಲಿಕ್ಕಿಲ್ಲವಷ್ಟೆ? ಆತಂಕ. ಹಾಗಾಗದು ಎಂಬ ಭರವಸೆಯ ಆವಾಹನೆ.

10. 'ಹೆಣ್ಣಿನ ಭಾಷೆ' ಎಂಬುದೊಂದು ಇದೆಯೆ?

ಹೂಂ, ಅದು ಸಾಧ್ಯವಾದಷ್ಟೂ ಅನುನಯದ, ಅನುಸಂಧಾನದ ಭಾಷೆ. ಉಡಾಫೆ ದರ್ಪದ ಎದುರು ಜಾಣ್ಮೆಯ ಮೌನದ ಭಾಷೆ. ತನ್ನ ಚೌಕಟ್ಟಿನಲ್ಲೇ ಕ್ರಿಯಾಶೀಲವಾಗಿರುವುದೇ ಅವಳ ಭಾಷೆ.

11. ಎಂಬತ್ತರ ದಶಕದಲ್ಲಿ ಲೇಖಕಿಯರದು 'ಸೀಮಿತ ಜಗತ್ತು' ಎಂದು ಹೇಳುತ್ತಿದ್ದ ವಿಮರ್ಶಕರು, ಲೇಖಕರು ಇಂದು 'ಸೀಮಿತ ಭಾವಕೋಶದಲ್ಲಿ' ವಿಹರಿಸುವ ಲೇಖಕಿಯರನ್ನು ಮೆಚ್ಚಿಕೊಳ್ಳುತ್ತಿರುವುದು ವಿಪರ್ಯಾಸವಲ್ಲವೆ?

ಬರೆಯಲು ಹುರುಪು ಬರಲಿ ಅಂತಿರಬಹುದು, ಇಂಥ ಇನ್ನೂ ಬೇರೆ ಕಾರಣಗಳು ಇರಬಹುದು? ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದೇಕೆ?

12. ಸ್ತ್ರೀಯ ಬೌದ್ಧಿಕ ಸಾಧನೆಗೆ 'ಕುಟುಂಬ ತೊಡಕು' ಎಂಬ ಹೇಳಿಕೆಯನ್ನು ನೀವು ಒಪ್ಪುತ್ತೀರಾ?

ಥಟ್ಟನೆ ಹೇಳ ಬೇಕೆಂದರೆ –ಇಲ್ಲ. ಒಪ್ಪುವುದಿಲ್ಲ. ಕುಟುಂಬ ಯಾವತ್ತೂ ತೊಡಕಲ್ಲ. ಆದರೆ ಅವರವರ ಸಂದರ್ಭಕ್ಕೆ ತಕ್ಕಂತೆ ಉತ್ತರ ಬೇರೆಯಿರಲೂ ಸಾಧ್ಯ. ಉಳಿದವರಿಗೆ ಹೇಗೋ; ನನಗೆ ದಕ್ಕಿದ ಕುಟುಂಬ ಪರಿಸರ ನಾವಿರುವ ಪ್ರಪಂಚದ ಸಣ್ಣ ರೂಪ. ನನಗಂತೂ ಅದು ಪೂರಕ. ಅದಿಲ್ಲದೆ ಇರುವ ಇರುವಿಕೆಯನ್ನು ನಾನು ಊಹಿಸಲೂ ಆರೆ.

13. ಲೇಖಕಿಯರ ಕಥೆಗಳಲ್ಲಿ ವೈಯಕ್ತಿಕತೆಯನ್ನೂ ಲೇಖಕರ ಕಥೆಗಳಲ್ಲಿ ಲೋಕಾನುಭವವನ್ನೂ ಆರೋಪಿಸುವ ಹುಡುಕುವ ಪ್ರವೃತ್ತಿಯ ಕುರಿತು ನಿಮ್ಮ ಅಭಿಪ್ರಾಯ?

ಉದಾಸೀನವೇ ಮದ್ದು.

14. ಸ್ತ್ರೀವಾದಿ ಚಿಂತನೆಗಳು ಈಗ ತಮ್ಮ ತೀವ್ರತೆಯನ್ನು ಕಳೆದುಕೊಳ್ಳುತ್ತಿವೆಯೇ?

ಸ್ತ್ರೀವಾದಿ ಚಳವಳಿಯ ಕಾವಿನ 'ಗಾವು' ಕಡಿಮೆಯಾಗಿದೆ, ನಿಜ. ಆದರೆ ಆ ಕಾವು ವಿಸ್ತರಿಸಿದೆ. ಅದರ ವ್ಯಾಪ್ತಿ ಈಗ ಕೇವಲ ಸ್ತ್ರೀವಾದಕ್ಕೆ ಮಾತ್ರ ಸೀಮಿತಗೊಳ್ಳದೆ ಜೀವನದ ಎಲ್ಲ ರಂಗದಲ್ಲೂ ಇರಬೇಕಾದ ಸ್ತ್ರೀ ಅಸ್ಮಿತೆಯ ಕಡೆ ಚಾಚಿಕೊಂಡಿದೆ. ವಿಶಾಲಾರ್ಥ ಪಡೆದಿದೆ. ಹಿಂದೆ ಸಮಾನತೆಯ ಕಡೆ ಇದ್ದ ತುಡಿತ ಆ 'ಸಮಾನತೆ' ಎಲ್ಲಿ ಎಂಬ ಕುರಿತು ಸ್ಪಷ್ಟ ನಿಲುವು ತಳೆದು, ಉಳಿದಂತೆ ಪುರುಷನಿಗಿಂತ ಸ್ತ್ರೀ ಭಿನ್ನ ಎಂಬ ಆತ್ಮ ಸಮ್ಮಾನದ ಪ್ರಜ್ಞೆಯ ವಿವಿಧ ಆಯಾಮಗಳ ಚಿಂತನೆ ನಡೆದಿದೆ.

15. ಸಾಹಿತ್ಯಕ ಚಳವಳಿಗಳು ನಿಮ್ಮ ಚಿಂತನೆಯ ಮೇಲೆ ಪ್ರಭಾವ ಬೀರಿವೆಯೆ?

ಪರೋಕ್ಷವಾಗಿ ಬೀರಿರಲೇ ಬೇಕು. ನಮಗೇ ಅರಿವಿಲ್ಲದಂತೆ ನಮ್ಮ ಕಾಲದ ಚಳವಳಿಗಳು ಚಿಂತನೆಯ ಮೇಲೆ ತಮ್ಮದೇ ಪ್ರಭಾವ ಬೀರಿಯೇ ಬೀರುತ್ತವೆಂದು ನನ್ನ ನಂಬಿಕೆ. ಎಲ್ಲಿ ಹೇಗೆ ಎಂದು ಸ್ಪಷ್ಟವಾಗಿ ವಿಂಗಡಿಸಿ ಹೇಳಲಾರದ ಪ್ರಭಾವವದು.

16. ನಿಮ್ಮ ಬರವಣಿಗೆಯನ್ನು ಪ್ರಭಾವಿಸಿದ ಹಿರಿಯ ಲೇಖಕ/ಲೇಖಕಿಯರು ಯಾರು?

ಕನ್ನಡದ ಎಲ್ಲ ಪ್ರಮುಖ ಲೇಖಕ/ಲೇಖಕಿಯರ ಬರವಣಿಗೆಗಳು ಒಂದಲ್ಲ ಒಂದು ರೀತಿಯಲ್ಲಿ ನನ್ನ ಬರವಣಿಗೆಯನ್ನು ಪ್ರಭಾವಿಸಿವೆ.

17. ಲೇಖಕಿಯಾಗಿ ನಿಮ್ಮನ್ನು ರೂಪಿಸಿದ ಪರಿಸರ ಯಾವುದು?

ನನ್ನೂರು ಕುಂದಾಪುರ, ಅದರ ಆಸುಪಾಸು. ಅಲ್ಲಿನ ಅರೆಗ್ರಾಮೀಣ ವಾತಾವರಣ, ವಿಶಿಷ್ಟ ಕನ್ನಡದ ಜೊತೆಗೇ ಬೆರೆತ ನಡೆನುಡಿ, ಜನ, ಜೀವನ, ಬಂಧು ಬಾಂಧವರಿಂದ ತುಂಬಿರುತ್ತಿದ್ದ ನಮ್ಮ ಮನೆಯ ಪರಿಸರ, ಅಲ್ಲಿ ಹತ್ತಿರದಿಂದ ಕಂಡ ಕೆಲ ಬದುಕುಗಳು, ಅಂದಿನ ಕಾಲ–ಹೀಗೇ, ಅನೇಕ. ಮೂಲ ತಳಹದಿಯನ್ನು ಹೇಳುತ್ತಿದ್ದೇನೆ.

18. ಜಾಗತೀಕರಣದ ವಿದ್ಯಮಾನಗಳಿಗೆ ಲೇಖಕಿಯರು ಲೇಖಕರಂತೆ ತಮ್ಮ ಕಥೆಗಳ ಮೂಲಕ ಪ್ರತಿಕ್ರಿಯಿಸಿಲ್ಲ, ಇದಕ್ಕೆ ಕಾರಣವೇನಿರಬಹುದು?

ಅನುಭವ ಹರಳುಗಟ್ಟುವುದಕ್ಕಾಗಿ ಕಾಯುತ್ತಿರಬಹುದು. ❑

"ಸ್ತ್ರೀಯರು ಇಂದು ನಿರ್ವಹಿಸುತ್ತಿರುವ ಕೌಟುಂಬಿಕವಾದ ಸಾಂಪ್ರದಾಯಿಕ ಪಾತ್ರಗಳು ಪತ್ನಿ, ತಾಯಿ, ಗೃಹಿಣಿ ಮುಂತಾದವು, ಚರಿತ್ರೆಯ ಯಾವುದೋ ಒಂದು ಘಟ್ಟದಲ್ಲಿ ಹುಟ್ಟಿಕೊಂಡವು. ಆದ್ದರಿಂದ ಅವು ಮುಂದೆ ಭೌತಿಕ ಪರಿಸ್ಥಿತಿಗಳು ಬದಲಾದಾಗ ತಾವೂ ಬದಲಾಗಬಲ್ಲವು. ಈ ಸ್ಥಿತಿಗಳು, ಮೌಲ್ಯಗಳು ಎಂದಿನಿಂದಲೂ ಹೀಗೆ ಇವೆ, ಇರುತ್ತವೆ. ಇವು ಚಾರಿತ್ರಾತೀತ ಸಂಗತಿಗಳೆಂಬಂತೆ ಒಪ್ಪಿ ಚರ್ಚಿಸುವ ಸ್ತ್ರೀ ಸಮೃದ್ಧಿವಾದಿಗಳ ವಿಚಾರಗಳನ್ನು ತೀವ್ರವಾದ ಚರ್ಚೆಗೆ, ವಿಮರ್ಶೆಗೆ ಒಳಗಾಗಿಸಿದವರು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು. ಉತ್ಪಾದನೆಯ ವ್ಯವಸ್ಥೆಗೂ ಸಂತಾನೋತ್ಪಾದನೆಗೂ ಮಹಿಳೆಯ ಶೋಷಣೆಗೂ ಪರಸ್ಪರ ಚಾರಿತ್ರಿಕ ಸಂಬಂಧವಿದೆ ಎಂದು ಈ ಮಾರ್ಕ್ಸ್‌ವಾದಿಗಳು ಗುರುತಿಸಿದರು..."

ಡಾ॥ ಬಿ.ಎನ್. ಸುಮಿತ್ರಾಬಾಯಿ

(ಸ್ತ್ರೀವಾದದ ಮುಖ್ಯ ತಾತ್ತ್ವಿಕ ಘಟಕಗಳು ಮತ್ತು ಅವುಗಳ ಇಂದಿನ ಪ್ರಸ್ತುತತೆ' ಲೇಖನದಿಂದ)

ಚರಿತ್ರೆ ಮತ್ತು ಕಥೆಗಳ ನಡುವೆ : 'ಮುಂತಾದ ಕೆಲ ಪುಟಗಳು'



● *ಡಾ. ಬಿ.ಎನ್. ಸುಮಿತ್ರಾಬಾಯಿ*

ವ್ಯಕ್ತಿಗಳು ಬಾಳಿ ಬದುಕಿ ಹೋದ ಬಳಿಕ ಅಂಥ ಬದುಕನ್ನು ಚರಿತ್ರೆಯ ಹಾಗೆ ಕಟ್ಟುವುದು ಎಂದರೇನು? ನಡೆದ ಸಂಗತಿಗಳನ್ನು ನಡೆದ ಹಾಗೆಯೇ ಹೇಳುವುದೆ? ಅಥವಾ ಆಯಾ ವ್ಯಕ್ತಿಗಳು ತಮ್ಮದೇ ಭಾವಧಾಟಿಗಳಲ್ಲಿ ತೆರೆದಿಡುವ ಅನುಭವಗಳನ್ನು ಆಲಿಸುತ್ತ ಆ ಎಲ್ಲ ಹಾವಭಾವ, ದನಿಯ ಏರಿಳಿತ, ಅಭಿನಯಾಂಶಗಳ ಸಮೇತವಾಗಿ ಮತ್ತೆ ಕಥಿಸುವುದೆ? ಎದುರೆದುರಲ್ಲಿ ಕುಳಿತು ಮನಗೊಟ್ಟು ಆಲಿಸಿದ್ದನ್ನು




ಆಮೇಲೆ ಕಲ್ಪನೆಯಲ್ಲಿ ನೆನೆಯುತ್ತ ಪದಗಳಲ್ಲಿ ಹಿಡಿದಿಡುವುದೆ? ಇದು ಸರಿ ಎಂದಾದರೆ ಕಥೆಯ ಕಥನಕ್ಕಿಂತ ಈ 'ಚರಿತ್ರೆ' ಹೇಗೆ ಭಿನ್ನ? ಇಂತಹ ಪ್ರಶ್ನೆಗಳು ವೈದೇಹಿಯವರ **'ಮುಂತಾದ ಕೆಲ ಪುಟಗಳು'** ಕೃತಿಯನ್ನು ಓದುವಾಗ ನನ್ನಲ್ಲಿ ಏಳತೊಡಗಿದವು.

'ಮುಂತಾದ ಕೆಲ ಪುಟಗಳು' ದಿವಂಗತ ಸರಸ್ವತಿಬಾಯಿ ರಾಜವಾಡೆಯವರ ಬದುಕನ್ನು ಅವರೇ ಕಥಿಸಿದ್ದನ್ನು ಮತ್ತೆ ಕಟ್ಟುವ ಯತ್ನವಾಗಿದೆ. ಸರಸ್ವತಿಬಾಯಿ ರಾಜವಾಡೆ ಕನ್ನಡದ ಮೊದಲ ಹಂತದ ಆಧುನಿಕ ಲೇಖಕಿಯರಲ್ಲಿ ಪ್ರಮುಖರಾಗಿರುವವರು. ಕಥೆಗಾರಿಕೆ, ಪತ್ರಿಕೋದ್ಯಮದ ಸಾಹಸ ಪ್ರಯತ್ನಗಳಿಂದ ಸಮಾಜ ವಿಮರ್ಶೆಯ ಗುಣವಿರುವಂಥ ಅರ್ಥವತ್ತಾದ ಬರಹದಿಂದ ಗಮನ ಸೆಳೆದ ಪ್ರತಿಭಾನ್ವಿತೆ, ಸುತ್ತಲಿನವರನ್ನು ತಿದ್ದಲು, ಅದರಲ್ಲೂ ಮಹಿಳೆಯರ ಆತ್ಮಪ್ರಜ್ಞೆಯನ್ನು ಎಚ್ಚರಿಸಲು ಬರೆದಂಥ ಅತ್ಯಂತ ದಿಟ್ಟವ್ಯಕ್ತಿ ಎಂಬುದಾಗಿ ಕಳೆದ ಮೂರು ದಶಕಗಳಿಂದ ರೂಪುಗೊಂಡಿರುವ ಮಹಿಳಾ ಸಾಹಿತ್ಯ ಚರಿತ್ರೆ ಅವರನ್ನು ಗುರುತಿಸುತ್ತದೆ.

ಒಬ್ಬ ವ್ಯಕ್ತಿಯಾಗಿ ಸರಸ್ವತಿಬಾಯಿ ರಾಜವಾಡೆಯವರದು ಅತ್ಯಂತ ಏರಿಳಿತಗಳಿದ್ದ ಬದುಕಾಗಿತ್ತು. ತುತ್ತು ಅನ್ನಕ್ಕೆ, ಮೈತುಂಬ ಬಟ್ಟೆಗೆ ಗತಿಯಿಲ್ಲದಿದ್ದ ಕಡುಬಡತನದ ಬಾಲ್ಯ, ಅತಿ ವಯಸ್ಕ ಸಿರಿವಂತನ ಕೈಹಿಡಿದು ಚಿನ್ನ, ರೇಷ್ಮೆ, ರತ್ನಗಳ ನಡುವೆ ಝಗ ಝಗಿಸುವ ಯೌವನ, ಬರೆಹದ ಉಜ್ವಲತೆಯಲ್ಲಿ ಬೆಳಗಿದ ಪ್ರೌಢಾವಸ್ಥೆ ಮತ್ತು ಆಧ್ಯಾತ್ಮಿಕತೆಗೆ ಹೊರಳಿ ಹೋದ ವೃದ್ಧಾಪ್ಯ–ಹೀಗೆ ಹಂತಹಂತಗಳಿಗೂ ಬದಲಾದ ಸ್ವರೂಪ ಅವರ ಜೀವನದ್ದು. ತೀಕ್ಷ್ಣವಾದ ಅವರ ವೈಚಾರಿಕ ಪ್ರತಿಭೆ, ಅಷ್ಟೇ ಗಾಢವಾದ ಜೀವನ ಪರತೆಯ ಜೀವಂತಿಕೆ, ಅಂತರ್ಮುಖತೆ, ವೈರಾಗ್ಯ, ದೈವಭಕ್ತಿ, ಅತೀಂದ್ರಿಯ ಮಾನಸಿಕ ಶಕ್ತಿ–ಎಲ್ಲವನ್ನೂ ಜಳಜಳ ಉರಿವ ಜೀವಂತಿಕೆಯಲ್ಲಿ, ಅವೆಲ್ಲದರ ಸಂಕೀರ್ಣತೆಯಲ್ಲಿ ಹಿಡಿದುಕೊಡುವ ಅಪರೂಪದ ಪ್ರಯತ್ನವನ್ನು 'ಮುಂತಾದ ಕೆಲ ಪುಟಗಳು' ಕೃತಿಯಲ್ಲಿ ಮಾಡಿದ್ದಾರೆ. ಇಲ್ಲಿ ಅಬ್ಬ! ಎಂಬ ಬೆರಗು ಹುಟ್ಟಿಸುವ 'ಗಿರಿಬಾಲೆ' ನಮ್ಮೆದುರು ಜೀವಂತವಾಗಿ ಹೊಳೆಯುತ್ತಾರೆ.

ಮಹಾನ್ ಚೇತನಗಳ ಅಪರೂಪದ ಬದುಕಿನ ಅನುಭವಗಳನ್ನು ಅವರೇ ಆಡುಮಾತುಗಳಲ್ಲಿ ಹೇಳಿದಂತೆಯೇ ಬರೆದು ಜೋಡಿಸುವ ವಿಷಯದಲ್ಲಿ ವೈದೇಹಿ ತಮ್ಮದೇ ಆದ ಹಾದಿಯೊಂದನ್ನು ಹಿಂದೆಯೇ ಕಟ್ಟಿಕೊಂಡವರು. ಕೋ.ಲ. ಕಾರಂತ, ಸೇಡಿಯಾಪು ಕೃಷ್ಣಭಟ್ಟ, ಬಿ.ವಿ. ಕಾರಂತರಂಥವರ ಜೀವನ ಚಿತ್ರಣದಲ್ಲಿ ಆಡುಮಾತಿನ ತಿಳಿಗೊಳದಲ್ಲಿ ಮಿಂದು ಅನುಭವಗಳು ಶುಭ್ರವಾಗಿ ಹೊಮ್ಮುವಂತೆ ಮಾಡುವ ಕಲೆಗಾರಿಕೆ ವೈದೇಹಿಗೆ ಕರಗತ. ಅವರು ಹೇಳುತ್ತ ಹೋದುದನ್ನು ತುಂಬು ಗೌರವ,



ಶ್ರದ್ಧೆಗಳಿಂದ ತಮ್ಮ ಒಳಗಿನ ತುಂಟ ಹುಡುಗಿಯ ಮಾಸದ ನೆಗೆಯ ಲೇಪನ ನೀಡಿ ದಾಖಲಿಸುವುದರಲ್ಲಿ ವೈದೇಹಿಗೆ ತುಂಬ ಖುಷಿಯಿದೆ, ಓದಿದ ಯಾರಿಗೇ ಆದರೂ ಇದು ಅರಿವಿಗೆ ಬರುತ್ತದೆ.

ಹಿಂದಿನ ಪೀಳಿಗೆಯ ಲೇಖಕಿಯೊಬ್ಬರ ಬದುಕಿನ ಸಾಧನೆಗಳನ್ನು, ಅವರು ಅಂದಂದು ಎದುರಿಸಿರಬಹುದಾದ ಎಲ್ಲ ತೊಡಕು, ಸಂಭ್ರಮ, ತಳಮಳಗಳ ಸಂವೇದನಾಶೀಲ ನಿರೂಪಣೆಯೊಂದಿಗೆ, ಅವರ ಪರಿಚಯವೇನೂ ಇಲ್ಲದ ಇಂದಿನವರಿಗೆ ತಿಳಿಸಿ ಹೇಳುವ ವೈದೇಹಿ, (ಸ್ವತಃ ಒಬ್ಬ ಲೇಖಕಿಯಾಗಿ) ಹಳೆಯ–ಹೊಸ ಪೀಳಿಗೆಗಳ ಕಥನ ಕಲೆಗೆ ತಾವೇ ಕೊಂಡಿಯೂ ಆಗುತ್ತಾರೆ. ಹಿಂದಿನ ಲೇಖಕಿಯರ ಸೃಷ್ಟಿಶೀಲ ಸಾಮರ್ಥ್ಯದ ಸತ್ತ್ವವನ್ನು ತಮ್ಮದನ್ನಾಗಿಸಿಕೊಂಡು, ಅದರಿಂದ ತನ್ನ ಸ್ವಂತಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುವ ಅತ್ಯಂತ ಮಹತ್ವದ ಪ್ರಯತ್ನವನ್ನು ವೈದೇಹಿ ಅವರ 'ಮುಂತಾದ ಕೆಲ ಪುಟಗಳು' ತೋರಿಸಿಕೊಡಬಲ್ಲದು.

ಕನ್ನಡದ ತುಂಬ ಗಟ್ಟಿಗರಾದ ಬರಹಗಾರರೆಲ್ಲ ತಮ್ಮ ಹಿಂದಿನವರೊಂದಿಗೆ ಸೃಜನಶೀಲ ನೆಲೆಯಲ್ಲಿ ಗುದ್ದಾಡಿದ್ದಾರೆ, ಅವರಿಂದ ಪ್ರಭಾವಿತರಾಗಿದ್ದಾರೆ, ಆ ಪ್ರಭಾವವನ್ನು ಅರಗಿಸಿಕೊಳ್ಳುತ್ತ ತಮ್ಮದೇ ಸ್ವತಂತ್ರ ರಚನಾಕ್ರಮವನ್ನು ರೂಪಿಸಿಕೊಂಡಿದ್ದಾರೆ. ಕಾರಂತರನ್ನು, ಮಾಸ್ತಿಯವರನ್ನು, ಬೇಂದ್ರೆಯವರನ್ನು ಮೀರಿ ಮುಂದಿನವರೂ ಕಥೆ, ಕಾವ್ಯ, ಕಾದಂಬರಿಗಳನ್ನು ಬೆಳೆಯಿಸುತ್ತ ಬಂದಿರುವುದು ಹೀಗೆಯೇ. ಮಹಿಳಾ ಬರಹಗಾರರು ಮಾತ್ರ ಅತ್ತ ಪುರುಷರದೂ ಅಲ್ಲದ, ಇತ್ತ ಹಿಂದಿನ ಮಹಿಳೆಯರದೂ ಆಗಿರದ ಎಡಬಿಡಂಗಿ ದಾರಿಗಳಲ್ಲಿ ಪ್ರತಿಯೊಬ್ಬರೂ ತಮ್ಮದೇ "ಹೆಜ್ಜೆ ಮೂಡದ ಹಾದಿ" ಎಂಬ ಭ್ರಮೆಯಲ್ಲಿ ಬರೆದದ್ದೇ ಹೆಚ್ಚು. ಈ ನಿಟ್ಟಿನಲ್ಲಿ ವೈದೇಹಿಯವರ 'ಮುಂತಾದ ಕೆಲ ಪುಟಗಳು' ನಮಗೆ ಬಹಳಷ್ಟನ್ನು ಕಲಿಸಬಲ್ಲದು. ಏಕೆ ನಮಗೆ ವೈದೇಹಿಯೇ ಅತ್ಯಂತ ಸಶಕ್ತ ಸಾಹಿತ್ಯ ಕೊಡುವ ಮಹತ್ವದ ಲೇಖಕಿಯಾಗಿ ಕಾಣಿಸುತ್ತಾರೆ ಎಂದರೆ ಅವರು ಹಳಬರ ಪರಂಪರೆಯ ಒಳಶಕ್ತಿಯನ್ನು ಗ್ರಹಿಸಿ, ಹೀರಿಕೊಂಡು ತಮ್ಮ ಲೇಖನಿಯಲ್ಲಿ ಅದನ್ನು ಸೊಗಸಾಗಿ ಮತ್ತೆ ಕಟ್ಟಬಲ್ಲರು.

'ಮುಂತಾದ ಕೆಲ ಪುಟಗಳು' ಕೃತಿಯನ್ನು ತೆರೆದಂತೆ, ಗಿರಿಬಾಲೆಯವರು ತಮ್ಮ ಗತಕಾಲವನ್ನು ಕಥಿಸುತ್ತ ಹೋದಂತೆ ವೈದೇಹಿಗೆ ಮೈಯೆಲ್ಲ ಕಿವಿಯಾಗಿಬಿಡುತ್ತದೆ. ಅದೇ ಹೊತ್ತಿನಲ್ಲಿ, ಬಾಳಿನ ಕೊನೆಯ ಹಂತದಲ್ಲಿ ಎತ್ತರದ ಘನ ಗಂಭೀರ ಆಕೃತಿಯಾದ ಸರಸ್ವತಿಬಾಯಿ ವರ್ತಮಾನದಲ್ಲಿ ಕಣ್ಣೆದುರೇ ಕಾಣುತ್ತಲೂ ಇದ್ದಾರೆ. ಹೀಗೆ ಭೂತಕಾಲ ಮತ್ತು ವರ್ತಮಾನಗಳ ನಡುವೆ ಅಗಾಧ ಅಂತರವಿದ್ದರೂ ಲೇಖಕಿಯ ಸಂವೇದನೆ ಸೂಕ್ಷ್ಮವಾಗಿರುವುದರಿಂದ ಒಬ್ಬ ಲೇಖಕಿಯ ಕಥೆ ಆ ಕಾಲದ ಎಲ್ಲ ಮಹಿಳೆಯರ ಸ್ಥಿತಿಗತಿಗಳನ್ನು ಹೇಳಬಲ್ಲ ದನಿಯಾಗುತ್ತದೆ. ಒಬ್ಬ ಲೇಖಕಿಯ 'ಅನನ್ಯ' ವ್ಯಕ್ತಿತ್ವವೊಂದು ಅನಾವರಣಗೊಳ್ಳುವಾಗಲೇ ಸಮಷ್ಟಿಯ ವಾಸ್ತವದ ಮೇಲೆ ಆ ಹಣತೆ ಬೆಳಕು ಬೀರುತ್ತಿರುತ್ತದೆ. ಗತದ ಚರಿತ್ರೆ ಸದ್ಯದ ವರ್ತಮಾನಗಳ ದ್ವಂದ್ವ ವಿನ್ಯಾಸದ ಮೂಲಕ ಎರಡೂ ಕಾಲದ ಮೇಲೆ ಬೆಳಕು ಬೀರುವ ಈ ಕೃತಿ ಹೊಸ್ತಿಲ ಮೇಲಿಟ್ಟ ದೀಪವಾಗಿ ನಮ್ಮ ಒಳಗೂ ಹೊರಗಿನ ಪರಿಸರಕ್ಕೂ ಬೆಳಕಿನ ಬೆಸುಗೆ ನೀಡುತ್ತದೆ.

❑

ದೊಡ್ಡ ನಗರ

ದೊಡ್ಡ ನಗರದ
ಅತಿ ದೊಡ್ಡ ಕಟ್ಟಡದ
ಸಮೀಪದ ಗುಡಿಸಿಲಿನಲ್ಲಿ
ನನ್ನ ವಾಸ
ನನ್ನ ವಯಸ್ಸು ಹನ್ನೆರಡಿರಬೇಕು
ಶಾಲೆ ಬಿಟ್ಟಿದ್ದೇನೆ
ಈಗ ಬದುಕೇ ನನ್ನ ಪಾಠಶಾಲೆ
ಅಮ್ಮನ ಜೊತೆ ಬೀದಿಯಲಿ
ಏನೇನೋ ಮಾರುವೆನು
ಅಬ್ಬಾ! ಕಾರಿನಲ್ಲಿ ಬರುವ ಹೆಂಗೆಳೆಯರು
ಎಷ್ಟೊಂದು ಜಿಪುಣರು!
ಕಡಿಮೆ ಬೆಲೆಗಾಗಿ
ಎಷ್ಟೊಂದು ಗಲಾಟೆ!
ರಾತ್ರಿ ಆಗುತ್ತಲೆ
ದೀಪಗಳ ಝುಗಮಗ
ಬಗೆ ಬಗೆ ತಿನಿಸುಗಳು
ಕರುಗುತ್ತಲಿವೆ ನನ್ನ ಸುತ್ತಲೂ
ಆದರೆ ನನ್ನ ಕೈ ಮಾತ್ರ
ಖಾಲಿ ಕಿಸೆಯಲ್ಲಿ ಸುಡುತ್ತಲಿದೆ

ಓ ಎಷ್ಟು ಸಮೀಪ
ಆದರೂ ಎಷ್ಟೊಂದು ದೂರ!
ಅಮ್ಮ ಹೇಳ್ತಾಳೆ
'ಮಗು ಆಸೆ ಪಡುವ ಹಕ್ಕು ನಮಗಿಲ್ಲ'
ಆದರೆ ಶಾಲೆಯಲ್ಲಿ
'ಸಮಾನ ಹಕ್ಕು' ಎಂದು ಓದಿದ ನೆನಪು
ನಾವು ಬದುಕುವುದು ಯಾರಿಗೂ
ಬೇಡವಾಗಿದೆಯೋ?
ರಾತ್ರಿ ಚುಕ್ಕೆಗಳ ಎಣಿಸುತ್ತಾ
ಕಣ್ಣು ಮುಚ್ಚಿದಾಗ
ಕನಸಿನ ಲೋಕದಲ್ಲಿ
ಎಲ್ಲವೂ ಎಷ್ಟೊಂದು ಸಮೀಪ!
ಕಣ್ಣು ತೆರೆದಾಗ
ಆ ಕನಸುಗಳೆಲ್ಲಾ ಎಷ್ಟೊಂದು ದೂರ !
ಅಮ್ಮ ಹೇಳ್ತಾಳೆ
ಕನಸು ನಮಗಲ್ಲಾ
ಅದಕ್ಕೆ ನಾನೆಂದೆ
ದೇವರು ನಮಗಲ್ಲಾಂತ
ಆದರೆ ದೇವರಿಗೂ, ಅಮ್ಮನಿಗೂ
ಅದು ಎಲ್ಲಿಯ ನಂಟೋ!
ಪಕ್ಕದಲ್ಲೇ ಒಂದು ದೇವಾಲಯ
ಬಾಗುವ ತಲೆಗಳೆಷ್ಟೊ!
ದೇವರು ಎಷ್ಟೊಂದು ಸಮೀಪ
ಆದರೂ ಎಷ್ಟು ದೂರ!

–ಶೋಭಾ ಕುಲಕರ್ಣಿ

ನೀವೂ ಓದಿ

ದಲಿತ ಮಹಿಳೆಯ ಆತ್ಮಕತೆ

● ಡಾ. ವೆಂ. ವನಜ


'ಜೀನ ಅಮುಚ್' ಎಂಬ ಮೂಲದ ಮರಾಠಿ ಕೃತಿ ಶ್ರೀಮತಿ ಬೇಬಿತಾಯಿಯವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ರಚಿಸಿದ್ದು, ದಲಿತ ಮಹಿಳೆಯೊಬ್ಬಳ ಮೊಟ್ಟಮೊದಲ ಆತ್ಮಕತೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಮತ್ತೊಂದು ಹೆಗ್ಗಳಿಕೆಯೆಂದರೆ, ಇದು ಪಂಜಾಬಿ, ಹಿಂದಿ, ಉರ್ದು ಮುಂತಾದ ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲ, ಫ್ರೆಂಚ್, ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ಭಾಷೆಗಳಿಗೂ ಭಾಷಾಂತರ ಗೊಂಡಿದೆ. ಅಲ್ಲದೆ ಕೃತಿಕಾರರು ಮಹಾರಾಷ್ಟ್ರ ಸರಕಾರದ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಒಟ್ಟು ಹನ್ನೊಂದು ಅಧ್ಯಾಯಗಳಿರುವ ಈ ಕೃತಿಯ ಆರಂಭ ಬೇಬಿತಾಯಿಯವರ ಹುಟ್ಟೂರಿನಿಂದಲೇ ಆಗುತ್ತದೆ. ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಪುರಂದರ ತಾಲ್ಲೂಕಿನ ಬೋರಗಾಂವ (ವೀರ ಊರೆಂದೇ ಕೃತಿಯ ಉದ್ದಕ್ಕೂ ಅಭಿಮಾನದಿಂದ ಹೇಳುವ) ಬೇಬಿತಾಯಿಯ ಹುಟ್ಟೂರು. ಇದು ಇವರ ಅಜ್ಜನ ಊರು. ಅಜ್ಜ-ಅಜ್ಜಿಗೆ ಇಬ್ಬರೇ ಹೆಣ್ಣುಮಕ್ಕಳು-ಚಂದ್ರಾಬಾಯಿ ಮತ್ತು ಸುಂದರಾಬಾಯಿ. ಗಂಡುಮಕ್ಕಳಿಲ್ಲದ ಕಾರಣ ಮದುವೆಯಾದ ಹೆಣ್ಣುಮಕ್ಕಳಿಬ್ಬರೂ ತಂದೆಯ ಮನೆಯಲ್ಲೇ ಉಳಿಯುವ, ಅವರ ಮಕ್ಕಳಿಗೂ ಅಲ್ಲೇ ಬೆಳೆಯುವ ಅವಕಾಶ. ತಂದೆ ಪಂಡರಿನಾಥ ಗುತ್ತಿಗೆದಾರ. ಪರವೂರಿನಲ್ಲಿ ವಾಸಿಸುವ ಇವರು ಕರ್ಣನ ಅವತಾರ. ಬಾಬು ಇವರ ಅಣ್ಣ. ಇವನ ನಂತರ ಹುಟ್ಟಿದ ಮೂರು ಹೆಣ್ಣುಮಕ್ಕಳೂ ಒಂದೆರಡು ವರ್ಷಗಳಲ್ಲೇ ತೀರಿಕೊಂಡ ಮೇಲೆ ಅಜ್ಜಿಯ ಹರಕೆಯ ಫಲವಾಗಿ ಬಂದವರೇ ಬೇಬಿತಾಯಿ. ಊರಿಗೆ ಬಂದ ಯಾವುದೋ ಕಾಯಿಲೆ ಇವರಿಗೂ ತಗುಲಿದಾಗ ಉಸಿರು ನಿಂತೇ ಹೋಗಿ ಮತ್ತೆ ಬೆಳಗಾಗುವಷ್ಟರಲ್ಲಿ ಬದುಕಿ ಬಂದ ಘಟನೆಯ ವಿವರಗಳು ಓದುಗರು ಉಸಿರು ಬಿಗಿಹಿಡಿಯುವಂತೆ ಮಾಡುತ್ತದಲ್ಲದೆ, ಅಂದಿನ ಜನರ ಮೌಢ್ಯಕ್ಕೆ, ಅಂಧಾಚರಣೆಗೆ ಕನ್ನಡಿಯಾಗುತ್ತದೆ.

ಒಬ್ಬ ನಿಷ್ಣಾತ ಗುತ್ತಿಗೆದಾರನ, ದಾನಶೂರನ ಮಗಳಾಗಿ, ಕೇರಿಗೆಲ್ಲಾ ಬೇಗಾಬಾಯಿಯಾದ ಪೋರಿ, ಬೆನ್ನಿಗೆ ಬೆಳ್ಳಿಯಗೊಂಡೆ, ಕಾಲಿಗೆ ಗೆಜ್ಜೆ ಮತ್ತು ಕಾಲಬಳೆ, ಮೂಗಿನಲ್ಲಿ ಅರ್ಧ ತೊಲೆಯ ಭಾರಿ ನತ್ತು, ಕಿವಿಗೆ ಓಲೆ, ರೇಷ್ಮೆ ಲಂಗ ಧರಿಸಿ 'ಕೇರಿಯ ಮನೆಗಳೆಲ್ಲಾ ತನ್ನವೇ ಎಂಬ ಧಿಮಾಕಿ'ನಲ್ಲಿ ಬೆಳೆದಳು. ಹಾಗೆ ಬೆಳೆಯುತ್ತಲೇ ಆ ಜನರ ಕಡುಬಡತನವನ್ನು ಕಣ್ಣಾರೆ ಕಂಡಳು: "ಕಲ್ಲು ಮಣ್ಣಿನ ಮನೆ. ಚಿಕ್ಕ ಚಿಕ್ಕ ಜೋಪಡಿ, ಬಾಗಿಲಲ್ಲಿ ನೀರು ಕುಡಿಯಲೆಂದು ಒಂದು ಚಿಕ್ಕಬಾಯಿಯ ಗಡಿಗೆ. ಅದರ ಮೇಲೆ ನೀರು ಕುಡಿಯಲೆಂದು ಇಟ್ಟ ಗೆರಟೆ. ಆ ತೆಂಗಿನ ಗೆರಟೆಗೆ ಮೂರು ತೂತು... ಬಾಗಿಲ ಬದಿಗೆ ಹರಕು ಮುರುಕು ಒಲೆಯಿರುತ್ತಿತ್ತು. ಒಲೆಯ ಬಳಿ ಒಂದೆರಡು ಗಡಿಗೆಯ ಪಾತ್ರೆಯಿರುತ್ತಿತ್ತು. ಕಟ್ಟಿಗೆಯ ಸೌಟು. ತೂತುಬಿದ್ದ ಕಬ್ಬಿಣದ ತವೆ; ಹಿಟ್ಟು ಕಲೆಸುವ ಕಟ್ಟಿಗೆಯ ಹರಿವಾಣ, ರೊಟ್ಟಿ ತಿರುವಲು ಗೇಣುದ್ದದ ತಗಡಿನ ತುಂಡು. ಮತ್ತೊಂದು ಮೂಲೆಯಲ್ಲಿ ಬೀಸುವ ಕಲ್ಲು. ಒಲೆಯ ಮೇಲೆ ಹುರಿಯ ನೆಲ್ಲು.... ಮೂಲೆಯಲ್ಲಿ ಸುತ್ತಿಟ್ಟ ಹರಕು ಚಿಂದಿಯ ಹಾಸಿಗೆಯ ಗಂಟು...." (ಪುಟ-13) ಹೀಗೆ ಕಣ್ಣಿಗೆ ಕಟ್ಟುವ ಬಡತನದ ಚಿತ್ರಣ ಹಲವೆಡೆ ಕಾಣಸಿಗುತ್ತದೆ. ಇದೇ ಅಧ್ಯಾಯದಲ್ಲಿ ಮನೆಯ ಮೊದಲ ಮಗನನ್ನು ದೇವಿಗೆ ಬಿಡುವ ಪದ್ಧತಿಯ ವಿವರಗಳು, ಆ ಪುಟ್ಟ ಪೋರನನ್ನು 'ಪೋತರಾಜ' ಎಂದು ಕರೆಯುವ ಬಗ್ಗೆ ಪ್ರಸ್ತಾಪವಿದೆ.

ವರ್ಷದ ಹನ್ನೆರಡು ತಿಂಗಳಲ್ಲಿ ಆಷಾಢಮಾಸ ಮಾತ್ರ ವೀರ ಊರಿನ ಜನರಿಗೆ ತಮ್ಮದೇ ಕಷ್ಟ-ಸುಖಗಳಲ್ಲಿ ಮುಳುಗೇಳುವ ದಿನಗಳು. 'ಸ್ನಾನ, ಬಟ್ಟೆ ಒಗೆತ, ಸಾರಿಸುವುದು, ಮನೆ ಝಾಡಿಸುವುದು.... ದೇವ-ಧರ್ಮದ ತಿಂಗಳು.' ಈ ತಿಂಗಳಲ್ಲಿ ಮಾಡುವ ಜಳಕದ ಸುದೀರ್ಘ ವಿವರ ಒಂದೆಡೆಯಾದರೆ ಇನ್ನೊಂದೆಡೆ ಈ ವರ್ಗದ ಜನತೆಯ ಮೌನಸಂಸ್ಕೃತಿಯೇ ಮಡುಗಟ್ಟಿದಂತಿದ್ದ ಮಹಿಳಾಕುಲಕ್ಕೆ ಬಾಯಿ ಬರುವ ಸಂದರ್ಭದ, ಸಂಭ್ರಮದ ವರ್ಣನೆ. ಆಷಾಢದ ಮಂಗಳವಾರ-ಶುಕ್ರವಾರಗಳು ಮನೆಯಲ್ಲಿ ಸುಮಂಗಲೆಯರ ಹಬ್ಬದ ಗೌಜು-ಗದ್ದಲ. ಈ ದಿನಗಳಲ್ಲಿ ಸೊಸೆಯರನ್ನು ಅಕ್ಕಪಕ್ಕದವರು ಆಮಂತ್ರಿಸಿ ಕುಂಕುಮ ಹಚ್ಚುವ, ಗೋದಿ ಅನ್ನವನ್ನು ಹೊಟ್ಟೆ ತುಂಬಾ ನೀಡುವ ಕಾರ್ಯಕ್ರಮ. ಅತ್ತೆಯರು ಅಡಿಗೆ ಮಾಡಬೇಕು. ಇವರ ಮೈಮೇಲೆ ದೇವತೆಗಳು ಬಂದು ಕಿರುಚುತ್ತಾ, ಕೂಗುತ್ತಾ ಒಂದೆಡೆಯಿಂದ ಮತ್ತೊಂದೆಡೆಗೆ ಓಡಾಡುತ್ತಾ ಕೊನೆಗೆ ಪೋತರಾಜನಿರುವ ಕಡೆಗೆ ಹೋಗುತ್ತಾರೆ. ಅವನು ಬಡಿಯುವ ಡೋಲಿಗೆ ಕುಣಿಯುತ್ತಾರೆ, ಮನದಾಳದ ಮಾತುಗಳನ್ನು ಆಡಿ ತೋರಿಸುತ್ತಾರೆ, ಬಯ್ಯುತ್ತಾರೆ. ಅಸಮಾಧಾನ ವ್ಯಕ್ತಪಡಿಸುತ್ತಾರೆ, ಅಳುತ್ತಾರೆ, ನಗುತ್ತಾರೆ. ಮೈಮೇಲಿನ ಪರಿವೆಯಿಲ್ಲದೆ ಕುಣಿಕುಣಿದು ದಣಿಯುತ್ತಾರೆ, ಸುಸ್ತಾಗಿ ಎಚ್ಚರದಪ್ಪಿ ಬೀಳುತ್ತಾರೆ. ಇಂಥ ವಿಶಿಷ್ಟ ಸಂಪ್ರದಾಯವನ್ನು ಎರಡನೆಯ ಅಧ್ಯಾಯದಲ್ಲಿ ಪರಿಚಯಿಸುವ ಮೂಲಕ ಈ ಕೃತಿ, ಇದಕ್ಕಿರಬಹುದಾದ ಒಂದು ಮನೋವೈಜ್ಞಾನಿಕ ಆಯಾಮದತ್ತ ನಮ್ಮ ಗಮನ ಸೆಳೆಯುತ್ತದೆ. ಹೀಗೆ 'ದೇವಋಷಿ' ಬರುವವರ ಸಂಖ್ಯೆ ಹೆಚ್ಚು ಎಂದು ಲೇಖಕಿ ಗಮನಿಸುತ್ತಾರೆ.

ಮೂರನೆಯ ಅಧ್ಯಾಯದಲ್ಲಿ ದೇವಿಗೆ ಕೋಣನ ಬಲಿ, ಪೋತರಾಜನ ನರ್ತನ, ದೇವಿಯ ಅಹವಾಲುಗಳು ಸಾಮಾನ್ಯ ಹೆಣ್ಣಿನ



ಬದುಕು ನಮ್ಮದು (2009)
ಮರಾಠಿ ಮೂಲ: ಬೇಬಿ ತಾಯಿ ಕೊಂಡಿಬಾ ಕಾಂಬಳೆ
ಕನ್ನಡಕ್ಕೆ : ಪ್ರೊ. ಚಂದ್ರಕಾಂತ ಪೋಕಳೆ
ಪುಟ : 96, ಬೆಲೆ : ರೂ. 55/-
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು

ಅಂತರಂಗದ ಮಾತುಗಳಾಗುವುದರ ವಿವರಗಳಿದ್ದರೆ, ನಾಲ್ಕನೆಯ ಅಧ್ಯಾಯದಲ್ಲಿ ಮಕ್ಕಳಾಗಿ ತಾವು ಹೇಗೆ ಹಿರಿಯರನ್ನು ಅನುಕರಿಸುತ್ತಿದ್ದೆವು, ತಾವು ಹೇಗೆ ಬ್ರಾಹ್ಮಣತಿ ಅಥವಾ ಗೌಡತಿಯಾಗಲು ಬಯಸುತ್ತಿದ್ದೆವೆನ್ನುವುದಕ್ಕೆ ಅವರು ಆಡುತ್ತಿದ್ದ ಆಟಗಳನ್ನು ನೆನಪಿಸಿಕೊಳ್ಳುತ್ತಾರೆ.

ಅಂದಿನ ಜಾತಿವ್ಯವಸ್ಥೆಯ ಸಮಾಜದಲ್ಲಿ ಅಂತರ್ಗತವಾಗಿದ್ದ ಶೋಷಣೆಯ ಹಲವು ಮುಖಗಳನ್ನು ಪರಿಚಯಿಸುತ್ತ ಹೋಗುವ ಕೃತಿ ಇದಾಗಿದ್ದು, ಬ್ರಾಹ್ಮಣ ಮಹಿಳೆಯರು ಇವರನ್ನು ಸಂಬೋಧಿಸುತ್ತಿದ್ದ ರೀತಿ, ಬೈಗುಳಗಳು ಅವಹೇಳನಗಳನ್ನು ನೋವಿನಿಂದ, ಆಕ್ರೋಶದಿಂದ ಚಿತ್ರಿಸುತ್ತಾರೆ. ಕಟ್ಟಿಗೆ ಮಾರುವ ಮಹಿಳೆಯರ ಬವಣೆಯನ್ನು ಬಿಡಿಸಿಡುತ್ತಾ 'ಇದೆಂಥ ಪ್ರಾಣಿಯಂತಹ ಹೀನವರ್ತನೆ ಹಿಂದೂ ಧರ್ಮದ್ದೂ! ಈ ಧರ್ಮಕ್ಕೆ ಕಿಂಚಿತ್ತಾದರೂ ಬುದ್ಧಿಗಿದ್ದಿ ಇದೆಯೇ?' ಎಂದು ಆಕ್ರೋಶದಿಂದ ನುಡಿಯುತ್ತಾರೆ. ಮುಂದುವರಿದು, "ಕಟ್ಟಿಗೆ ಕಡಿಯುವಾಗ ಹೊಲತಿಯರು ಸುರಿಸಿದ ಬೆವರು ಆ ಕಟ್ಟಿಗೆಯ ಮೇಲೆ ಬಿದ್ದಿರುತ್ತದೆ. ಮುಳ್ಳು ಚುಚ್ಚಿ ತರಚಿ ಗಾಯವಾಗಿ ಅದರಿಂದ ಸೋರಿದ ರಕ್ತ ಅದಕ್ಕೆ ಮೆತ್ತಿಕೊಂಡಿರುತ್ತದೆ.... ಸುಗ್ಗಿ ನಡೆದಾಗ ಕಣದ ತುಂಬಾ ಹೊಲತಿಯ ಬೆವರು ಸುರಿದು ಒದ್ದೆ-ಒದ್ದೆಯಾಗುತ್ತದೆ. ಹೊಲತಿಯ ಕಾಲಿನಿಂದ ಸುರಿದ ಬೆವರು ಪ್ರತಿ ಧಾನ್ಯದ ಕಣಕ್ಕೂ ಮೆತ್ತಿಕೊಂಡು ಒಣಗಿದಾಗಲೇ ನಿಮ್ಮ ಶುದ್ಧವಾದ ಪಂಚಪಕ್ವಾನ್ನ ಸಿದ್ಧಗೊಳ್ಳುತ್ತದೆ. ಅದನ್ನು ನೀವು ಸವಿಯಾಗಿ ಚಪ್ಪರಿಸುತ್ತೀರಿ.... ಹೊಲೆಯರು ತುಳಿದು ಸಿದ್ಧಪಡಿಸಿದ ಕೆಸರು-ಮಣ್ಣಿನ ರಾಡಿಯಿಂದ ನಿಮ್ಮ ಮಹಲು ತಲೆ ಎತ್ತುತ್ತದೆ. ಅಂಥ ಮಹಲಿನಲ್ಲಿ ವಾಸಿಸಿದಾಗ ನಿಮ್ಮ ತೊಗಲು ಕೊಳೆಯುವುದಿಲ್ಲ. ಅವರ ದುಃಖದ ಮೇಲೆ ನಿಮ್ಮ ಸುಖದ ಶಯ್ಯೆ ಸಿದ್ಧಗೊಳ್ಳುತ್ತದೆ. ಅದು ಮೈಲಿಗೆಯಾಗುವುದಿಲ್ಲವೆ?......" ಹೀಗೆ ಪ್ರಶ್ನೆಗಳ ಚಾಟಿಯೇಟನ್ನು ಬೀಸುತ್ತಾ ಹೋಗುವ ಬೇಬಿತಾಯಿ, ಹೀಗೆ ಪ್ರಶ್ನಿಸುವ ಶಕ್ತಿಯನ್ನು ನೀಡಿದವರು ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರರೆಂದು ಕೃತಜ್ಞತೆಯಿಂದ ನೆನೆಯುತ್ತಾರೆ.

ಕಿಶೋರಾವಸ್ಥೆಯಲ್ಲೇ ತಾಯಂದಿರಾಗುವ ಬಾಲಕಿಯರ ನೋವು-ಬವಣೆಗಳನ್ನು ಬಿಚ್ಚಿಡುವುದಕ್ಕೇ ಆರನೆಯ ಅಧ್ಯಾಯ ಮೀಸಲಾಗಿದೆಯೆನ್ನಬಹುದು. ಹೆರಿಗೆ ನೋವು ಬಂದರೂ ಹೆರಿಗೆ ತಡವಾಗುವ ಪರಿಸ್ಥಿತಿಯಲ್ಲಿ ಹೆಂಗಸರೆಲ್ಲಾ ಮನೆಗೆ ಮುತ್ತಿಗೆ ಹಾಕುವುದು, 'ಅನಾಗರಿಕ', ತರಬೇತಿ-ರಹಿತ ಸೂಲಗಿತ್ತಿಯರ ಹೆರಿಗೆ ಮಾಡಿಸುವ ಯಶಸ್ವೀ ಪ್ರಯತ್ನಗಳಿಂದಾಗಿ ಆಗುವ ತೊಂದರೆಗಳು, ಮಗಳಿಗೆ ಬೇಗ ಹೆರಿಗೆಯಾಗಲೆಂದು ಲಕುಮವ್ವನಿಗೆ ಹರಕೆ ಹೊರುವ ತಾಯಿ, ಕೂಸು ಹೊರಬಂದ ಮೇಲೆ ಖಾಲಿಹೊಟ್ಟೆಗೆ ಏನನ್ನಾದರೂ ತಿನ್ನಲು ಕೊಡಿರೆಂದು ಚಿಂದಿ ಹಾಸಿಗೆಯಲ್ಲಿ ಮಲಗಿ ಒದ್ದಾಡುತ್ತಾ ಯಾಚಿಸುವ ಬಾಣಂತಿ, ಸಾಬೂನನ್ನೇ ಕಾಣದ ಹೆಂಗಳೆಯರು ಎಂಜಲನ್ನೇ/ಉಗುಳನ್ನೇ ಅಂಗ್ಯೆಗೆ ಹಚ್ಚಿಕೊಂಡು ಮಗುವನ್ನು ಶುಚಿಗೊಳಿಸುವ ಪರಿ, ಕೂಸು ಹೈರಾಣಾಗುವವರೆಗೆ ನೀರು ಸುರಿದು ದಿನಕ್ಕೆರಡು ಬಾರಿ ಬಾಣಂತಿ ಕೂಸಿಗೆ ಮಾಡಿಸುವ ಜಳಕದ ವರ್ಣನೆ ಸುದೀರ್ಘವಾಗಿದೆ. ಯಾವುದೇ ಔಷಧೋಪಚಾರಗಳಿಲ್ಲದ ತಾಯಿ-ಮಗು ಧನುರ್ವಾಯು ಪೀಡಿತರಾಗುವುದು ಸಾಮಾನ್ಯ. ಆದರದನ್ನು ದೆವ್ವ ಬಡಿದಿದೆಯೆಂದು ನಂಬಿ ಅವರನ್ನು ಸುಲಭವಾಗಿ ಬಲಿಕೊಡುವ ಮನಕಲಕುವ ಚಿತ್ರಣವಿದೆ.

ಇವರಿಗೊಬ್ಬ ಯಜಮಾನನಿರುತ್ತಾನೆ. ಇವನು ಗೆಜ್ಜೆಕೋಲಿನ ಸರದಾರ. ಇದು ಅಲಂಕಾರಕ್ಕಲ್ಲ. ದಿನವಿಡೀ ಊರಗೌಡನ ಜೊತೆ ಚಾವಡಿಯಲ್ಲಿದ್ದು ಅವನು ಆದೇಶಿಸಿದಂತೆ ಊರು-ಕೇರಿಯ ಕೆಲಸವನ್ನು ಮಾಡುವ ಇವನು ರಾತ್ರಿ ಮನೆ-ಮನೆಗೆ ಹೋಗಿ ರೊಟ್ಟಿ-ಅನ್ನ ಬೇಡುತ್ತಾನೆ. ಇವನು ಬಂದ ಸೂಚನೆ ನೀಡಲು ಈ ಗೆಜ್ಜೆಕೋಲು ನೆರವಾಗುತ್ತದೆ. ಮೇಲ್ಜಾತಿಯವರು ಊಟ ಮಾಡುವ ಹೊತ್ತಿನಲ್ಲಿ ಇವನ ದನಿ ಕೇಳಿದರೆ ಮೈಲಿಗೆಯಾಗುತ್ತದಾದ್ದರಿಂದ ಮಾತಿಗೆ ಬದಲು ಗೆಜ್ಜೆಕೋಲಿನ ಸದ್ದು ಮಾಡುತ್ತಾನೆ. ಊರ ಜನರ ಮದುವೆ, ಸಾವುಗಳೆರಡಕ್ಕೂ ಇವನು ಬೇಕೇ ಬೇಕು. ಪ್ರಾಣಿ ಸತ್ತರೆ ಇವನ ಮನೆ ಎಲುಬು-ಮಾಂಸಗಳಿಂದ ತುಂಬಿ ತುಳುಕುತ್ತದೆ. ಊರ ದನಕರುಗಳಿಗೆ ಸಾಂಕ್ರಾಮಿಕ ರೋಗಗಳು ಬಂದರೆ ಕೇರಿಯ ಜನರಿಗೆ ಸುಗ್ಗಿ. ಇವನ ಮನೆಯಿಂದಲೇ ಅವರಿಗೆಲ್ಲಾ ಮಾಂಸ ಪಾಲಾಗುತ್ತದೆ. ಯಜಮಾನನಿಗೆ ಹೃದಯ, ಕರುಳು, ತೊಡೆಯ ಭಾಗವೆಂದು ಪ್ರಾಣಿಯ ಅರ್ಧಕ್ಕಿಂತಲೂ ಹೆಚ್ಚು ಮಾಂಸ ದೊರಕುವುದರಿಂದ ಇವನ ಮನೆ ಹಸಿಮಾಂಸವಷ್ಟೇ ಅಲ್ಲ, ಒಣಮಾಂಸಕ್ಕೂ ಕಣಜವಾಗಿರುತ್ತದೆ. ಈ ಸವಲತ್ತು ಆರು ತಿಂಗಳವರೆಗೆ ಮಾತ್ರ. ಅನಂತರ ಈ ಯಜಮಾನಿಕೆಯು ಸರದಿಯಲ್ಲಿರುವ ಮತ್ತೊಬ್ಬರ ಪಾಲಾಗುತ್ತದೆ. ಏಳನೆಯ ಅಧ್ಯಾಯ ಪೂರ್ತಿ ಇಂಥ ವಿವರಗಳಿಂದ ತುಂಬಿಕೊಂಡಿದೆ.

ಪಾಲೊಫ್ರಿಯರಿ ಎಂಬ ಶಿಕ್ಷಣ ತಜ್ಞರು, 'ಶೋಷಕ ವ್ಯವಸ್ಥೆಯಲ್ಲಿ ಶೋಷಿತ ಶೋಷಕನನ್ನು ಅನುಕರಿಸುತ್ತಾನೆ. ಆ ವ್ಯವಸ್ಥೆಯ ಮೌಲ್ಯಗಳನ್ನು ತನ್ನೊಳಗೆ ಅಂತರ್ಗತಗೊಳಿಸಿಕೊಳ್ಳುತ್ತಾನೆ' ಎಂದು ಹೇಳಿದ ಮಾತನ್ನು ಬೇಬಿತಾಯಿಯ ಈ ಕೆಳಕಂಡ ಮಾತುಗಳು ನೆನಪಿಸುತ್ತವೆ:

"ಜಗತ್ತು ಗುಲಾಮಗಿರಿಯ ಸಂಕೋಲೆಯನ್ನು ನಮ್ಮ ಕೈಗೆ ತೊಡಿಸಿತು. ಕೊನೆಗೆ ನಾವೂ ಮನುಷ್ಯರೇ ಅಲ್ಲವೆ? ನಮಗೂ ಬೇರೆಯವರನ್ನು ಆಳಬೇಕೆಂದು ಅನಿಸುವುದಿಲ್ಲವೆ? ಆದರೆ ನಮ್ಮಿಂದ ಆಳಿಸಿಕೊಳ್ಳುವವರಾರು? ಹೀಗಾಗಿ ನಾವು ನಮ್ಮವರನ್ನೇ ಆಳುವ ವ್ಯವಸ್ಥೆ ಮಾಡಿಕೊಂಡೆವು. ನಾವು ನಮ್ಮ ಸೊಸೆಯಂದಿರ ಕೊರಳಿಗೆ ಸಂಕೋಲೆಯನ್ನು ಬಿಗಿದೆವು. ಏಳೆಂಟು ವರ್ಷದ ಪೋರಿಯನ್ನು ಸೊಸೆಯೆಂದು ಮನೆ ತುಂಬಿಸಿಕೊಳ್ಳುತ್ತಿದ್ದೆವು (ಪುಟ.68)".

ಬಾಲ್ಯವಿವಾಹವನ್ನು ಖಂಡಿಸುವ ಬೇಬಿತಾಯಿ ಸ್ವವಿಮರ್ಶೆಯತ್ತ ಮುಖಮಾಡುತ್ತಾರೆ. ಎಂಟು ಮತ್ತು ಒಂಬತ್ತನೇ ಅಧ್ಯಾಯಗಳಲ್ಲಿ ಬಾಲ್ಯವಿವಾಹ, ವಧುದಕ್ಷಿಣೆ, ವರನ ಮನೆಗೇ ವಧುವನ್ನು ಕರೆತಂದು ವಿವಾಹವನ್ನು ನಿಶ್ಚಯಿಸುವ ವಧುವಿನ ತಂದೆಯ ಅವಸರ, ಎಂಟು ದಿನಗಳ ಮದುವೆಯ ವಿಶಿಷ್ಟ ಸಂಪ್ರದಾಯದ ವಿವರಗಳಿವೆ. ಹೆಣ್ಣು-ಗಂಡುಗಳ ನಡುವಿನ ಅಸಮಾನತೆ, ಅತ್ತೆ ಸೊಸೆಯನ್ನು ಕಾಡುವ ಚಿತ್ರಣವಿದೆ. ಏಳೆಂಟು ವರ್ಷದ ಪೋರಿ ತನ್ನ ಗಂಡನ ಮನೆಯಲ್ಲಿ ಬುಟ್ಟಿಗಟ್ಟಲೆ ರೊಟ್ಟಿ ಸುಡಬೇಕಾದ ಪರಿಸ್ಥಿತಿ, ನಸುಕಿನ ಮೂರು ಗಂಟೆಗೆ ಏಳದ ಸೊಸೆಯ ತಲೆಗೂದಲನ್ನು ಹಿಡಿದೆಳೆದು ಎಬ್ಬಿಸುವ ಅತ್ತೆ, ಬುಟ್ಟಿ ತುಂಬಾ ತುಂಬಿದ್ದ ಜೋಳವನ್ನು ಬೀಸಬೇಕಾದ ಕಷ್ಟ, ಬೀಸಿಬೀಸಿ ಕೈಗುಳ್ಳೆಗಳಾದರೂ ರೊಟ್ಟಿ ತಟ್ಟಬೇಕು, ಹಿಟ್ಟು ನಾದಬೇಕು, ಅತ್ತೆಯ ಕೊಂಕು, ತಿವಿತ, ಬೈಗುಳಗಳನ್ನು ಸಹಿಸಬೇಕು. ಇಷ್ಟೇ ಸಾಲದೆಂಬಂತೆ ಬೇರೆ ಹೆಂಗಸರ ಮೈಮೇಲೆ ದೇವರು ಬಂದು ಇವಳನ್ನು ನಂಬಬಾರದೆಂದು ಅತ್ತೆಗೆ ತಾಕೀತು ಮಾಡುತ್ತದೆ! ಇವಳ ಮೊದಲ ಮಗುವನ್ನು ದೇವರಿಗೆ ಬಿಡೆಂದು ಆದೇಶಿಸುತ್ತದೆ! ಸೊಸೆ ಗಡಗಡ ನಡುಗುತ್ತಾಳೆ. ನಾಲಿಗೆ ಸತ್ತು ಮೂಕಳಾಗುತ್ತಾಳೆ. ಗಂಡ ಹೊಡೆಯುತ್ತಾನೆ; ಮನೆಯಿಂದ ಹೊರ ಹಾಕುತ್ತಾನೆ. "ಎಲ್ಲರೂ ತಮತಮಗೆ ತೋಚಿದಂತೆ ಕಾಡುತ್ತಾರೆ." ತಾಯಿ ಸೊಸೆಯ ಶೀಲವನ್ನು ಶಂಕಿಸಿ ಮಗನ ತಲೆ ಕೆಡಿಸುತ್ತಾಳೆ. ಇವರ ಕಾಟ ತಾಳಲಾರದೆ ಸೊಸೆ ರಾತ್ರಿ ತವರಿಗೆ ಪರಾರಿಯಾಗುತ್ತಾಳೆ. ಅಲ್ಲೂ ಅವಳನ್ನು ಆದರಿಸುವವರಿಲ್ಲ. ಗಂಡನ ಮನೆಯವರು ಅಲ್ಲಿಂದ ಎಳೆದು ತರುತ್ತಾರೆ. ಮತ್ತೆ ಓಡಿಹೋಗದಂತೆ ಅವಳ ಬಲಗಾಲಿಗೆ ಮರದ ತುಂಡನ್ನು ಕಟ್ಟುತ್ತಾರೆ. ಅದರ ತೂತಿನಲ್ಲಿ ಒಂದು ಕಬ್ಬಿಣದ ಸಲಿಕೆಯಂಥದ್ದಿರುತ್ತದೆ. ಅದು ನಡೆಯುವಾಗಲೆಲ್ಲಾ ಚುಚ್ಚಿ ಅವಳನ್ನು

ನೋಯಿಸುತ್ತಿರುತ್ತದೆ. ಅಷ್ಟಾದರೂ ಗಂಡನ ಮನೆಯವರ ಕಾಟ ತಾಳಲಾರದೆ ಮತ್ತೆ ಓಡಿಹೋಗುತ್ತಾಳೆ. ಅಂತಿಮವಾಗಿ, ಅಪ್ಪ-ಅಮ್ಮರ ಪ್ರೋತ್ಸಾಹದಿಂದ ನಿದ್ದೆಯಲ್ಲಿದ್ದ ಹೆಂಡತಿಯ ಮೂಗನ್ನು ಗಂಡ ಕೊಯ್ಯುತ್ತಾನೆ. ಆಸರೆ ತಪ್ಪಿದ ಅವಳು ಬೀದಿಪಾಲಾಗುತ್ತಾಳೆ. ಈಗಾಗಲೇ ಒಂದೆರಡು ಮಕ್ಕಳನ್ನು ಹೆತ್ತಿದ್ದ ಹೆಂಗಸಿನೊಂದಿಗೆ ಗಂಡನಿಗೆ ಮತ್ತೆ ಮದುವೆಯಾಗುತ್ತದೆ!

ದಲಿತ ಮಹಿಳೆಯರು ಮೇಲ್ಜಾತಿಯ ಮಹಿಳೆಯರಿಗಿಂತ ಹೆಚ್ಚು ಸ್ವತಂತ್ರರು, ಕಡಿಮೆ ಕಟ್ಟುಪಾಡುಗಳಲ್ಲಿ ಬದುಕುತ್ತಾರೆಂಬ ಸಾಮಾನ್ಯ ನಂಬಿಕೆಯನ್ನು ಸಂಪೂರ್ಣ ಸುಳ್ಳೆಂದು ಮೇಲೆ ಹೇಳಿದ ವಿವರಗಳಿಂದ ಒಂದೆಡೆ ಅನ್ನಿಸಿದರೆ, ಬೇಬಿತಾಯಿಯವರ ಈ ಕೆಳಗಿನ ಮಾತುಗಳು ನಮ್ಮ ದೃಷ್ಟಿಕೋನವನ್ನೇ ಬದಲಿಸುವಷ್ಟು ಶಕ್ತಿಯುತವಾಗಿವೆ: **"ಕೆಳವರ್ಗದ ಹೆಂಗಸರ ಜೀವನವು ತಿಳಿವಳಿಕೆ ಬಂದಾಗಿನಿಂದ ಸಂಕಟದ ಗಣಿಯಲ್ಲಿ ನಿರ್ಮಾಣಗೊಳ್ಳುತ್ತದೆ. ಹಿಮಾಲಯಕ್ಕೆ ಢಿಕ್ಕಿ ಹೊಡೆಯುವಷ್ಟು ತಮ್ಮ ದೇಹವನ್ನು ಗಟ್ಟಿಗೊಳಿಸಿರುತ್ತಾರೆ. ಆದರೆ ದೇಹದೊಳಗಿನ ಮನಸ್ಸು ಮಾತ್ರ ಹಗಲೂ-ರಾತ್ರಿ ಆಕ್ರಂದನ ಮಾಡುತ್ತಿರುತ್ತದೆ."** ಇದು ಲೇಖಕಿಯ ನೊಂದ ಮನದಾಳದ ನುಡಿಗಳಾಗಿವೆ.

1929ರಲ್ಲಿ ಜನಿಸಿದ ಬೇಬಿತಾಯಿ ತಮ್ಮ ಅಜ್ಜಿಯ ಊರಲ್ಲಿ (ವೀರ್ಧ ಊರು) ಕಳೆದ ದಿನಗಳನ್ನು ಕೃತಿಯ ಉದ್ದಕ್ಕೂ ನೆನಪಿಸಿ ಕೊಳ್ಳುತ್ತಾರೆ. ಹತ್ತನೆಯ ಅಧ್ಯಾಯ ಮಾತ್ರ ಅವರ ಶಾಲಾ ದಿನಗಳ ವಿವರಗಳನ್ನು ನೀಡುತ್ತದೆ. ಸತಾರ ಜಿಲ್ಲೆಯ ಫಲಟಣದಲ್ಲಿ ಅವರ ಶಾಲ್ಲಾಶಿಕ್ಷಣ ಆರಂಭವಾಗಿ ಅದು ಕೇವಲ ಐದನೇ ತರಗತಿಯವರೆಗೆ ಮಾತ್ರ ಮುಂದುವರಿಯಿತು. ಆದರೆ ಅವರು ಶಾಲೆಯ ಒಳಗೆ ಕಲಿತದ್ದು ನೋವು, ಹಿಂಸೆ, ಸಂಘರ್ಷ, ದ್ವೇಷಗಳ ಪಾಠವಾದರೆ, ಅದರ ಹೊರಗೆ ಕಲಿತದ್ದು ಅಪಾರ. ತನ್ನಂತೆಯೇ ನೊಂದವರ ನಡುವೆ ಕಲಿತದ್ದು ಸಂಘಟನಾ ಚಾತುರ್ಯ, ಸತ್ಯಕ್ಕಾಗಿ ಹೋರಾಟ, ಪ್ರೀತಿ, ಅನುಕಂಪ ದಂಥ ಮಾನವೀಯ ಮೌಲ್ಯಗಳ ಪಾಠ. ಶಾಲೆಯ ಆವರಣ ಅವರಿಗೇನನ್ನು ಕಲಿಸಿತು? ನಾವೇನನ್ನು ಕಲಿಸುತ್ತಿದ್ದೇವೆನ್ನುವುದರ ಸ್ವವಿಮರ್ಶೆಗೆ ಇಲ್ಲಿ ಅವಕಾಶವಿದೆ. ತಮ್ಮನ್ನು ಅಸ್ಪೃಶ್ಯರೆಂದು ಪ್ರತ್ಯೇಕವಾಗಿ ಕುಳಿತುಕೊಳ್ಳುವಂತೆ ಮಾಡುತ್ತಿದ್ದ ಶಿಕ್ಷಕರು, ಕುಡಿಯುವ ನೀರಿಗೂ ಮೈಲಿಗೆಯ ಹೆಸರಿನಲ್ಲಿ ತೊಂದರೆ ಕೊಡುವ ಸಹಪಾಠಿಗಳು, ದಿನನಿತ್ಯವೂ ಅನುಭವಿಸಬೇಕಾದ ಅಪಮಾನ, ತಿರಸ್ಕಾರಗಳು ತನ್ನನ್ನು ಹೇಗೆ ಅವರನ್ನು ದ್ವೇಷಿಸುವಂತೆ ಮಾಡಿತೆನ್ನುವುದರ ವಿವರಣೆ/ಸಮರ್ಥನೆ ಇಲ್ಲಿದೆ. ಎಳೆವಯಸ್ಸಿನಲ್ಲೇ ಅಂಬೇಡ್ಕರರ ವಿಚಾರಧಾರೆಗಳಿಂದ ಪ್ರಭಾವಿತರಾದ ತಾವು ಅವರನ್ನು ಮೊಟ್ಟಮೊದಲಿಗೆ ಕಂಡಾಗ ಉಕ್ಕಿ ಬಂದ ಭಾವನೆಗಳು, ಗುಂಪಾಗಿ ದೇವಸ್ಥಾನಗಳಿಗೆ ನುಗ್ಗುವ ಸಾಹಸ, ಹೊಟೆಲ್ಲುಗಳಲ್ಲಿ ತಾವು ಕುಡಿದ ಎಂಜಲು ಲೋಟಗಳನ್ನು ತೊಳೆಯದೇ ಇಟ್ಟು ಬಂದಾಗಿನ ಸಂತೃಪ್ತಿ, ಸಮಾಧಾನಗಳ ವಿವರಗಳಿವೆ.

ಕೊನೆಯ ಪುಟಗಳಲ್ಲಿ ತಮ್ಮ ಅಪ್ಪ-ಅಮ್ಮನನ್ನು ನೆನೆಯುತ್ತಾ ತ್ಯಾಗದ ಪಾಠವನ್ನು ಅವ್ವನಿಂದ, ಬದುಕಿನ ಪಾಠವನ್ನು ಅಪ್ಪನಿಂದ ಕಲಿತೆನೆಂದು ಹೆಮ್ಮೆಯಿಂದ ಹೇಳುತ್ತಾರೆ. ಕೃತಿಯುದ್ದಕ್ಕೂ ಬೌದ್ಧಧರ್ಮ ಮತ್ತು ಡಾ. ಬಿ.ಆರ್. ಅಂಬೇಡ್ಕರರನ್ನು ಆರಾಧಕ ಮನೋಭಾವದಿಂದ ಕಾಣುವ ಬೇಬಿತಾಯಿಯವರು ಈ ಕೆಳಗಿನ ಸಾಲುಗಳೊಂದಿಗೆ ತಮ್ಮ ಕೃತಿಯನ್ನು ಅಂತ್ಯಗೊಳಿಸುತ್ತಾರೆ:

> **"ನನ್ನ ಬಳಿ ಏನಿದೆ ಭೀಮಾ ನಿನಗೆ ಕೊಡಲು?**
> **ಅರ್ಪಿಸುತ್ತೇನೆ ದುಃಖದ ಹೂಗಳನ್ನು**
> **ಕಂಬನಿಯಿಂದ ನಿನ್ನ ಪಾದ ತೊಳೆಯುತ್ತೇನೆ**
> **ಆತ್ಮದ ಬೆಂಕಿಯಿಂದ ಜ್ಯೋತಿ ಬೆಳಗಿಸುತ್ತೇನೆ**
> **ಜ್ಯೋತಿಯಲ್ಲಿ ಕಾಣುತ್ತಿದೆ ನನಗೆ ಬುದ್ಧ ಭೀಮರ ಮೂರ್ತಿ."**

(ಪುಟ 96)

ಬೇಬಿತಾಯಿಯವರು ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ಬರೆದ ಈ ಕೃತಿ 20ನೇ ಶತಮಾನದ, (ಸ್ವಾತಂತ್ರ್ಯಪೂರ್ವ ಹಾಗೂ ಸ್ವತಂತ್ರ್ಯಾನಂತರದ) ಐವತ್ತರ ದಶಕದ ದಲಿತ ಸಮಾಜದ ಚಿತ್ರಣವಾಗಿದೆ. ದಲಿತರ ದಾರುಣ ಬದುಕಿನ ವರ್ಣನೆ ಮನ ಕಲಕಿದರೆ, ಮಹಿಳೆಯರ ನೋವು-ಸಂಕಟಗಳು ಕಂಡು ಕೇಳರಿಯದ್ದು. ಸಮಾಜವೊಂದರ ವ್ಯವಸ್ಥಿತ ಕ್ರೌರ್ಯದ ಅಗಾಧತೆಯನ್ನು ಕಲ್ಪಿಸಿಕೊಳ್ಳಲೂ ಆಗದಂಥದನ್ನು ಅಕ್ಷರಗಳಲ್ಲಿ ಹಿಡಿದಿಡುವ ಪ್ರಯತ್ನ ಇಲ್ಲಿದೆ. ಇದೊಂದು ಆತ್ಮಕಥೆ ಎನ್ನುವುದಕ್ಕಿಂತ ಸಾಮಾಜಿಕ ಹಾಗೂ ಚಾರಿತ್ರಿಕ ಮಹತ್ವದ ಕೃತಿ ಎನ್ನಬಹುದಾಗಿದೆ. ಕೃತಿಯಲ್ಲಿ ದಲಿತ ಸಮಾಜದಲ್ಲಿನ ಕಡುಬಡತನ, ಅನಾರೋಗ್ಯ, ಅಂಧಶ್ರದ್ಧೆಗಳ ಶೋಷಣೆಯ ಚಿತ್ರಣಗಳು ಕಣ್ಣಿಗೆ ಕಟ್ಟಿದಂತೆ ಮುಂದುವರಿದರೆ ಕೃತಿಕಾರರ ವೈಯಕ್ತಿಕ ಬದುಕು ಗೌಣವಾಗಿ ಬಿಡುತ್ತದೆ. ಇದು ಸಮಾಜವಿಜ್ಞಾನಿಗಳಿಗೆ, ಚರಿತ್ರಕಾರರಿಗೆ, ಮಹಿಳಾ ಅಧ್ಯಯನಕಾರರಿಗೆ, ಸಂಶೋಧಕರಿಗೆ, ಕೊನೆಗೆ ಎಲ್ಲರೂ ಓದಲೇ ಬೇಕಾದ ಮಹತ್ವದ ಕೃತಿ.

ಇದನ್ನು ಕನ್ನಡಕ್ಕೆ ತಂದ ಪ್ರೊಫೆಸರ್ ಚಂದ್ರಕಾಂತ ಪೋಕಳೆಯವರ ಶ್ರಮ ಸಾರ್ಥಕವಾಗಿದೆ. ಓದುವಾಗ ಇದೊಂದು ಅನುವಾದಿತ ಕೃತಿ ಎಂದೆನಿಸುವುದಿಲ್ಲ. ಆಡುಭಾಷೆ ಮತ್ತು ಶಿಷ್ಟಭಾಷೆಗಳೆರಡನ್ನೂ ಬಳಸಲಾಗಿದ್ದು ಒಂದು ಶೈಲಿಯಿಂದ ಮತ್ತೊಂದು ಶೈಲಿಗೆ ಇದ್ದಕ್ಕಿದ್ದಂತೆ ಜಿಗಿಯುವುದರ ಕಾರಣ ಸ್ಪಷ್ಟವಾಗುವುದಿಲ್ಲ. ಹಾಗೆಂದು ಅದೊಂದು ತೊಡಕೆನಿಸುವುದಿಲ್ಲ. ಇಂಥ ಮಹತ್ವದ ಕೃತಿಯನ್ನು ಕನ್ನಡದ ಓದುಗರಿಗೆ ಪರಿಚಯಿಸಿದ ಪ್ರೊ. ಪೋಕಳೆಯವರು ಅಭಿನಂದನಾರ್ಹರು.

❑

ಪುರುಷರೂಪಿ ಸಂಸ್ಕೃತಿಯೊಂದರಲ್ಲಿ ಭಾಷಾನೀತಿ ಎನ್ನುವುದು ಲಿಂಗನೀತಿಯನ್ನು ಅನುಸರಿಸಿಯೇ ಇರುತ್ತದೆ. ಅದು ಗಂಡಿನ ಅಸ್ತಿತ್ವ ಮತ್ತು ಹೆಣ್ಣಿನ ಅದೃಶ್ಯತೆಯ ತಾತ್ವಿಕತೆಯನ್ನು ಒಪ್ಪಿಕೊಳ್ಳುವುದಾಗಿರುತ್ತದೆ. ಪುರುಷನಿಗೆ ಸಂಬಂಧಿಸಿದ ಪದಗಳು ಅಧಿಕಾರದೊಂದಿಗೆ ಸಂಬಂಧಿಸಿದ್ದು, ಸ್ತ್ರೀಗೆ ಸಂಬಂಧಿಸಿದ ಪದಗಳು ಅಧೀನತೆಗೆ ಸಂಬಂಧಿಸಿದವುಗಳಾಗಿವೆ. ಈ ದ್ವಂದ್ವ ವೈರುಧ್ಯ ಸಮಾಜದ ಘಟಕವನ್ನು ಇನ್ನೊಂದಕ್ಕಿಂತ ಶ್ರೇಷ್ಠವೆಂದು ಪರಿಗಣಿಸುವ ಪ್ರವೃತ್ತಿಯನ್ನು ತೋರಿಸುತ್ತದೆ. ಭಾಷೆ ಪುರುಷನ ಶ್ರೇಷ್ಠತೆಯನ್ನು ನಿರ್ದೇಶಿಸುವುದರ ಜತೆಗೆ ಅದನ್ನು ಉಂಟುಮಾಡುತ್ತದೆ ಕೂಡಾ. ಈ ಕಾರಣಕ್ಕಾಗಿಯೇ ಸ್ತ್ರೀವಾದಿಗಳು ಭಾಷಿಕ ಸಂಕಥನವನ್ನು ಆರಂಭಿಸಲು ಆಸಕ್ತರಾಗಿದ್ದಾರೆ.

–ಗಾಯತ್ರಿ ನಾವಡ

(ಸ್ತ್ರೀಸಂಯೋಜನೆ ಸ್ತ್ರೀಪಠ್ಯ ಮತ್ತು ಸ್ತ್ರೀಲಯ ಭಾಷೆ)

ನೆರೆ ಹಾವಳಿ : ಪರಿಣಾಮ ಮತ್ತು ಪರಿಹಾರ

(2009ರ ಒಂದು ಅಧ್ಯಯನ)

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರವು ನೆರೆ ಹಾವಳಿ ಪ್ರದೇಶಗಳಲ್ಲಿ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು ನೆರೆ ಹಾವಳಿಯ ಪ್ರಕೃತಿ ವಿಕೋಪದಿಂದ ತೀವ್ರ ತೊಂದರೆಗೊಳಗಾಗಿದ್ದು, ಅವರ ಬದುಕು-ಬವಣೆ ಕುರಿತು ಸಮಗ್ರ ಅಧ್ಯಯನ ನಡೆಸಲು ನಿರ್ಧರಿಸಿತು.

ಈ ಹಿನ್ನೆಲೆಯಲ್ಲಿ ನಾಲ್ವರು ತಜ್ಞರನ್ನು ಹಾಗೂ ನಾಲ್ವರು ಸಂಶೋಧನಾ ಸಹಾಯಕರನ್ನು ಒಳಗೊಂಡ ಎರಡು ಅಧ್ಯಯನ ತಂಡಗಳನ್ನು ರಚಿಸಿ ಕೂಡಲೇ ಕಾರ್ಯೋನ್ಮುಖವಾಯಿತು. ಮೊದಲ ತಂಡವು ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿನ ನೆರೆಪೀಡಿತ ಪ್ರದೇಶಗಳ ಆಯ್ದ ಗ್ರಾಮಗಳನ್ನು ಅಧ್ಯಯನ ಮಾಡಿತು. ಎರಡನೇ ತಂಡವು ಗುಲಬರ್ಗಾ, ರಾಯಚೂರು ಹಾಗೂ ಬಿಜಾಪುರ ಜಿಲ್ಲೆಗಳಲ್ಲಿನ ನೆರೆಪೀಡಿತ ಆಯ್ದ ಗ್ರಾಮಗಳನ್ನು ಅಧ್ಯಯನ ಮಾಡಿತು. ಹತ್ತು ದಿನಗಳವರೆಗೆ ನಿರಂತರ ಕ್ಷೇತ್ರಸಮೀಕ್ಷೆ ನಡೆಸಿ ಸರಕಾರಕ್ಕೆ ವರದಿ ನೀಡುವ ಮಹತ್ವದ ಕಾರ್ಯವನ್ನು ಮಹಿಳಾ ಅಧ್ಯಯನ ಕೇಂದ್ರವು ನಿರ್ವಹಿಸಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಇದೊಂದು ಪ್ರಥಮ ಪ್ರಯತ್ನದಂತೆ ಕಾಣುತ್ತಿದೆ. ಈ ಅಧ್ಯಯನವನ್ನು ಮುಖ್ಯವಾಗಿ ಮಹಿಳೆಯರ ದೃಷ್ಟಿಕೋನದಿಂದ ಸಿದ್ಧಪಡಿಸಲಾಗಿದೆ. ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡಿದೆಯೆಂದರೆ, ಇದು ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವರದಿಯಲ್ಲ. ಮಹಿಳಾ ದೃಷ್ಟಿಕೋನವನ್ನಿಟ್ಟುಕೊಂಡು ನೆರೆಹಾವಳಿ, ಅದರ ಪರಿಣಾಮ ಮತ್ತು ಪರಿಹಾರವನ್ನು ಕುರಿತಂತೆ ವರದಿಯು ವಿಸ್ತೃತವಾದ ಬೆಳಕು ಚೆಲ್ಲುತ್ತದೆ.

ನೆರೆ ಹಾವಳಿಯು ಜನರ ಮನಸ್ಸಿನ ಮೇಲೆ ಉಂಟು ಮಾಡಿರುವ ಆಘಾತವನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಅನೇಕ ಮಹಿಳೆಯರು ಮನೋವ್ಯಾಕುಲಕ್ಕೆ ಒಳಗಾಗಿರುವ ಸಂಗತಿಗಳು ಗಮನಕ್ಕೆ ಬಂದಿವೆ. ಒಂದು ರೀತಿಯ ವ್ಯಸನಕ್ಕೆ-ಖಿನ್ನತೆಗೆ ಜನರು ಒಳಗಾಗಿರುವ ಸಾಧ್ಯತೆಯಿದೆ. ತಮಗೆ ತಾವೇ ಮಾತನಾಡಿಕೊಳ್ಳುವುದು, ಬದುಕು ಬಿದ್ದುಹೋದುದನ್ನು ಸಹಿಸಿಕೊಳ್ಳಲು ಸಾಧ್ಯವಾಗದಿರುವುದು ಮುಂತಾದ ಸಮಸ್ಯೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈ ನೆರೆ ಹಾವಳಿಯು ಮಕ್ಕಳ ಶಿಕ್ಷಣದ ಮೇಲೆ ಮತ್ತು ಜನರ, ಅದರಲ್ಲೂ ಮಹಿಳೆಯರ ಆರೋಗ್ಯದ ಮೇಲೆ ಉಂಟು ಮಾಡಿರುವ ಪರಿಣಾಮ, ಅದನ್ನು ನಿರ್ವಹಿಸುವ ಬಗೆ, ಅಗತ್ಯವಾದ ತಕ್ಷಣದ ಸಂಗತಿಗಳನ್ನು ಕುರಿತಂತೆ ಅನೇಕ ಸಮಸ್ಯೆಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ನೆರೆಯಿಂದ ತತ್ತರಿಸಿದ ಹಳ್ಳಿಗಳಲ್ಲಿ ಶಿಕ್ಷಣ-ಶಾಲೆ ಏನಾಗಿದೆ ಎಂಬುದು ಮಕ್ಕಳು ಮತ್ತು ಮಹಿಳೆಯರ ದೃಷ್ಟಿಯಿಂದ ತುಂಬಾ ನಿರ್ಣಾಯಕವಾದುದಾಗಿದೆ. ಅದರಂತೆ ಆರೋಗ್ಯದ ಮೇಲೆ ಏನು ಪರಿಣಾಮ ಉಂಟಾಗಿದೆ ಎಂಬುದೂ ಕೂಡ ಗಮನಿಸಬೇಕಾದ ಸಂಗತಿಯಾಗಿದೆ.

ಈ ವರದಿಯು 2-3 ಕಂತುಗಳಲ್ಲಿ ಪ್ರಕಟವಾಗಲಿದೆ. ಈ ವರದಿಯನ್ನು 'ನಮ್ಮ ಮಾನಸ'ದಲ್ಲಿ ಪ್ರಕಟಿಸಲು ಅನುಮತಿ ಇತ್ತ ಕನ್ನಡ ವಿಶ್ವವಿದ್ಯಾಲಯಕ್ಕೆ, ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಶೈಲಜಾ ಇಂ. ಹಿರೇಮಠ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಪ್ರಾಕೃತಿಕ ಆಯಾಮಗಳು

ಪ್ರಾಕೃತಿಕ ವಿಕೋಪಗಳಾದ ಪ್ರವಾಹ, ಬರಗಾಲ, ಭೂಕಂಪ, ಸುನಾಮಿ, ಚಂಡಮಾರುತ, ಜ್ವಾಲಾಮುಖಿ ಮುಂತಾದವು ಪ್ರಪಂಚದ ಎಲ್ಲ ಭಾಗಗಳಲ್ಲೂ ಆಗಿಂದಾಗ್ಗೆ ಉಂಟಾಗುತ್ತಿರುತ್ತವೆ. ಈ ವಿಕೋಪಗಳು 25-30 ವರ್ಷಗಳ ಹಿಂದೆ ಹೇಗೆ ಸಂಭವಿಸುತ್ತಿದ್ದವೋ ಹಾಗೇ ಅದೇ ರೀತಿಯಲ್ಲಿ ಇಂದು ಅವು ಸಂಭವಿಸುತ್ತಿಲ್ಲ. ಪ್ರಕೃತಿಯನ್ನು ಮಣಿಸಲು ನಡೆಸಿದ ಮನುಷ್ಯ ಪ್ರಯತ್ನದಿಂದಾಗಿ ಪ್ರಕೃತಿಯು ಹೊಸ ಹೊಸ ರೀತಿಯಲ್ಲಿ ನಮ್ಮನ್ನು ಕಾಡ ತೊಡಗಿದೆ. ಕರ್ನಾಟಕ ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ಸೆಪ್ಟೆಂಬರ್-ಅಕ್ಟೋಬರ್ 2009ರಲ್ಲಿ ಉಂಟಾದ ಜಲಪ್ರಳಯವೇ ಇದಕ್ಕೆ ಜ್ವಲಂತ ನಿದರ್ಶನವಾಗಿದೆ.

ಬಳ್ಳಾರಿ ಜಿಲ್ಲೆಯ ಹಚ್ಚೊಳ್ಳಿ ಗ್ರಾಮದಲ್ಲಿ ಜನರು ಹೇಳಿದಂತೆ ಮನೆಗಳು 'ಜಳಜಳ' ಬಿದ್ದು ಹೋಗಿವೆ. ಹುನಗುಂದ ತಾಲ್ಲೂಕಿನ ಜನರು ಹೇಳುವಂತೆ ಮನೆಗಳು 'ಸಪಾಳ'ವಾಗಿಬಿಟ್ಟಿವೆ. ಹೊಳೆ ಆಲೂರಿನಲ್ಲಿ ಪ್ರವಾಹದಿಂದ ಜರ್ಜರಿತರಾದ ಜನರು 'ಹಡೆದಪ್ಪ, ಸ್ವಚ್ಛವಾಗಿಬಿಟ್ಟಿದ್ದೇವಪ್ಪ' ಎಂದು ಗೋಳಾಡಿದ್ದನ್ನು ನಾವು ಕಂಡಿದ್ದೇವೆ. ಪ್ರವಾಹವು ನಮಗೆ ಹೊಸದಲ್ಲ. ಇಂದು ಪ್ರವಾಹವನ್ನು ಎದುರಿಸಿರುವ ಜನರಿಗೂ ಅದು ಹೊಸದಲ್ಲ. ಆದರೆ ಅದರ ಹಾನಿಯ ಸ್ವರೂಪ ಮತ್ತು ಪ್ರವಾಹದ ಗತಿ, ದಿಕ್ಕು, ಪ್ರಮಾಣ, ರಭಸ ಮುಂತಾದವು ಇಂದು ಸಂಪೂರ್ಣ ಬದಲಾಗಿವೆ. ನದಿ ಮತ್ತು ಹಳ್ಳಗಳು ತಮ್ಮ ಪಾತ್ರಗಳಲ್ಲಿ ಹರಿಯುವುದನ್ನು ಬಿಟ್ಟು ಇಲ್ಲಿ (ಊರಿಗೆ) ಯಾಕೆ ಬಂದವು ಎಂಬುದು ಅರ್ಥವಾಗುತ್ತಿಲ್ಲವೆಂದು ಜನರು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಈ ವರ್ಷದ ಪ್ರವಾಹದ ವಿಶೇಷತೆಯೆಂದರೆ ನದಿಗಳ ಪ್ರವಾಹ ಎಷ್ಟು ಹಾನಿ ಮಾಡಿದೆಯೋ ಅಷ್ಟೇ, ಒಮ್ಮೊಮ್ಮೆ ಅದಕ್ಕಿಂತ ಅತಿಯಾಗಿ ಹಳ್ಳಗಳು ಹಾನಿ ಮಾಡಿರುವುದು. ಬೆಣ್ಣೆಹಳ್ಳ ಮತ್ತು ಹಿರೇಹಳ್ಳ (ಹಳ್ಳವೆನ್ನುವುದಾದರೆ ಹಗರಿಯನ್ನು ಸೇರಿಸಿಕೊಂಡು) ಉಂಟುಮಾಡಿರುವ ಹಾನಿಯ ಪ್ರಮಾಣವನ್ನು ನೋಡಿಯೇ ತಿಳಿದುಕೊಳ್ಳಬೇಕು.

ಪ್ರಾಕೃತಿಕ ವಿಕೋಪಗಳನ್ನು ನಿಯಂತ್ರಿಸುವುದು ಒಂದು ನೆಲೆಯಾದರೆ ಅವುಗಳಿಂದ ಹೆಚ್ಚು ಹಾನಿ ಉಂಟಾಗದಂತೆ, ಅವು ವಿನಾಶಕಾರಿಯಾಗದಂತೆ ನಿರ್ವಹಿಸುವುದು ಮತ್ತೊಂದು ಬಗೆ. ನಿರ್ವಹಣಾಶಾಸ್ತ್ರದ ಬಗ್ಗೆ ಕ್ರಾಂತಿಕಾರಕ

ಬದಲಾವಣೆಗಳು ನಡೆಯುತ್ತಿರುವ ಇಂದಿನ ದಿನಮಾನದಲ್ಲಿ ನಾವು ಅದರಲ್ಲಿ ವಿಫಲರಾಗುತ್ತಿದ್ದೇವೆಂದರೆ ಅದು ಆಶ್ಚರ್ಯ ಹುಟ್ಟಿಸುತ್ತದೆ. ***ಇಲ್ಲಿ ಒಂದು ಸಂಗತಿಯನ್ನು ಒತ್ತಿ ಹೇಳಬೇಕಾಗಿದೆ. ಅದೇನೆಂದರೆ, ಈ ನೆರೆಹಾವಳಿ ಇಂದು ಉಂಟುಮಾಡಿರುವ ಹಾನಿ ಅನೇಕ ಸಂದರ್ಭಗಳಲ್ಲಿ ಜನರ ಸ್ವಾರ್ಥಪರ, ಸಂಕುಚಿತ, ವೈಯಕ್ತಿಕ ಲಾಭದ ದೃಷ್ಟಿಕೋನದ ವರ್ತನೆಯಿಂದ ಹೆಚ್ಚಾಗಿರುವ ಸಾಧ್ಯತೆಯಿರುವುದು; ಬೇಕಾಬಿಟ್ಟಿ ಹರಿದುಹೋಗುತ್ತಿದ್ದ ನೀರನ್ನು ಹಿಡಿದಿಡುವಲ್ಲಿ ಅದೆಂತಹ ಜಾಣತನ, ಚಾಕಚಕ್ಯತೆಯನ್ನು ಮೆರೆಯಲಾಯಿತೋ ಅದೇ ಹಿಡಿದಿಟ್ಟ ನೀರು ಮುಳುವಾಗಿ ಪರಿಣಮಿಸಿದ್ದು ಇಂದು ನಮ್ಮೆದುರಿಗಿದೆ. ಹೀಗಾಗಿ ಈ ಜಲಪ್ರಳಯವು ಎಷ್ಟರ ಮಟ್ಟಿಗೆ ಪ್ರಕೃತಿ ನಿರ್ಮಿತವೋ ಅಷ್ಟರ ಮಟ್ಟಿಗೆ ಅದು ಮಾನವ ನಿರ್ಮಿತವೂ ಹೌದು.***

ನದಿಗಳಲ್ಲಿ ನೀರು ಅತಿಯಾಗಿ, ಹಳ್ಳಗಳ ನೀರನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ತಮ್ಮ ನೀರನ್ನೇ ಹಳ್ಳಗಳಿಗೆ ನುಗ್ಗಿಸಿದವು. ಹೀಗಾಗಿ ಹಳ್ಳಗಳು ಹಿಮ್ಮುಖವಾಗಿ ಹರಿದು ಅಪಾರ ಪ್ರಮಾಣದಲ್ಲಿ ನೀರು ನುಗ್ಗಬಾರದ ಹಳ್ಳಿಗಳಿಗೆಲ್ಲ ನುಗ್ಗಿ ಹಾನಿ ಮಾಡಿವೆ. ಈ ಪ್ರವಾಹವು ಮಾನವ ನಿರ್ಮಿತವೆನ್ನುವುದಕ್ಕೆ ನಾವು ಕಂಡುಕೊಂಡ ಸಂಗತಿಗಳು ಮತ್ತು ಜನರು ಅನುಭವದಿಂದ ಹೇಳಿದ ಕಾರಣಗಳು ಕೆಳಕಂಡಂತಿವೆ.

1. ಕೃಷ್ಣಾ ನದಿಗೆ ಅಡ್ಡಲಾಗಿ ನಾವು ಸದುದ್ದೇಶದಿಂದಲೇ ಕಟ್ಟಿರುವ ಡ್ಯಾಮುಗಳು ನದಿಗಳಲ್ಲಿ ಮತ್ತು ಹಳ್ಳಗಳಲ್ಲಿ ನೀರು ಅವುಗಳ ಪಾತ್ರದಲ್ಲಿ ಸಲೀಸಾಗಿ ಹರಿದು ಹೋಗಲು ಅವಕಾಶ ನೀಡುತ್ತಿಲ್ಲ. ಬಿಸನಾಳಕೊಪ್ಪ ಎಂಬ ಊರಿನ (ಹುನಗುಂದ ತಾಲ್ಲೂಕು) ಜನರು ಇದರ ಬಗ್ಗೆ ಅತ್ಯಂತ ನೊಂದು ಹೇಳಿದ ಮಾತುಗಳು ಮಾರ್ಮಿಕವಾಗಿದ್ದವು. "ತಪ್ಪು, ತಿಳಿಯಬೇಡಿ. ಹೀಗೆ ನಾವು ಅಪಶಕುನ ನುಡಿಯಬಾರದು. ಆದರೆ ನಮಗೆ ವಿಧಿಯಿಲ್ಲ. ನಾರಾಯಣಪುರ ಡ್ಯಾಮು ಒಡೆದು ಹೋಗುವವರೆವಿಗೂ ನಮಗೆ ಬಿಡುಗಡೆಯಿಲ್ಲ." ಇದರರ್ಥ ನಾವು ಅಣೆಕಟ್ಟುಗಳನ್ನು ಒಡೆದು ಹಾಕಬೇಕಾಗಿಲ್ಲ. ಅದನ್ನು ಹೇಳಿದವರಿಗೂ ಅಂತಹ ಉದ್ದೇಶವಿರಲಿಲ್ಲ. ಆದರೆ ನಾವು ಅಣೆಕಟ್ಟೆಯ ಎತ್ತರವನ್ನು 500, 510, 520, 525 ಮೀಟರ್ ಹೀಗೆ ಎತ್ತರಿಸಿಕೊಂಡು ಹೋದಂತೆ ಅದರಿಂದ ನೂರಾರು ಹಳ್ಳಿಗಳಿಗೆ, ಲಕ್ಷಾಂತರ ಜನರಿಗೆ ಹಾನಿಯಾಗುವುದರ ಬಗ್ಗೆ ಚಿಂತಿಸಲಿಲ್ಲ. ಇದರ ಬಗ್ಗೆ ನಾವು ಈಗ ಪುನರಾಲೋಚಿಸಬೇಕಾಗಿದೆ.

2. ನದಿ ಮತ್ತು ಹಳ್ಳಗಳಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಅಸಾಧ್ಯವಾಗಿದೆ. ಅವುಗಳ ಎರಡೂ ದಂಡೆಗಳಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲವೆನ್ನುವಂತೆ ಬಳ್ಳಾರಿ ಜಾಲಿ, ಸೀರಕಬ್ಬು ಹಾಗೂ ಅನೇಕ ವಿಧದ ಕಾಡು ಬಳ್ಳಿಗಳು ಹತ್ತಾರು ಅಡಿ ಎತ್ತರಕ್ಕೆ ಬೆಳೆದುಬಿಟ್ಟಿವೆ. ಒಂದು ರೀತಿಯಲ್ಲಿ ಬಲೆಯಂತೆ ಹೆಣೆದುಕೊಂಡುಬಿಟ್ಟಿವೆ. ನಿಜಕ್ಕೂ ಅಲ್ಲಿ ನೀರು ಸರಾಗವಾಗಿ ಹರಿದು ಹೋಗುವುದು ಸಾಧ್ಯವಿಲ್ಲ. ಇದನ್ನು ಖುದ್ದು ನೋಡಬೇಕೆಂದರೆ ಹುನಗುಂದ ತಾಲ್ಲೂಕಿನ ಖೈರವಾಡಿಗಿ, ರೋಣ ತಾಲ್ಲೂಕಿನ ಹೊಳೆ ಆಲೂರು ಬಳಿಯ ಮಲಪ್ರಭಾ ನದಿ ಹಾಗೂ ಮೆಣಸಗಿ, ಮಾಳವಾಡದ ಬಳಿಯ ಬೆಣ್ಣೆಹಳ್ಳಗಳನ್ನು ನೋಡಬಹುದು. ನಾವು ಊಹಿಸಿಕೊಳ್ಳಲು ಸಾಧ್ಯವಿಲ್ಲದಷ್ಟು ಎತ್ತರಕ್ಕೆ ಮತ್ತು ಅರಣ್ಯಸದೃಶವಾಗಿ ಅವು ಬೆಳೆದಿವೆ. ಇದನ್ನು ಕಂಡು ಹಿಡಿದು ಸರಿಪಡಿಸುವುದು ಯಾವ ಇಲಾಖೆಯ ಕೆಲಸ? ನೆರೆ ಪರಿಹಾರದ ಕಾರ್ಯಕ್ರಮದಲ್ಲಿ ಕಣ್ಣಿಗೆ ಕಾಣಿಸುವ ರೀತಿಯಲ್ಲಿ ಜಲಸಂಪನ್ಮೂಲ ಇಲಾಖೆ ಮತ್ತು ನೀರಾವರಿ ಇಲಾಖೆಗಳು ನಿರ್ಲಿಪ್ತವಾಗಿವೆ ಮತ್ತು ನಿರಾಸಕ್ತವಾಗಿವೆ.

3. ನಮ್ಮ ಅಭಿವೃದ್ಧಿ ಕರ್ತೃಗಳಿಗೆ ದೂರಾಲೋಚನೆ ಇಲ್ಲ. ಹೊಳೆ ಆಲೂರಿನ ನಡುವೆ ಗದಗ-ವಿಜಾಪುರ ರೈಲು ಮಾರ್ಗ ಹೋಗುತ್ತದೆ.



ಈ ಮಾರ್ಗ ನಿರ್ಮಾಣಕ್ಕಾಗಿ ದೊಡ್ಡ ಏರಿಯನ್ನು ನಿರ್ಮಿಸಲಾಗಿದೆ. ಏರಿಯ ಮೇಲೆ ರೈಲು ಕಂಬಿಗಳನ್ನು ಹಾಸಲಾಗಿದೆ. ಅದು ಊರಿನ ಮಧ್ಯದಿಂದ ಹಾದು ಹೋಗುತ್ತದೆ. ಈ ಊರಿಗೆ 2009ರಲ್ಲಿನ ಪ್ರವಾಹಕ್ಕಿಂತ ಭೀಕರವಾದ ಪ್ರವಾಹ 2007ರಲ್ಲಿ ಬಂದಿತ್ತು. ಜನರ ಪ್ರಕಾರ ಅದಕ್ಕೆ ಮುಖ್ಯ ಕಾರಣ ಸೇತುವೆ ನಿರ್ಮಿಸದೆ ಏರಿಯ ರೀತಿಯಲ್ಲಿ ರೈಲು ಮಾರ್ಗ ನಿರ್ಮಿಸಿರುವುದು. ಈಗ 2009ರಲ್ಲಿ ಪ್ರವಾಹದ ಹೊಡೆತ ಅಲ್ಲಿ ಕಡಿಮೆಯೆಂದು ಜನರು ಹೇಳುತ್ತಿದ್ದಾರೆ. ಏಕೆಂದರೆ ಅಲ್ಲೀಗ 2008ರಲ್ಲಿ ರೈಲು ಮಾರ್ಗಕ್ಕೆ ಒಂದು ದೊಡ್ಡ ತಳಸೇತುವೆಯನ್ನು ನಿರ್ಮಿಸಲಾಗಿದೆ. ಈ ಸೇತುವೆ ಕೆಳಗೆ ರಸ್ತೆಯೊಂದನ್ನು ನಿರ್ಮಿಸಲಾಗಿದೆ. ಮೊನ್ನೆ ಬಂದ ನೆರೆಯ ಸಂದರ್ಭದಲ್ಲಿ ನೀರು ಈ ತಳಸೇತುವೆಯಿಂದ ಸಾಕಷ್ಟು ಹರಿದು ಹೋಗಿದ್ದರಿಂದ ಪ್ರವಾಹದ ಪ್ರಮಾಣ ಮತ್ತು ಹಾನಿ ಕಡಿಮೆಯಾಗಿದೆ. ನೀರು ಊರಿಗೆ ಹೆಚ್ಚು ನುಗ್ಗಲಿಲ್ಲ. ಇದೇ ಮಾತನ್ನು ನಮಗೆ ಹೊಳೆ ಆಲೂರಿನ ಮೇಲ್ಭಟ್ಟದಲ್ಲಿರುವ ಹೊಳೆ ಮಣ್ಣೂರಿನ ಜನರು ಹೇಳಿದರು. ಊರಿನ ಪಕ್ಕದಲ್ಲಿ ನದಿ ಹಾದು ಹೋದ ಕಡೆ, ಅಲ್ಲಿ ಪ್ರವಾಹ ಬಂದರೆ ನೀರು ಎಲ್ಲಿ ಹೋಗುತ್ತದೆ ಎಂಬುದರ ಪರಿವೆ, ಲೆಕ್ಕಾಚಾರವಿಲ್ಲದೆ ರೈಲುಮಾರ್ಗದ ಯೋಜನೆಯನ್ನು ಎಂಜಿನಿಯರ್ ತಂಡವು ಸಿದ್ಧಪಡಿಸಿದೆ. ಅವರ ತಪ್ಪಿಗಾಗಿ ಜನರು ಹಾನಿ ಅನುಭವಿಸಬೇಕಾಗಿದೆ.

4. ಆದರೆ ನದಿಗಳ ಮತ್ತು ಹಳ್ಳಗಳ ಎರಡೂ ದಂಡೆಗಳಲ್ಲಿ ಕಾಡಿನಂತೆ ಸಮೃದ್ಧವಾಗಿ ಬೆಳೆದ ಬಳ್ಳಾರಿ ಜಾಲಿಯು ಈ ಪ್ರವಾಹವನ್ನೆದುರಿಸಿದ ಹಳ್ಳಿಗಳಲ್ಲಿ ಅನೇಕರಿಗೆ ಆದಾಯದ ಮೂಲವಾಗಿದೆ ಎಂಬುದನ್ನೂ ಅಧ್ಯಯನ ತಂಡ ಗುರುತಿಸಿತು. ಜಾಲಿಯನ್ನು ಅಗೆದು



ಬುಡ ಸಮೇತ ಕಿತ್ತು ಸುಟ್ಟು ಇದ್ದಿಲುಮಾಡಿ ಮುಂಬೈಗೆ ಕಳುಹಿಸುವ ವ್ಯಾಪಾರ ದೊಡ್ಡದಾಗಿ ಬೆಳೆದುಬಿಟ್ಟಿದೆ. ಹೀಗೆ ಜಾಲಿಯನ್ನು ಬುಡ ಸಮೇತ ಕಡಿಯುವಾಗ ಅದರ ಬುಡದಲ್ಲಿ ಮಣ್ಣು ಸಡಿಲವಾಗುತ್ತದೆ. ಹೀಗೆ ಸಡಿಲವಾದ ಮಣ್ಣು ಮಳೆ ಬಂದಾಗ ಹೂಳಾಗಿ ನದಿ-ಹಳ್ಳಗಳ ಪಾತ್ರಗಳಲ್ಲಿ ಹರಡಿಕೊಂಡುಬಿಡುತ್ತದೆ. ಇದರಿಂದಾಗಿ ನದಿಯ ಪಾತ್ರದ ತಳಮಟ್ಟದ ಆಳ ಕಡಿಮೆಯಾಗಿದೆ. ಅದರ ಮಟ್ಟವು ಅನೇಕ ಸ್ಥಳಗಳಲ್ಲಿ ಪಕ್ಕದ ಊರುಗಳ ಮಟ್ಟಕ್ಕೆ ಬಂದುಬಿಟ್ಟಿದೆ. ಸ್ವಲ್ಪ ಪ್ರವಾಹ ಬಂದರೂ ಅಲ್ಲಿ ನೀರು ಊರುಗಳಿಗೆ ನುಗ್ಗಿಬಿಡುತ್ತದೆ. ಕಳೆದ ತಿಂಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉಂಟಾದ ನದಿ-ಹಳ್ಳಗಳ ನೀರು ಅವುಗಳ ಪಾತ್ರದಲ್ಲಿ ಹರಿಯುವುದಕ್ಕೆ ಪ್ರತಿಯಾಗಿ, ಊರುಗಳನ್ನು ಪ್ರವೇಶಿಸುವುದಕ್ಕೆ ಇದೂ ಒಂದು ಮುಖ್ಯ ಕಾರಣವಾಗಿದೆ.

5. ನದಿಗಳಿಗೆ ಮತ್ತು ಹಳ್ಳಗಳಿಗೆ ಅನೇಕ ಸ್ಥಳಗಳಲ್ಲಿ ಸೇತುವೆಗಳನ್ನು ನಿರ್ಮಿಸಲಾಗಿದೆ. ಅನೇಕ ಅಗಸಿ(ಕಮಾನು)ಗಳಿರುವ ಉದ್ದವಾದ ಮತ್ತು ಅಗಲವಾದ ಸೇತುವೆಗಳನ್ನು ಕಟ್ಟಲಾಗಿದೆ. ಆದರೆ ಅವುಗಳನ್ನು ಪ್ರತೀ ವರ್ಷ ದುರಸ್ಥಿಗೆ ಒಳಪಡಿಸದಿದ್ದರಿಂದಾಗಿ ಹೂಳು ತುಂಬಿ ಅಲ್ಲಿ ನೀರು ಹರಿದು ಹೋಗುವುದು ಸಾಧ್ಯವಿಲ್ಲವಾಗಿದೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ವಿಭೂತಿಹಳ್ಳಿಯ ಹತ್ತಿರ ನವಲಿಹಳ್ಳಕ್ಕೆ ಹಾಕಿದ 15 ಅಡಿ ಎತ್ತರದ 24 ಅಗಸಿಗಳ ಸೇತುವೆಯಿದೆ. ಆದರೆ ಅಲ್ಲಿ ಹೂಳು ತುಂಬಿಕೊಂಡು ಅಲ್ಲಿನ 24ರಲ್ಲಿ 21 ಅಗಸಿ ಕಣ್ಣುಗಳು ಮುಚ್ಚಿಹೋಗಿವೆ. ಈ ಹಳ್ಳದಲ್ಲಿ ನೀರು ಸಲೀಸಾಗಿ ಹೋಗಲಾಗದ್ದಕ್ಕೆ ಅಲ್ಲಿನ ಸುತ್ತಮುತ್ತಲಿನ ವಿಭೂತಿಹಳ್ಳಿ, ರಾಮನಳ್ಳಿ, ಗುಡ್ಡಳ್ಳಿ ಮತ್ತು ತೋಂಟಾಪುರಗಳು ಪ್ರವಾಹಕ್ಕೆ ತುತ್ತಾಗಿವೆ. ಇಲ್ಲಿ ಊರುಗಳನ್ನು ಸ್ಥಳಾಂತರಿಸುವ ಅಗತ್ಯವಿಲ್ಲ. ಆದರೆ ಜರೂರಾಗಿ ಈ ಊರುಗಳ ಫಾಸಲೆಯ ಉದ್ದಗಲಕ್ಕೆ ನವಲಿಹಳ್ಳದ ಹೂಳನ್ನು ತೆಗೆಸಿಬಿಟ್ಟರೆ, ಅಲ್ಲಿ ಪ್ರವಾಹ ಉಂಟಾಗುವುದು ಸಾಧ್ಯವಿಲ್ಲ ಮತ್ತು ಜನರು ಸಂಕಷ್ಟ ಪಡುವುದು ನಿಲ್ಲುತ್ತದೆ.

ನೆರೆ ಪರಿಹಾರವನ್ನು ಕೇವಲ ಸಂಪನ್ಮೂಲ, ಮನೆ ಕಟ್ಟಿಕೊಡುವುದು, ಜಾಗ ಹುಡುಕುವುದು, ಕಾರ್ಪೊರೇಟ್ ಜಗತ್ತಿನಲ್ಲಿರುವವರ ಹೃದಯ ವೈಶಾಲ್ಯತೆಯ ಬಳಕೆ ಮುಂತಾದವುಗಳಿಗೆ ಸೀಮಿತಗೊಳಿಸಿ ಕೊಳ್ಳುವುದರಿಂದ ಪ್ರಯೋಜನವಿಲ್ಲ. ಪ್ರವಾಹಕ್ಕೆ ಸಂಬಂಧಿಸಿದ ಎಲ್ಲ ಆಯಾಮಗಳನ್ನು ಪರಿಗಣಿಸಬೇಕು ಮತ್ತು ಅದನ್ನು ಎಲ್ಲ ಅಭಿವೃದ್ಧಿ ಇಲಾಖೆಗಳನ್ನು ಒಳಗು ಮಾಡಿಕೊಂಡು ಬಹುಶಿಸ್ತೀಯ ನೆಲೆಯಲ್ಲಿ ನಿರ್ವಹಣೆ ಮಾಡಬೇಕು. ನೆರೆ ಪರಿಹಾರವೆನ್ನುವುದು ಒಂದೆರಡು ವರ್ಷಗಳಲ್ಲಿ ಮುಗಿದುಹೋಗುವ ಕಾರ್ಯವಲ್ಲ. ಅದು ಕೇವಲ ಐವತ್ತುಸಾವಿರ ಮನೆ ಕಟ್ಟಿಸಿಕೊಡುವ ಮತ್ತು ರೂ. 500 ಕೋಟಿ ಸಂಪನ್ಮೂಲದ ಪ್ರಶ್ನೆಯಲ್ಲ. ನೆರೆ ಪರಿಹಾರ ಕಾರ್ಯಕ್ರಮವನ್ನು ಈಗಿರುವ ಸ್ವರೂಪಕ್ಕಿಂತ ಭಿನ್ನವಾಗಿ ವಿಸ್ತೃತ ರೂಪದಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ಸಾಮಾಜಿಕ ಆಯಾಮಗಳು

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಇಲ್ಲಿ ಸಾಮಾಜಿಕ ಎನ್ನುವುದನ್ನು ಜಾತಿ, ಉಪಜಾತಿ, ಪಂಗಡ, ಲಿಂಗ ಮತ್ತು ಧರ್ಮಕ್ಕೆ ಸಂಬಂಧಿಸಿದ ಸಂಗತಿ ಎಂದು ನಿರ್ವಚಿಸಿಕೊಳ್ಳಲಾಗಿದೆ.

ಈ ಸಲದ ನೆರೆಯಿಂದ ಅತಿ ಹೆಚ್ಚು ಕಷ್ಟ ಅನುಭವಿಸಿದವರು ದಲಿತರು. ಯಾಕೆಂದರೆ, ಬಹುತೇಕ ಗ್ರಾಮಗಳ ರಚನೆಯಲ್ಲಿ ಮೇಲುಜಾತಿಯವರ ಮನೆಗಳು ದಿಬ್ಬದಲ್ಲಿರುತ್ತವೆ; ದಲಿತರ ಕೇರಿಗಳು ಊರಿನ ಇಳಿಜಾರಿನಲ್ಲಿ ಮತ್ತು ಹಳ್ಳ ಹೊಳೆಗೆ ಸಮೀಪದಲ್ಲಿರುತ್ತವೆ. ಹೀಗಾಗಿ ದಲಿತ ಕೇರಿಗೆ ಊರಿನ ಕೊಳಚೆ ನೀರು ಹರಿದು ಬರುತ್ತದೆ. ಇದು ಊರವರು ಮಲವಿಸರ್ಜನೆಗೆ ಬರುವ ಹಾಗೂ ತಿಪ್ಪೆಗಳನ್ನು ಹಾಕಿಕೊಂಡಿರುವ ಜಾಗ ಕೂಡ ಆಗಿದೆ. ಇದು ನಮ್ಮ ಜಾತಿ ವ್ಯವಸ್ಥೆಯ ಶ್ರೇಣೀಕರಣದ ಪರಿಣಾಮ. ವಿತರಣೆಯಲ್ಲಿ ತಾರತಮ್ಯವೇನಾಗಿಲ್ಲ. ಆದರೆ ಕೆಲವು ಕಡೆ ಮಾತ್ರ 'ಮೊದಲು ಮುಳುಗಿದ್ದು ನಮ್ಮ ಕೇರಿ. ಪರಿಹಾರ ಮಾತ್ರ ಮ್ಯಾಗಳ ಕೇರಿಯೋರೆ ಮೊದಲ ತಗೋತಿದಾರ' ಎಂದು ಅವರು ಅಸಮಾಧಾನ ವ್ಯಕ್ತಮಾಡುತ್ತಿದ್ದರು.

ಬಹಳಷ್ಟು ದಲಿತರು ಭೂರಹಿತರಾಗಿರುವುದರಿಂದ ಅವರ ಮನೆಗಳಲ್ಲಿ ದೊಡ್ಡಮಟ್ಟದ ಆಹಾರಧಾನ್ಯಗಳ ದಾಸ್ತಾನಾಗಲಿ ಸಂಪತ್ತಾಗಲಿ ಇರಲಿಲ್ಲ. ಹೆಚ್ಚೆಂದರೆ ಆಡು; ಕೋಳಿಗಳಿದ್ದವು. ಅವರ ಮನೆಗಳು ಸಹಿತ ದೊಡ್ಡವಾಗಿರಲಿಲ್ಲ. ಹೀಗಾಗಿ ಅವರಿಗೆ ಆರ್ಥಿಕ ಲೆಕ್ಕದಲ್ಲಿ ನಷ್ಟ ಕಡಿಮೆಯಾಗಿದೆ. ಜತೆಗೆ ಹೊಸ ಊರಿನಲ್ಲಿ ಹೊಸ ಮನೆಗಳು ಸಿಗುವ ಸಂತೋಷವೂ ಇದೆ. ಆದರೆ ಕಡಿಮೆ ಕಳೆದುಕೊಂಡು ತಮ್ಮಂತೆ ಸಮಾನ ಪರಿಹಾರ ಪಡೆಯುತ್ತಿರುವ ಅವರ ಬಗ್ಗೆ ಸ್ಥಿತಿವಂತರಲ್ಲಿ ಒಂದು ಬಗೆಯ ಅಸೂಯೆಯು ಕಾಣುತ್ತಿತ್ತು.

ಭೂಮಾಲಿಕರೂ ಸವರ್ಣೀಯರೂ ಸ್ಥಿತಿವಂತರೂ ಆದವರು ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಭೂಮಾಲಿಕರಾದ ಅವರಿಗೆ ಮನೆಬಿದ್ದ ನಷ್ಟದ ಜತೆಯಲ್ಲಿ ಹೊಲದಲ್ಲಿ ಫಸಲು ಹಾಳಾದ ನಷ್ಟವೂ ಸೇರಿದೆ. ಈಗ ಹೊಸ ಊರಿನಲ್ಲಿ ಎಲ್ಲರಿಗೂ ಸಮಾನವಾಗಿ ಕಟ್ಟಿಕೊಡುವ ಶೆಡ್ಡು ಅಥವಾ ಮನೆಗಳಿಗೆ ಹೋಗುವುದು ಅವರಿಗೆ ಅಪಮಾನಕರ ಅನಿಸಿದೆ. ಜತೆಗೆ ತಮ್ಮ ನಷ್ಟ ಹೆಚ್ಚಾಗಿದ್ದು, ಪರಿಹಾರವು ಎಲ್ಲರಿಗೆ ಸಿಕ್ಕಷ್ಟೆ ಸಿಕ್ಕಿರುವುದು ಅವರಲ್ಲಿ ಅಸಮಾಧಾನ ಹುಟ್ಟಿಸಿದೆ.

ಸ್ಥಳಾಂತರವಾದ ಬಳಿಕ ಹೊಸದಾಗಿ ಹುಟ್ಟುವ ಊರಿನಲ್ಲಿಯೂ ಹಿಂದಿನಂತೆ ಜಾತಿವಾರು ಕೇರಿಗಳಲ್ಲೇ ತಮಗೆ ಮನೆ ಬೇಕೆಂದು ಎಲ್ಲ ಸಮುದಾಯದವರೂ ಅಪೇಕ್ಷಿಸಿದರು. ದಲಿತರು ಕೂಡ ತಮಗೆ ಬೇರೆಯದೇ ಕೇರಿ ಬೇಕೆಂದು ಹೇಳಿದರು. ಮಾತ್ರವಲ್ಲ, ದಲಿತರಲ್ಲಿ

ಎಡಗೈ, ಬಲಗೈನವರು ಕೂಡ ತಮ್ಮ ಕೇರಿಗಳು ಪ್ರತ್ಯೇಕವಾಗಿರಬೇಕೆಂದು ಹೇಳಿದರು. ಇದು ನಮ್ಮ ಜಾತಿವ್ಯವಸ್ಥೆಯ ಬಿಗಿಯನ್ನು ಸೂಚಿಸುತ್ತದೆ. ಜನರು ತಮ್ಮ ಜಾತಿವಾರು ಕೇರಿಗಳಿಂದ ಸಾಂಪ್ರದಾಯಿಕವಾದ ಸಾಮಾಜಿಕ ಧಾರ್ಮಿಕ ಸಂಬಂಧಗಳನ್ನು ಮುಂದುವರೆಸಲು ಸಹಾಯಕ ವಾಗುತ್ತದೆಯೆಂದು ಹೇಳಿದರು. ಸರ್ಕಾರವು ತಾತ್ಕಾಲಿಕವಾಗಿ ಮಾಡಿರುವ ಶೆಡ್ಡುಗಳಲ್ಲಿ ಕೆಲವು ಕಡೆ ಜಾತಿವಾರು ಬೀದಿಗಳ ವಿನ್ಯಾಸ ಭಗ್ನವಾಗಿದೆ. ಜನರ ಅಸಹಾಯಕತೆಯು ಕೆಲಮಟ್ಟಿಗೆ ಜಾತಿಭೇದವನ್ನು ಮರೆಯುವಂತೆ ಮಾಡಿದೆ, ನಿಜ. ಆದರೂ ಶೆಡ್ಡುಗಳಲ್ಲಿಯೂ ಜನರು ತಮ್ಮ ಜಾತಿಗಳಿಗೆ ಅನುಸಾರವಾಗಿ ಬೇರೆಯಿರುವುದು ತಿಳಿಯಿತು. ವಿಪತ್ತಿನ ಆಘಾತದಲ್ಲಿ ಜಾತಿಯನ್ನು ತಾತ್ಕಾಲಿಕವಾಗಿ ಮರೆಯುವ ಜನ, ದೈನಿಕ ಜೀವನ ಆರಂಭವಾದೊಡನೆ ಅದರ ನಿಯಂತ್ರಣಕ್ಕೆ ಒಳಗಾಗುತ್ತಿರುವುದು ಕಂಡಿತು.

ತಾವು ಹುಟ್ಟಿ ಬೆಳೆದ ಊರಿನ ಜತೆಗೆ ಜನರಿಗೆ ಸಹಜವಾಗಿ ಭಾವನಾತ್ಮಕವೂ ಸಾಂಸ್ಕೃತಿಕವೂ ಆದ ನೆನಪುಗಳಿರುತ್ತವೆ. ಅವುಗಳಿಂದ ಕಿತ್ತುಕೊಂಡು ಹೊಸ ಜಾಗಕ್ಕೆ ಹೋಗುವುದು ಅಷ್ಟು ಸುಲಭವಲ್ಲ. ಆದರೆ ಮತ್ತೆ ಮತ್ತೆ ಪ್ರವಾಹಕ್ಕೆ ತುತ್ತಾಗುವ ಭಯದಿಂದ, ಜನ ಈ ಸಲ ತಮ್ಮ ಈ ಭಾವನಾತ್ಮಕ ಸಾಂಸ್ಕೃತಿಕ ಸ್ಮೃತಿಗಳನ್ನು ಬಿಟ್ಟುಕೊಟ್ಟು ಹೋಗಲು ಸಿದ್ಧವಾಗಿರುವುದು ತಿಳಿಯಿತು.

ಊರುಗಳಲ್ಲಿ ಜಾತಿವಾರು ಕೇರಿಗಳಿದ್ದಂತೆ ಜಾತಿವಾರು ಗುಡಿಗಳೂ ಇವೆ. ಉದಾಹರಣೆಗೆ, ಬಡಿಗೇರರು ಪೂಜೆ ಮಾಡುವ ದ್ಯಾಮವ್ವನ ಗುಡಿಯು ಊರದೇವತೆಯಾಗಿದ್ದರೆ, ದಲಿತರು ಪೂಜಿಸುವ ದುರ್ಗವ್ವನ ಗುಡಿಯು ದಲಿತರಿಗೇ ಸೀಮಿತವಾಗಿದೆ. ಜನರು ತಮ್ಮ ಗ್ರಾಮ ಸ್ಥಳಾಂತರವಾದಾಗ, ಈ ಧಾರ್ಮಿಕ ಕಟ್ಟಡಗಳೂ ಜತೆಗೆ ಬರಬೇಕೆಂದು ಬಯಸುತ್ತಿದ್ದಾರೆ. ಇದರಲ್ಲಿ ವಿಶೇಷವೆಂದರೆ, ಮೊಹರಂ ಮಸೀದಿಯದು. ಇದು ಊರಿನ ಎಲ್ಲ ಜನರಿಗೂ ಸೇರಿದ್ದು, ಊರ ನಡುವೆಯಿದೆ. ಕೆಲವು ಕಡೆ ಇದು ಹನುಮಂತನ ಅಥವಾ ದ್ಯಾಮವ್ವನ ಗುಡಿಯ ಪಕ್ಕವೇಯಿದೆ. ಮೊಹರಂ ಹಬ್ಬವು ಜಾತಿಮತಗಳಾಚೆ ಊರಿನ ಸಾಮರಸ್ಯದ ಹಬ್ಬವಾಗಿದ್ದು, ಊರಲ್ಲಿ ಮುಸ್ಲಿಮರು ಇಲ್ಲದಿರುವ ಕಡೆ ಕೂಡ ಮೊಹರಂ ಮಸೀದಿಗಳಿವೆ. ಆದರೂ ಎಲ್ಲ ಜಾತಿಯ ಮೊಹರಂ ಮಸೀದಿಯನ್ನು ಸಹ ಹೊಸ ಊರಿಗೆ ಒಯ್ಯಬೇಕೆಂದು ಜನರು ಬಯಸಿದರು. ದೈವಗಳು ಜನರ ಸಾಮಾಜಿಕ ಧಾರ್ಮಿಕ ಜೀವನದ ಪ್ರಮುಖ ಅಸ್ಮಿತೆಗಳಾಗಿವೆ.

ರಾಜಕೀಯವಾಗಿ ಆರ್ಥಿಕವಾಗಿ ಬಲಿಷ್ಠರಾದ ಜಾತಿಯವರು ಪರಿಹಾರ ಪಡೆಯುವುದರಲ್ಲಿ ಮುಂದಿದ್ದಾರೆ. ಅವರಿಗೆ ಹೊಸದಾಗಿ ರೂಪುಗೊಳ್ಳುವ ಊರಿನಲ್ಲಿಯೂ ತಕ್ಕ ಪರಿಹಾರ ಪಡೆಯುವ ಭರವಸೆ ಮತ್ತು ಶಕ್ತಿಯೂ ಇದೆ. ಸಾಮಾಜಿಕ ನ್ಯಾಯದ ದೃಷ್ಟಿಕೋನದಿಂದ ಸರ್ಕಾರವು ದಲಿತರ ಮೇಲೆ ಹೆಚ್ಚು ಗಮನ ಹರಿಸುವ ಸಾಧ್ಯತೆಯೂ ಇದೆ. ಆದರೆ ಈ ನಡುವೆ ಅಲ್ಪಸಂಖ್ಯಾತ ಜಾತಿಗಳಾದ ಬಡಿಗೇರರು, ಬೆಸ್ತರು, ಇವರಿಗೆ ಸೇರಿದ ಮತ್ತು ಊರಲ್ಲಿ ಒಂದೆರಡು ಕುಟುಂಬ ಇರುವ ಮುಸ್ಲಿಮರ ಮನೆಯವರಿಗೆ ಪರಿಹಾರ ಸಿಗುವ ವಿಷಯದಲ್ಲಿ ಒಂದು ಬಗೆಯ ಅಭದ್ರತೆಯ ಭಾವನೆಯಿರುವುದು ಕಂಡಿತು.

ಹೊಲ ಮನೆ ಸಂಪತ್ತಿನ ನಾಶದಿಂದ ಆಗಿರುವ ದುಃಖವು ಸಮಾನವಾಗಿ ಪುರುಷರಿಗೂ ಮಹಿಳೆಯರಿಗೂ ಆಗಿದೆ. ಆದರೂ ಸಾರ್ವಜನಿಕ ಬದುಕಿನಲ್ಲಿ ಒಡನಾಟವುಳ್ಳ ಪುರುಷರಿಗಿಂತ ಮನೆಯನ್ನು ತನ್ನ ಬಾಳಿನ ಮುಖ್ಯ ಭಾಗ ಮತ್ತು ತನ್ನ ಐಡೆಂಟಿಟಿಯ ಕುರುಹನ್ನಾಗಿ ಮಾಡಿಕೊಂಡಿರುವ ಮಹಿಳೆಯರಿಗೆ, ಮನೆಬಿದ್ದಿರುವುದು ಮಾನಸಿಕವಾಗಿ ಹೆಚ್ಚು ವೇದನೆ ತಂದಿದೆ. ತಾತ್ಕಾಲಿಕ ಶೆಡ್ಡುಗಳಲ್ಲಿ ಅಥವಾ ಶಾಲೆಗಳಲ್ಲಿ ಅವರು ಇದ್ದಾರೆ. ಆದರೂ ತಮ್ಮ ಸ್ವಂತ ಮನೆಗೆ ಯಾವಾಗ ಹೋದೇವೊ, ಸಂಸಾರವನ್ನು ಹಿಂದಿನಂತೆ ಶುರುಮಾಡಿಯೇವೊ ಎಂಬ ತುಡಿತವೂ ಅವರಲ್ಲಿ ತೀವ್ರವಾಗಿದೆ. ಹೊಸಮನೆಗೆ ಹೋಗುವ ತನಕ ಅವರಲ್ಲಿ ಮಾನಸಿಕವಾಗಿ ಭಗ್ನತೆ ಮತ್ತು ಅಭದ್ರತೆಯ ಮನಃಸ್ಥಿತಿ ಮುಂದುವರೆಯುವಂತೆ ತೋರುತ್ತದೆ.


ಜನರು ಮನೆ ಕಳೆದುಕೊಂಡು ತಾತ್ಕಾಲಿಕವಾದ ಶೆಡ್ಡುಗಳಲ್ಲಿ ಬಂದು ಉಳಿದಿದ್ದಾರೆ. ಆದರೆ ಅವರ ಮುಂದೆ 2007ರ ನೆರೆಯ ಸಂದರ್ಭದಲ್ಲಿ ಮನೆ ಕಳೆದುಕೊಂಡು ಹೋದವರು ಖಾಯಂ ಮನೆ ಸಿಗದೆ ಎರಡು ವರ್ಷಗಳಿಂದ ಬದುಕುತ್ತಿರುವ ನಿದರ್ಶನವೂ ಇದೆ. ಎರಡು ವರ್ಷಗಳಿಂದ ಶೆಡ್ಡುಗಳಲ್ಲಿ ಇರುವವರು ಅಲ್ಲಿನ ಪರಿಸರಕ್ಕೆ ಕೊಂಚ ಹೊಂದಿಕೊಂಡಿದ್ದಾರೆ. ಆದರೂ ಅನಿಶ್ಚಿತ ಕಾಲದವರೆಗೆ ಶೆಡ್ಡುಗಳಲ್ಲಿ ಇರುವುದು, ಬಿಡುಗಡೆಯ ಭರವಸೆಯೇ ಇಲ್ಲದ ಕೈದಿಯಂತೆ ಅವರಲ್ಲಿ ಹತಾಶೆಯುಂಟುಮಾಡಿದೆ.

ಪೂರ್ಣ ಸ್ಥಳಾಂತರವಾಗುವ ಹಳ್ಳಿಗಳಲ್ಲಿ ಜನರಿಗೆ ಹೊಸ ಮನೆ ಹೊಸ ಗ್ರಾಮ ಸಿಗುವ ಒಂದು ಭರವಸೆಯೇನೊ ಇದೆ. ಆದರೆ ಹೊಳೆ, ಹಳ್ಳಗಳ ಹಾವಳಿಯಿಲ್ಲದೆ, ಕೇವಲ ಅತಿಮಳೆಯಿಂದ ಹಾನಿಗೆ ಒಳಗಾಗಿರುವ, ಸ್ಥಳಾಂತರಗೊಳ್ಳದ ಹಳ್ಳಿಗಳ ಜನರಿಗೆ ಪರಿಹಾರದ ವಿತರಣೆಯ ವಿಷಯದಲ್ಲಿ ಹೆಚ್ಚು ನೋವುಗಳಿದ್ದಂತೆ ತೋರಿತು. ಇದನ್ನು ರೋಣ ತಾಲೂಕಿನ ಮಾಡಲಗೇರಿಯಲ್ಲಿ ಕಂಡೆವು. ಆಸ್ತಿ, ಗಂಡುಮಕ್ಕಳು, ಇರುವ ಮನೆಗಳಲ್ಲಿ ಮಳೆ ನೆರೆಯ ಕಷ್ಟ ತಾಳುವಿಕೆಯ ಶಕ್ತಿಯು ಕೊಂಚ ಇದ್ದಂತೆ ಕಂಡಿತು. ಆದರೆ ಆಸ್ತಿಯಿಲ್ಲದ, ಪ್ರಾಯದ ಗಂಡುಮಕ್ಕಳಿಲ್ಲದ, ಹಾಗೂ ಕೇವಲ ವಯಸ್ಸಾದವರು ಇರುವ ಮನೆಗಳಲ್ಲಿ ನೆರೆಯ ಪ್ರವಾಹವು ಹೆಚ್ಚು ಆಘಾತ ತಂದಂತಿತ್ತು.

ನೆರೆ ಬಂದ ದಿವಸ ಜನರು ದಿಕ್ಕು ತೋಚದಂತೆ ಓಡಿಹೋಗಿ ಅಲ್ಲಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಆಗ ಗ್ರಾಮದವರು ಪರಸ್ಪರ ರಕ್ಷಿಸಿಕೊಂಡಿದ್ದಾರೆ ಮತ್ತು ಸಂತೈಸಿದ್ದಾರೆ. ಗಟ್ಟಿಮುಟ್ಟಾದ ಮನೆಯಿದ್ದವರು ಜನರ ಜಾತಿಮತ ನೋಡದೆ ಅವರಿಗೆ ನೆಲೆಸಲು ಜಾಗ, ಉಣ್ಣಲು ಆಹಾರ ನೀಡಿ, ಮಾನವೀಯತೆ ಮೆರೆದಿದ್ದಾರೆ. ಕೆಲವು ಗ್ರಾಮಗಳಿಗೆ ಮೂರು ದಿವಸವಾದರೂ ಹೊರ ಜಗತ್ತಿನಿಂದ ಯಾವುದೇ ಸಹಾಯ ತಲುಪಲು ಸಾಧ್ಯವಾಗಿಲ್ಲ. ಅಂತಹ ಸಂದರ್ಭದಲ್ಲಿ ಇಡೀ ಗ್ರಾಮವೇ









ಒಂದು ಕುಟುಂಬವೆಂಬಂತೆ ವರ್ತಿಸಿದೆ. ಸಂಕಷ್ಟದ ಸಮಯವು ಭೇದ ಮರೆತು ಪರಸ್ಪರ ಹಂಚಿಕೊಂಡು ಬದುಕುವ ಭಾವೈಕ್ಯತೆಯ ಪ್ರದರ್ಶನಕ್ಕೆ ಕಾರಣವಾಗಿದೆ. ಆದರೆ ಪ್ರವಾಹ ಇಳಿದೊಡನೆ ಮತ್ತೆ ಸಾಮಾಜಿಕ ತಾರತಮ್ಯದ ಪ್ರಜ್ಞೆಯು ಕೆಲಸ ಮಾಡತೊಡಗಿದೆ. ಎಲ್ಲ ಜಾತಿಯವರ ಜತೆ ಇರಬೇಕಾಗಿ ಬಂದದ್ದರ ಬಗ್ಗೆ ಕೆಲವು ಮೇಲುಜಾತಿಯ ಹೆಂಗಸರು ಬೇಸರ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದ ನಿದರ್ಶನಗಳೂ ಇದ್ದವು.

ಜಲಾವೃತಗೊಂಡ ಗ್ರಾಮಗಳಲ್ಲಿ ಬಹುತೇಕ ನೆರೆಯ ಹೊಡೆತಕ್ಕೆ ಸಿಕ್ಕ ದಲಿತರು ಮೊದಲಿಗೇ ಊರು ಬಿಟ್ಟು ಸರ್ಕಾರಿ ಶಾಲೆ, ಕಾಲೇಜು ಹಾಗೂ ಸಮುದಾಯ ಭವನಗಳಲ್ಲಿ ಆಶ್ರಯ ಪಡೆದರು. ಆದರೆ ಮೇಲ್ಜಾತಿ ಮತ್ತು ಮೇಲ್ವರ್ಗದ ಜನ ತಮ್ಮ ಬಂಧುಗಳಲ್ಲಿ ಹಾಗೂ ಗುಡಿಗಳಲ್ಲಿ ಆಶ್ರಯ ಪಡೆದುಕೊಂಡರು. ದಲಿತರಿಗೆ ಗುಡಿಗಳಿಗಿಂತಲೂ ಸಾರ್ವಜನಿಕ ಕಟ್ಟಡಗಳು ಹಾಗೂ ಎಲ್ಲ ಜನರಿಗೆ ಪ್ರವೇಶವುಳ್ಳ ದರ್ಗಾ ಮತ್ತು ಗುಡಿಗಳು ಆಶ್ರಯ ನೀಡಿವೆ. ಇದು ನಮ್ಮ ಸಮಾಜದಲ್ಲಿ ಸಾರ್ವಜನಿಕ ಸಂಸ್ಥೆ ಮತ್ತು ಕಟ್ಟಡಗಳ ಮಹತ್ವವನ್ನು ಸೂಚಿಸುತ್ತದೆ.

ಹೆಡಗಿನಹಾಳವು ಸಂಪೂರ್ಣ ಜಲಾವೃತಗೊಂಡು ಕತ್ತಲೆಯಲ್ಲಿ ಮುಳುಗಿರುವಾಗ ಆ ಊರಿನ ಈರಪ್ಪ, ರಾಮಲಿಂಗಪ್ಪ ಎಂಬ ಅಂಬಿಗರು ನಾಡದೋಣಿಯ ಮೂಲಕ, ತುಂಗಭದ್ರೆಯ ಭೀಕರ ಪ್ರವಾಹದಲ್ಲಿಯೇ ಸುಮಾರು 300–400 ಜನರ ಪ್ರಾಣ ರಕ್ಷಿಸಿದರು. ಅವರು ಇಡೀ ರಾತ್ರಿ ಮೂವರು ಹುಟ್ಟು ಹಾಕುತ್ತ ಒಂದೇ ದೋಣಿಯಲ್ಲಿ ಒಂದು ಟ್ರಿಪ್ಪಿಗೆ 20ರಂತೆ ಜನರನ್ನು ಪಾರುಗಾಣಿಸಿದರು. ಆದರೆ ಅವರ ಸಾಹಸವನ್ನು ಮಾಧ್ಯಮಗಳಿಗಾಗಲಿ ಪ್ರಭುತ್ವಕ್ಕಾಗಲಿ ಸರಿಯಾಗಿ ಗುರುತಿಸಲು ಸಾಧ್ಯವಾಗಿಲ್ಲ. ಇಂಥ ಹಲವಾರು ಮಾನವೀಯ ಸಾಹಸದ ಘಟನೆಗಳೂ ನೆರೆಯ ಸಂದರ್ಭದಲ್ಲಿ ಪ್ರಕಟವಾಗಿವೆ.

ಪರಿಹಾರಗಳನ್ನು ಹಂಚುವಾಗ ಜಾತಿ–ಉಪಜಾತಿ ಪ್ರಜ್ಞೆಯು ಕೆಲಸ ಮಾಡಿರುವುದು ಕೆಲವು ಕಡೆ ಕಂಡುಬಂದಿತು. ಶಹಾಪೂರ ತಾಲ್ಲೂಕಿನ ಗುಂಡ್ಲೂರು (ಕೃಷ್ಣಾ–ಭೀಮಾ ಸೇರುವ ಸಂಗಮದಲ್ಲಿದ್ದು) ಸಂಪೂರ್ಣ ನೀರಿನಲ್ಲಿ ಕೊಚ್ಚಿಕೊಂಡು ಹೋದ ಗ್ರಾಮಗಳಲ್ಲಿ ಒಂದು. ಇಲ್ಲಿನ ಒಟ್ಟು 120 ಮನೆಗಳ ಪೈಕಿ 80ರಷ್ಟು ಮುಸ್ಲಿಮರವು. ಅವರಲ್ಲಿ ಮುಸ್ಲಿಮರ ನಿರ್ದಿಷ್ಟ ಬಣಕ್ಕೆ ಸೇರಿದ ನಲವತ್ತೆರಡು ಕುಟುಂಬಗಳಿಗೆ ಪರಿಹಾರದ ಸಾಮಗ್ರಿಗಳು ತಲುಪಿವೆ. ಉಳಿದ ಬಣದ ಮುಸ್ಲಿಂ ಮನೆಗಳಿಗೆ ತಲುಪಿಲ್ಲ. ಇದಕ್ಕೆ ಕಾರಣ, ಅಲ್ಲಿಯ ಪಂಚಾಯಿತಿ ಸದಸ್ಯನು ಮುಸ್ಲಿಮರ ಒಂದು ಪಂಗಡಕ್ಕೆ ಸೇರಿದವನಾಗಿದ್ದು, ಆತ ತನ್ನ ಪಂಗಡದವರಿಗೆ ಮಾತ್ರ ಪರಿಹಾರ ದೊರಕುವಂತೆ ನೋಡಿಕೊಂಡಿದ್ದಾನೆ. ರಾಯಚೂರು ಜಿಲ್ಲೆಯ ತಲಮಾರಿ ಎಂಬ ಗ್ರಾಮದಲ್ಲೂ ಜಾತಿ ಮತ್ತು ಪಕ್ಷ ರಾಜಕಾರಣಗಳು ಪರಿಹಾರ ವಿತರಣೆಯಲ್ಲಿ ಕೆಲಸ ಮಾಡಿರುವುದು ಕಂಡುಬಂದಿತು.

ತಾತ್ಕಾಲಿಕ ಶೆಡ್ಡುಗಳಿಗೆ ಬಡವರು, ದಲಿತರು, ಕೆಳಜಾತಿಯವರು ಶಿಫ್ಟ್ ಆಗಿದ್ದಾರೆ. ಆದರೆ ಉಚ್ಚಜಾತಿಯವರು ಮತ್ತು ಶ್ರೀಮಂತರು ಅಲ್ಲಿಗೆ ಹೋಗಲು ಅವರ ಜಾತಿ ಮತ್ತು ವರ್ಗಗಳು ಅಡ್ಡಿಯಾಗಿವೆ. ಕೆಳಜಾತಿಯ ಜನರು ಶೆಡ್ಡಿನ ಪಕ್ಕದಲ್ಲಿಯೇ ಕೌದಿ, ಪ್ಲಾಸ್ಟಿಕ್ ಪರದೆ ಕಟ್ಟಿಕೊಂಡು ಮರೆಮಾಡಿಕೊಂಡು ಜಳಕ ಮಾಡುತ್ತಿದ್ದರು. ಆದರೆ ಸವರ್ಣೀಯರಲ್ಲಿ ಕೆಲವರು ಅಲ್ಲಿ ಹೋಗುವುದು ತಮ್ಮ ಅಂತಸ್ತಿಗೆ ಕಡಿಮೆ ಎಂಬ ಭಾವದಲ್ಲಿ ಹೋಗಿಲ್ಲ. ಸಿಂಧನೂರ ತಾಲ್ಲೂಕಿನ ಹುಲುಗುಂಚಿ ಗ್ರಾಮದ ಲಿಂಗಾಯತ ರೆಡ್ಡಿ ಮಹಿಳೆಯೊಬ್ಬರು ಶೆಡ್ಡುಗಳಲ್ಲಿ ಜಳಕದ ಸೌಕರ್ಯವಿಲ್ಲವೆಂದು, ತಮ್ಮ ಬಿದ್ದ ಮನೆಯಲ್ಲಿಯೇ ವಾಸವಾಗಿದ್ದರು.

ನೆರೆಬಂದಾಗ ಅವಸರದಲ್ಲಿ ಮನೆಯನ್ನು ಖಾಲಿ ಮಾಡುವಾಗ ವಯಸ್ಸಾದವರು ಹಾಗೂ ವಿಭಿನ್ನ ಸಾಮರ್ಥ್ಯದವರು (ಅಂಗವಿಕಲರು) ವಿಶೇಷವಾದ ಕಷ್ಟವನ್ನು ಪಟ್ಟಿರುವುದು ಗೊತ್ತಾಯಿತು. ಮನೆಯಲ್ಲಿ ಗಟ್ಟಿಮುಟ್ಟಾದವರು ಮನೆಯ ವ್ಯಕ್ತಿಗಳನ್ನು ವಸ್ತು ಮತ್ತು ಜಾನುವಾರನ್ನು ಸಾಗಿಸುವಾಗ, ಈ ಮುದುಕರನ್ನು ಅಲಕ್ಷಿಸಿರುವ ನಿದರ್ಶನಗಳು ಕಂಡುಬಂದವು. 'ತಮ್ಮ ಮಕ್ಕಳು ಹೆಂಡಿರು ಮಕ್ಕಳನ್ನು ಪಾರುಮಾಡುವಲ್ಲಿ ತೋರಿದ ಉತ್ಸಾಹವನ್ನು ತಮ್ಮನ್ನು ಪಾರುಮಾಡುವಲ್ಲಿ ತೋರಲಿಲ್ಲ' ಎಂಬ ಬೇಸರವನ್ನು ಹಚ್ಚೊಳ್ಳಿಯಲ್ಲಿ ಕೆಲವರು ವೃದ್ಧರು ವ್ಯಕ್ತಪಡಿಸಿದರು. ಕೆಲವು ಕಡೆ, "ಕಷ್ಟಕ್ಕೆ ಈಡಾಗಿರುವ ಕುಟುಂಬ ಸದಸ್ಯರನ್ನು ನೋಡಲು ಗಂಡಂದಿರ ಮನೆಯಲ್ಲಿದ್ದ ಹೆಣ್ಣುಮಕ್ಕಳು ಬಂದಿದ್ದಾರೆ. ಆದರೆ ಸರ್ಕಾರಿ ನೌಕರಿಯಲ್ಲಿರುವ ಗಂಡುಮಕ್ಕಳು ಬಂದಿಲ್ಲ"ವೆಂದು ಕೆಲವು ತಂದೆತಾಯಿಗಳು ದೂರಿದರು. ನೆರೆ ಬಂದಾಗ, ಕೆಲವು ಹಿರಿಯರು ಕೂಡ ಮನೆಬಿಟ್ಟು ಬರಲು ಹಟ, ಇಲ್ಲವೇ ತಡ ಮಾಡಿರುವ ನಿದರ್ಶನಗಳೂ ಉಂಟು. ಹೀಗಾಗಿ ಹಚ್ಚೊಳ್ಳಿಯಲ್ಲಿ ಒಬ್ಬ ಮಾದಿಗರ ಮುದುಕಿಯು, ಹಟ್ಟಿಯಲ್ಲೇ ಉಳಿದು, ನೀರಲ್ಲಿ ಮುಳುಗಿ ಪ್ರಾಣಬಿಟ್ಟಿದ್ದಾರೆ. ಆಕೆಯ ಹೆಣವನ್ನು ಸರ್ಕಾರದವರು ಬಂದು ಮಹಜರು ಮಾಡಲು ಮೂರುದಿನಗಳ ಕಾಲ ಆಗಲಿಲ್ಲ. ಹೀಗಾಗಿ ಜನ ದಫನ್ ಮಾಡಿದರು. ಹೆಣವನ್ನು ಮಹಜರ್ ಮಾಡದೆ ಇರುವುದರಿಂದ ಆಡಳಿತದವರು ಅವರಿಗೆ ಪರಿಹಾರ ಕೊಡಲು ಸಾಧ್ಯವಾಗಿಲ್ಲ. ಈ ಕಾರಣಕ್ಕೆ ಆ ಮುದುಕಿಯ ವಾರಸುದಾರರು ಪರಿಹಾರಕ್ಕಾಗಿ ಅಲೆದಾಡುತ್ತಿದ್ದಾರೆ.

ಪ್ರವಾಹದಿಂದ ಎಲ್ಲ ಬಗೆಯ ಜನರು ಕಷ್ಟಕ್ಕೆ ಸಿಲುಕಿದ್ದರೂ, ಮಹಿಳೆಯರ ಕಷ್ಟಗಳು ವಿಶೇಷವಾಗಿವೆ. ಅವರಿಗೆ ಸಾಮಾನ್ಯವಾಗಿ ಈಜು ಬರುವುದಿಲ್ಲ. ಅವರ ಉಡುಪು ಸೀರೆ ಕೂಡ ನೀರಿನಲ್ಲಿ ನಡೆದು ಹೋಗುವುದಕ್ಕಾಗಲಿ, ಓಡಿಹೋಗುವುದಕ್ಕಾಗಲಿ ಪೂರಕವಾಗಿರಲಿಲ್ಲ. ಮನೆಯ ಸಣ್ಣಪುಟ್ಟ ವಸ್ತುಗಳ ಜತೆ ಅವರಿಗೆ ಗಂಡಸರಿಗಿಂತ ಹೆಚ್ಚಿನ ಆಪ್ತಸಂಬಂಧ ಇರುವ ಕಾರಣ, ಅವನ್ನು ತೆಗೆದುಕೊಂಡು ಹೋಗಲು ಅವರು ಪಡಿಪಾಟಲು ಪಟ್ಟಿದ್ದಾರೆ. ಅದರಲ್ಲೂ ಗರ್ಭಿಣಿಯರು ಮತ್ತು ಬಾಣಂತಿಯರು ವಿಶೇಷವಾಗಿ ಕಷ್ಟಪಟ್ಟಿದ್ದಾರೆ. ಪ್ರವಾಹದ ಮುನ್ನಾದಿನ, ಪ್ರವಾಹದ ಅವಧಿ ಮತ್ತು ಅನಂತರದ ದಿನಗಳಲ್ಲಿ ಅಸುರಕ್ಷಿತ ಹೆರಿಗೆಗಳಾಗಿವೆ. ಸಂಚಾರಿ ಹೆರಿಗೆ ಆಸ್ಪತ್ರೆ ಇಲ್ಲದ ಕಾರಣ, ಅದರ ಸೌಲಭ್ಯ ಮಹಿಳೆಯರಿಗೆ ಲಭ್ಯವಾಗಿಲ್ಲ. ಶಾಲೆ, ಸಮುದಾಯಭವನಗಳಿಗೆ

ಅವು ಭರಿಸಲಾರದಷ್ಟು ಜನರನ್ನು ಸ್ಥಳಾಂತರಿಸಲಾಯಿತು. ಮೂರು ದಿನದಿಂದ ಒಂದು ವಾರದವರೆಗೂ ಜನರನ್ನು ಒಂದೆಡೆ ಹಾಕಲಾಗಿತ್ತು. ಊಟದ ವ್ಯವಸ್ಥೆಯೇನೊ ಮಾಡಲಾಗಿತ್ತು. ಆದರೆ ಮಹಿಳೆಯರು, ಬಸುರಿ, ಬಾಣಂತಿಯರು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಸೌಲಭ್ಯ ನೀಡಲು ಸಾಧ್ಯವಾಗಲಿಲ್ಲ. ಈ ಅವಧಿಯಲ್ಲಿ ಸ್ನಾನ ಮತ್ತು ಶೌಚಕ್ಕಾಗಿ ಮಹಿಳೆಯರು, ಅದರಲ್ಲೂ ತರುಣಿಯರು ಬಹಳ ಕಷ್ಟಪಟ್ಟಿರುವರು. ಉದಾ.ಗೆ, ಚಿಕ್ಕಮಂಚಾಲೆ ಗ್ರಾಮದಲ್ಲಿ ಗುಡ್ಡದ ಮೇಲಿರುವ ಗಣಪತಿ ಗುಡಿಯ ಆವರಣದಲ್ಲಿ ಹೋಗಿ ಜನ ನೆಲೆ ನಿಂತಿದ್ದಾರೆ. ದೇವಸ್ಥಾನ ಕಮಿಟಿ ಜನರಿಗೆ ಊಟ ಹಾಕಿದೆ. ಆದರೆ ಹುಡುಗಿಯರು ಮಾತ್ರ ಹೊಟ್ಟೆ ತುಂಬ ಉಂಡಿಲ್ಲ. ಉಂಡರೆ ಶೌಚಕ್ಕೆ ಹೋಗಬೇಕು. ದೇವಸ್ಥಾನದ ಆವರಣದಲ್ಲಿ ಇದು ಸಾಧ್ಯವಿಲ್ಲ. ದೂರ ಹೋಗಲೇ ಬೇಕೆಂದರೆ ಕಣ್ಣು ಹರಿದಷ್ಟು ದೂರ ನೀರು. ಹೀಗಾಗಿ ರಾತ್ರಿ ಮಲಗಲು ಸಾಧ್ಯವಾಗಿಲ್ಲ. ಅವರ ಪಾಡಿನ ಬಗ್ಗೆ ಕೇಳಿದಾಗ, 'ಅದನ್ನು ನೀವು ಕೇಳಬಾರದು. ನಾವು ಹೇಳಬಾರದು. ಹೆಣ್ಮಕ್ಕಳ ಮಾನ ಅಂದ್ರ ಎಷ್ಟಿರತದರಿ? ಇದ್ದಟ್ ಮಾನ ಗಂಗವ್ವನ ಸಂಗಾಳೇ ಹರಿದು ಹೋಗ್ಯಾದರಿ' ಎನ್ನುತ್ತ ಕಣ್ಣಲ್ಲಿ ನೀರು ತೆಗೆದರು.

ಈಗ ಮಹಿಳೆಯರು ಹೊಸ ಶೆಡ್ಡುಗಳಲ್ಲಿ ಗಂಡಸರಿಗಿಂತಲೂ ಬಹಳ ಸಮಯ ಅಡುಗೆ, ಮಕ್ಕಳ ಪೋಷಣೆ, ಹೆರಿಗೆ, ಗರ್ಭಿಣಿಯರಾಗಿ ಕಾಲ ಕಳೆಯಬೇಕಾಗಿದೆ. ಶೆಡ್ಡುಗಳಲ್ಲಿ ಕುಡಿಯುವ ನೀರಿಲ್ಲ; ಮಹಿಳೆಯರಿಗಾಗಿ ಸ್ನಾನದ ಮನೆಯಿಲ್ಲ. ಇದರಿಂದ, ಒಂದು ಬಗೆಯಲ್ಲಿ ಬಂಧನದಲ್ಲಿರುವ ಮಾನಸಿಕ ಅವಸ್ಥೆಯನ್ನು ಅವರು ಅನುಭವಿಸುತ್ತಿದ್ದಾರೆ. ಇದು ಎರಡು ವರ್ಷಗಳಿಂದ ಶೆಡ್ಡುಗಳಲ್ಲಿ ಇರುವವರಲ್ಲಿ ಇನ್ನೂ ಹೆಚ್ಚಾಗಿದೆ. ಜಾತ್ರೆ, ಉತ್ಸವ ಇತ್ಯಾದಿ ಊರಲ್ಲಿದ್ದ ಸಾಮುದಾಯಿಕ ಬದುಕು ಮತ್ತು ಮನರಂಜನೆ ಅವರಿಗೆ ಇಲ್ಲವಾಗಿದೆ. ಪಿಸುಗುಟ್ಟಿದರೂ ಪಕ್ಕದ ಶೆಡ್ಡಿನವರಿಗೆ ಕೇಳುವ ಸನ್ನಿವೇಶವಿದ್ದು, ಶೆಡ್ಡುಗಳಲ್ಲಿ ಖಾಸಗಿ ಬದುಕಿನ ಅನೇಕ ಬಯಕೆಯನ್ನು ಈಡೇರಿಸಿಕೊಳ್ಳಲು ಆಗಿರುವುದಿಲ್ಲ. ತಮ್ಮ ಇದ್ದಬದ್ದ ವಸ್ತುಗಳನ್ನು ಟೆಂಟುಗಳಲ್ಲಿ ರಕ್ಷಿಸಿಕೊಳ್ಳುವುದು ಕಷ್ಟವಾಗಿದೆ. ಆಭರಣಗಳನ್ನು ಇಡಲು ಜಾಗವಿಲ್ಲದೆ ಕೆಲವರು ಅವನ್ನು 24 ಗಂಟೆಯೂ ಧರಿಸಿಕೊಂಡು ಇರುವುದನ್ನು ನಾವು, ಹುನಗುಂದ ತಾಲೂಕಿನ ವರಗೋಡದಿನ್ನಿಯಲ್ಲಿ ನೋಡಿದೆವು.

ಇಷ್ಟಾದರೂ ಜನರಲ್ಲಿ ವಿಪತ್ತನ್ನು ಎದುರಿಸಲು ಬೇಕಾದ ಧೈರ್ಯ ಮತ್ತು ತಮ್ಮ ಬದುಕನ್ನು ಮತ್ತೆ ಕಟ್ಟಿಕೊಳ್ಳುವ ಭರವಸೆ ಅಪಾರವಾಗಿದೆ. ಸರ್ಕಾರಿ ಯಂತ್ರಾಂಗವು ತಲುಪಲು ಸಾಧ್ಯವಾಗದಿದ್ದ ಕಡೆ ನೀರಿನ ಏರುವಿಕೆಯನ್ನು ನೋಡಿ ಖುದ್ದಾಗಿ ಜನರು ತಾವೇ ಊರು ಖಾಲಿಮಾಡಿ ಸೂಕ್ತಜಾಗಗಳಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ರಾಯಚೂರು ಜಿಲ್ಲೆಯ ತಲಮಾರಿ ಮತ್ತು ಹುಲಗುಂಚಿ ಗ್ರಾಮಗಳು ನದಿಯಿಂದ 5-6 ಕಿ.ಮೀ. ದೂರದಲ್ಲಿವೆ. ನೀರು ಬಂದರೂ ಊರುಮುಳುಗಲು ಸಾಧ್ಯವಿಲ್ಲ ಎಂಬುದು ಜನರ ಹಿಂದಿನ ಅನುಭವ ವಾಗಿತ್ತು. ಆದರೆ 2.10.2009ರಂದು ನೀರು ಊರನ್ನು ಸುತ್ತವರೆದು ನಿಂತಾಗ ಜನರಿಗೆ ಗಾಭರಿಯಾಯಿತು. ಮಧ್ಯರಾತ್ರಿಯಲ್ಲೇ ಊರು ಖಾಲಿ ಮಾಡಬೇಕಾದ ಪ್ರಸಂಗ ಬಂದಿತು. ಮನೆಯ ವಸ್ತುಗಳನ್ನು ಒಯ್ಯಲು ಅವರಿಗೆ ಸಾಧ್ಯವಾಗಲಿಲ್ಲ. ಕೆಲವು ಕಡೆ ಧೈರ್ಯ ಮತ್ತು ಹುಂಬತನದಿಂದ ಅಲ್ಲೇ ಉಳಿದವರು ಕೊನೆ ಕ್ಷಣದಲ್ಲಿ ಮರ, ಮಾಳಿಗೆ ಹತ್ತಿದ್ದಾರೆ. ಆಗ ಕೆಲವೊಂದು ಸಾಹಸಿಗಳು ಮುದುಕರು, ಮಹಿಳೆಯರನ್ನು ಉಳಿಸಿದ್ದಾರೆ. ಪ್ರವಾಹವು ಜನರಲ್ಲಿದ್ದ ಸಾಹಸ ಪ್ರವೃತ್ತಿಯನ್ನು ಹೊರಗೆಡವಿದೆ. ಜತೆಗೆ ಸಹಕಾರ ಮನೋಭಾವವನ್ನು ಸಹ. ಅವರು ತಮ್ಮಲ್ಲಿದ್ದ ಆಹಾರವನ್ನು ಪರಸ್ಪರ ಹಂಚಿಕೊಂಡಿದ್ದಾರೆ. ಅವರು ತಮ್ಮ ಹೊಸ ಮನೆಯನ್ನು ಹೊಸ ಊರಿನಲ್ಲಿ ಕಟ್ಟಿಕೊಳ್ಳುವ ಬಗ್ಗೆ ಕನಸನ್ನು ಕಟ್ಟಿಕೊಂಡಿದ್ದಾರೆ. ಆಘಾತ, ನಿರಾಶೆ ಗೊಂದಲಗಳಿದ್ದರೂ ಬದುಕುವ ಅದಮ್ಯ ಶಕ್ತಿ ಮತ್ತು ಚೈತನ್ಯವನ್ನು ಪ್ರಕಟಿಸಿದ್ದಾರೆ.

ದೇಶದ ಜನರು ಕಷ್ಟಕ್ಕೆ ಸಿಲುಕಿದಾಗ ನೆರವಿಗೆ ಬರುವುದು ಸರ್ಕಾರಗಳ, ರಾಜಕೀಯ ಪಕ್ಷಗಳ ಹಾಗೂ ನಾಗರಿಕ ಸಮಾಜದ ಕರ್ತವ್ಯ. ಈ ದಿಸೆಯಲ್ಲಿ ಕರ್ನಾಟಕದ ಜನ ಹಾಗೂ ಸಂಘ-ಸಂಸ್ಥೆಗಳು ಹಿಂದೆಂದೂ ತೋರದಷ್ಟು ಭಾವನಾತ್ಮಕ ಒಗ್ಗಟನ್ನು ಹಾಗೂ ಉದಾರತೆಯನ್ನು ತೋರಿದ್ದಾರೆ. ಇದು ಪ್ರಶಂಸೆಗೆ ಅರ್ಹವಾಗಿದೆ. ಆದರೆ ಈ ಔದಾರ್ಯವು ಜನರನ್ನು ಭಿಕ್ಷುಕರಂತೆ ಭಾವಿಸಿದಂತೆಯೂ ಕೊಟ್ಟವರ ಗರ್ವಕ್ಕೆ ಕಾರಣವಾಗುವ ಸಾಧ್ಯತೆಯೂ ಇದೆ. ಕಾರಣ, ಗ್ರಾಮೀಣ ಜನರು ನಗರದವರಿಗೆ ಹೋಲಿಸಿದರೆ ಸರ್ಕಾರದಿಂದ ಕಡಿಮೆ ನಾಗರಿಕ ಸೌಲಭ್ಯ ಪಡೆದವರು. ತಮ್ಮ ನಿರಂತರ ದುಡಿಮೆಯಿಂದ ದೇಶಕ್ಕೆ ಬೇಕಾದ ಆಹಾರವನ್ನು ಉತ್ಪಾದಿಸುತ್ತಿದ್ದವರು. ಅವರಿಗೆ ಆದ ಹಾನಿಯು ಒಟ್ಟು ರಾಷ್ಟ್ರದ ಹಾನಿ. ಆದ್ದರಿಂದ ಪರಿಹಾರ ಪಡೆಯುವುದು ಅವರ ಹಕ್ಕಾಗಿದೆ ಎಂಬುದನ್ನು ಕೂಡ ಮನಗಾಣಬೇಕಾಗಿದೆ. ಮೈಮುರಿದು ದುಡಿದು ಆಹಾರ ಬೆಳೆಯುವ ಮತ್ತು ಬಂದವರಿಗೆ ಊಟಹಾಕಿ ಕಳಿಸುವ ಜನರು, ಪರಿಹಾರಕ್ಕೆ ಕೈಯೊಡ್ಡುವ ಪ್ರಸ್ತುತ ಸನ್ನಿವೇಶವು ಬಹಳ ಕಾಲ ಮುಂದುವರಿದರೆ ಅವರ ಆತ್ಮಾಭಿಮಾನವು ಕುಸಿದುಹೋಗುವ ಸಾಧ್ಯತೆಯಿದೆ.


(ಮುಂದುವರಿಯುವುದು)

ಅವಕಾಶ


ಪ್ರವಾಹ ಬಂದಾಗ
ನೀರು ಉಕ್ಕುಕ್ಕುತ್ತಾ
ಮೇಲೇರುತ್ತಾ
ಮೆಟ್ಟಿಲುಗಳ ಮೇಲೆ
ತುಂಬುತ್ತೆ ಮನೆಗಳೊಳಗೂ.
ಮನೆಗಳ ಹುಡುಗಿಯರು
ಆ ವರೆಗೆ ಮನೆಯ ಹೊರಗೆ
ಹೋಗಲು ದಾರಿ ಸಿಕ್ಕಿಲ್ಲದವರು
ಆಗ ಈಜಲು ಕಲಿಯುತ್ತಾರೆ.

ಪರಿಣತಿ

ಆಮೇಲೆ
ಮತ್ತೊಂದು ಸಲ
ಹೊಸ ಅರ್ಥದಲ್ಲಿ
ಅರಳಿಕೊಳ್ಳಬೇಕಿತ್ತು
ಬದುಕಬೇಕಿತ್ತು
ಕವಿತೆಯ ತರಹ
ಒಂದು ಕತೆಯಿಂದ
ಬೆಳೆಯುತ್ತ ಹೋಗುತ್ತೆ
ಬದುಕು ಆಮೇಲೆ......
ಅದಾದ ಮೇಲೆ.......



ಹಿಂದಿ ಮೂಲ : ಪ್ರೇಮರಂಜನ್ ಅನಿಮೇಶ್
ಆಧಾರ : ಕಥಾದೇಶ್ – ಮಾಸಪತ್ರಿಕೆ



ವಿದುಷಿ ಬಿ.ಕೆ. ಪಟ್ಟಮ್ಮಾಳ್

ಎಪ್ಪಡಿ ಪಾಡಿನರೋ....!

● ಎ. ಈಶ್ವರಯ್ಯ

ತಾಯೀ,

ಒಂದು ರಾತ್ರಿ ಟೀವಿಯಲ್ಲಿ ನೀವು ನಮ್ಮನ್ನಗಲಿದ ವಾರ್ತೆ ಕೇಳಿದಾಗ ಒಂದು ಕ್ಷಣ ಮನಸ್ಸು ಮಂಕಾಯಿತು.

90 ವರ್ಷಗಳ ಸಾರ್ಥಕ ಜೀವನವನ್ನು ಮುಗಿಸಿ ನೀವು ತೆರಳಿದ್ದು ನಿಜ. ಆದರೆ ವೈಯಕ್ತಿಕವಾಗಿ ನನಗೆ ಏನನ್ನೋ ಕಳೆದುಕೊಂಡ ಅನುಭವವಾಯಿತು.

ನೆನಪುಗಳು ಹಿಂದಕ್ಕೆ ಓಡುತ್ತಿವೆ. ನಾನಾಗ 8–9 ವರ್ಷಗಳ ಬಾಲಕ. ನಮ್ಮ ಮನೆಯ ಲಾರಿ ಚಾಲಕನಾಗಿ ತಮಿಳುನಾಡಿನ ಮಣಿ ಅನ್ನುವವರಿದ್ದರು. ಸಂಜೆ ಬಂದವರು ಸ್ನಾನಮಾಡಿ ಸ್ವಲ್ಪಹೊತ್ತು ಅವರು ಹಾಡುವುದಿತ್ತು. ಆಗ ಅವರು ಹಾಡುತ್ತಿದ್ದ ಒಂದು ಹಾಡು 'ಎಪ್ಪಡಿ ಪಾಡಿನರೋ...'. ಅದು ಎಷ್ಟು ಮಟ್ಟಿಗೆ ನನ್ನನ್ನು ಕಾಡಿತ್ತು ಅಂದರೆ, ದಿನ ರಾತ್ರಿ ಅದನ್ನೇ ಗುನುಗುತ್ತಿದ್ದು ಅಪ್ಪನಿಂದ 'ಎಂಥ ಎಪ್ಪಡಿಯೋ ನಿನ್ನದು' ಎನ್ನುವ ಗದರಿಕೆಯನ್ನೂ ಕೇಳಿಸಿಕೊಂಡಿದ್ದೆ. ಅದನ್ನು ಧ್ವನಿಮುದ್ರಿಕೆಯಲ್ಲಿ ಹಾಡಿದ್ದು ನೀವು. ಅದು ಕರ್ನಾಟಕ ದೇವಗಾಂಧಾರಿ ರಾಗದಲ್ಲಿದೆ ಎನ್ನುವ ವಿಷಯವೆಲ್ಲ ನನಗೆ ತಿಳಿದದ್ದು ಹಲವು ವರ್ಷಗಳ ಅನಂತರ. ಆದರೆ ನನ್ನ ಎಳೆಯ ಮನಸ್ಸಿನಲ್ಲಿ ರಾಗದ ಆಕರ್ಷಣೆಯನ್ನೂ, ಆ ಮೂಲಕ ಸಂಗೀತದ ಕುರಿತಾದ ಆಸಕ್ತಿಯ ಬೀಜವನ್ನೂ ಬಿತ್ತಿದ್ದು ನಿಮ್ಮ ಆ ಹಾಡು ತಾಯೀ. ಆಮೇಲೆ ಅದೇ ಹಾಡನ್ನು ನಿಮ್ಮ ಶಿಷ್ಯೆ ಹಾಗೂ ಮೊಮ್ಮಗಳು ನಿತ್ಯಶ್ರೀ ಮಹಾದೇವನ್, ಉಣ್ಣಿಕೃಷ್ಣನ್, ಮುಂಬಯಿ ಸಹೋದರಿಯರು, ಸುಧಾ ರಘುನಾಥನ್ ಹಾಡಿದ್ದನ್ನು ಕೇಳಿದ್ದೇನೆ. ಅವರೆಲ್ಲರೂ ಚೆನ್ನಾಗಿಯೇ ಹಾಡಿದ್ದರೂ ನೀವು ಹಾಡಿದ್ದನ್ನು ಇಂದು ಕೇಳಿದರೂ ಕಣ್ಣಲ್ಲಿ ತೇವ ಮೂಡುತ್ತದೆ. ಇದನ್ನು ಭಾವಾತಿರೇಕ ಅನ್ನಬಹುದು, ನಾಸ್ಟಾಲಜಿಯಾದ ಸುಳಿಯಲ್ಲಿ ಸಿಲುಕಿಕೊಳ್ಳುವ ವೃದ್ಧಾಪ್ಯದ ದೌರ್ಬಲ್ಯ ಎಂದು ಹೇಳುವವರೂ ಇರಬಹುದು. ಇರಲಿ ಬಿಡಿ. ಹೇಗೆ ಹಾಡಿದಿರಿ ತಾಯೀ! ಎಂದು ನಾನೀಗಲೂ ಅಚ್ಚರಿಪಡುತ್ತೇನೆ. 'ಆಸೈಕೊಂಡೇನ್ ಶಿವನೇ' ಎಂದು ಹಾಡಿದ ನೀವು ನನ್ನಲ್ಲಿ, ನನ್ನಂಥವರಲ್ಲಿ ಹಾಡುವ, ಕೊನೆಯ ಪಕ್ಷ ನಿಮ್ಮಂಥವರು ಹಾಡಿದ್ದನ್ನು ಕೇಳುವ ಆಸೆಯನ್ನು ಹುಟ್ಟಿಸಿದಿರಿ.

ತಾಯಿ, ನಿಮ್ಮನ್ನು ನಾನು trend setter, path breaker ಎಂದು ಗುರುತಿಸುತ್ತೇನೆ. ಕಾಂಚೀಪುರದ ಶ್ರದ್ಧಾವಂತ ಬ್ರಾಹ್ಮಣ ಕುಟುಂಬದಲ್ಲಿ ನೀವು ಹುಟ್ಟಿದಿರಿ (1919). ನಿಮ್ಮ ಹೆಸರು ಅಲಮೇಲು ಎಂದಾದರೂ ಎಲ್ಲರೂ ಮುದ್ದಿನಿಂದ ನಿಮ್ಮನ್ನು 'ಪಟ್ಟಾ' ಎಂದು ಕರೆಯುತ್ತಿದ್ದರು. ನಿಮ್ಮ ತಂದೆ ಧಮಾಳ್ ಕೃಷ್ಣಸ್ವಾಮಿ ದೀಕ್ಷಿತರು ವಿದ್ವಾಂಸರು. ತಾಯಿ ಕಾಂತಿಮತಿ (ರಾಜಮ್ಮಾಳ್) ಚೆನ್ನಾಗಿ ಹಾಡುತ್ತಿದ್ದರಂತೆ. ಆದರೆ ಸಾರ್ವಜನಿಕವಾಗಿ ಹಾಡುವ ಅವಕಾಶ ಅವರಿಗೆ ಸಿಕ್ಕಿರಲಿಲ್ಲ. ಅವರಿಗೆಂದೇನೂ ಅಲ್ಲ, ಬ್ರಾಹ್ಮಣ ಕುಲದ ಯಾವ ಹೆಣ್ಣುಮಗಳೂ ಸಾರ್ವಜನಿಕ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಆಗ ಸಮಾಜದ ಒಪ್ಪಿಗೆ ಇರಲಿಲ್ಲ. ನೀವೋ ಬಾಲಪ್ರತಿಭೆ. ಹೆಚ್ಚಿನ ಸಾಂಪ್ರದಾಯಿಕ ಶಿಕ್ಷಣ ನಿಮಗೆ ದೊರೆಯದೆ ಹೋದರೂ ಸಂಗೀತವನ್ನು ಬೊಗಸೆಯಲ್ಲಿ ಬಾಚಿ ಕುಡಿದು ಅರಗಿಸಿಕೊಳ್ಳುವ ಸಾಮರ್ಥ್ಯ ನಿಮ್ಮಲ್ಲಿತ್ತು. 13ನೇ ವಯಸ್ಸಿನಲ್ಲೇ ನೀವು ಮದರಾಸಿನ ರಸಿಕರಂಜಿನಿ ಸಭಾದ ವೇದಿಕೆಯಲ್ಲಿ ಕಛೇರಿ ನೀಡಿ ಒಂದು ಅಸಂಗತ ಸಂಪ್ರದಾಯಕ್ಕೆ ಪೂರ್ಣವಿರಾಮ ಹಾಕಿಬಿಟ್ಟಿರಿ. ಪಟ್ಟಮ್ಮಾಳ್ ಎಪ್ಪಡಿ ಹಾಡಿದರೋ ಅಪ್ಪಡಿಯೇ ನಾವು ಹಾಡುತ್ತೇವೆ ಎಂದು ಮುಂದೆಬಂದ ಸುಬ್ಬುಲಕ್ಷ್ಮಿ, ಎಂ.ಎಲ್. ವಸಂತಕುಮಾರಿ ಮೊದಲಾದ ಪ್ರತಿಭಾವಂತ ಕಲಾವಿದೆಯರ ತಂಡಕ್ಕೆ ವೇದಿಕೆ ಏರುವುದಕ್ಕೆ ದಾರಿ ಮಾಡಿಕೊಟ್ಟಿರಿ. ಮುಂದಿನ ನಲವತ್ತು ವರ್ಷಗಳ ಕಾಲ ನೀವು ಮೂವರೂ ಸಂಗೀತದ ತ್ರಿಮೂರ್ತಿ ಕಲಾವಿದೆಯರು ಎಂದೆನಿಸಿ ಮೆರೆದಿರಿ.

ತಾಯೀ, ನೀವು ಕೇವಲ ಹಾಡಿದ್ದಷ್ಟೇ ಅಲ್ಲ, ನಮಗೆ ಗಟ್ಟಿಯಾದ್ದನ್ನು ಕಟ್ಟಿಕೊಟ್ಟಿದ್ದೀರಿ. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಹಾಡುವುದಕ್ಕೆ ನೀವೊಂದು ಮಾದರಿಯಾಗಿದ್ದೀರಿ. ನೀವು ಹಾಡಿದ 'ತ್ಯಾಗರಾಜ ಯೋಗ ವೈಭವಂ' ಕೃತಿಯನ್ನು ಕೇಳಿದವರಿಗೆ ಅದರಲ್ಲಿನ ಗತ್ತು, ಗಾಂಭೀರ್ಯ. ಸಂಪ್ರದಾಯಶುದ್ಧತೆಯ ಅರಿವಾಗದಿರದು. ಇದಕ್ಕೆ ಕಾರಣವಿಲ್ಲದಿಲ್ಲ. ನೀವು ದೀಕ್ಷಿತರ ಕೃತಿಗಳನ್ನು ಅವರ ಮರಿಮಗ ಅಂಬಿದೀಕ್ಷಿತರಲ್ಲೇ ಅಭ್ಯಾಸ ಮಾಡಿದ್ದೀರಿ. ಇಷ್ಟು ಸಾಲದೆನ್ನುವಂತೆ ಅದುವರೆಗೆ ಪುರುಷಪ್ರಧಾನವಾಗಿದ್ದ ಕೋಟೆಯೊಂದನ್ನೂ ನೀವು ಮುರಿದುಬಿಟ್ಟಿರಿ. ರಾಗಂ ತಾನಂ ಪಲ್ಲವಿ ನಿರ್ವಹಣೆಯು ಅದುತನಕ ಪುರುಷರದ್ದೇ ಸಾಮ್ರಾಜ್ಯವಾಗಿತ್ತು. ಹೆಣ್ಣುಮಕ್ಕಳಿಗೇನು ಗೊತ್ತು ಲೆಕ್ಕಾಚಾರ ಎಂದು ಮೂಗು ಮುರಿಯುತ್ತಿದ್ದ ಪಂಡಿತವರ್ಗ ಹುಬ್ಬೇರಿಸುವಂತೆ ಮಾಡಿಬಿಟ್ಟಿರಿ



ವಿದುಷಿ ಬಿ.ಕೆ. ಪಟ್ಟಮ್ಮಾಳ್

ನೀವು. ಅತ್ಯಂತ ಕ್ಲಿಷ್ಟಕರವಾದ ಪಲ್ಲವಿಯನ್ನು ನೀವು ಲೀಲಾಜಾಲವಾಗಿ ನಿರ್ವಹಿಸಿ ಹಲವರ ಬೆವರಿಳಿಸಿದ ಕತೆ ಇನ್ನೂ ಹಸಿರಾಗಿಯೇ ಇದೆ. ಲಯದ ಮೇಲಿನ ನಿಮ್ಮ ಅಪ್ರತಿಮ ಪ್ರಭುತ್ವಕ್ಕೆ ಕಾರಣ, ನೈನಾ ಪಿಳ್ಳೈ ಅವರಿಂದ ಪಲ್ಲವಿ ಗಾಯನದಲ್ಲಿ ನೀವು ಪಡೆದ ತರಬೇತಿ. ಇನ್ನೊಂದು ಅನಿಷ್ಟ ಸಂಪ್ರದಾಯ(!)ಕ್ಕೂ ನೀವು ತೆರೆಎಳೆದದ್ದನ್ನು ಯೋಚಿಸಿದಾಗ ನಗು ಬರುತ್ತದೆ. ನೀವು ವೇದಿಕೆ ಏರುತ್ತಿದ್ದ ಸಂದರ್ಭದಲ್ಲಿ ಹಿರಿಯ ಮೃದಂಗ ವಿದ್ವಾಂಸರು ಹೆಣ್ಣುಮಕ್ಕಳಿಗೆ ಪಕ್ಕವಾದ್ಯ ಒದಗಿಸುತ್ತಿರಲಿಲ್ಲ. ಇದನ್ನು ಗಟ್ಟಿಯಾಗಿ ಪಾಲಿಸುತ್ತಿದ್ದವರಲ್ಲಿ ಪ್ರಮುಖರು ಪಾಲ್ಘಾಟ್ ಮಣಿ ಅಯ್ಯರ್ ಮತ್ತು ಪಳನಿ ಸುಬ್ರಹ್ಮಣ್ಯ ಪಿಳ್ಳೈ. ಮಣಿ ಅಯ್ಯರರ ಮಗಳನ್ನು ನಿಮ್ಮ ಮಗನಿಗೆ ತಂದು ನೆಂಟಸ್ತಿಕೆ ಬೆಳೆಸಿಕೊಂಡ ಮೇಲೆ ಮಣಿ ಅಯ್ಯರ್ ನಿಮ್ಮ ಕಛೇರಿಗೆ ಮೃದಂಗ ಪಕ್ಕವಾದ್ಯ ಒದಗಿಸಿದರು. ಮುಂದೆ ಎಂ.ಎಲ್.ವಸಂತಕುಮಾರಿ ಅವರಿಗೂ ಅವರು ನುಡಿಸಿದರು. ಪಳನಿಯವರಿಗೂ ತಮ್ಮ ಪ್ರತಿಜ್ಞೆ ಉಳಿಸಿಕೊಳ್ಳಲಾಗಲಿಲ್ಲವೆನ್ನಿ. ಅವರು ಲಾಲ್ಗುಡಿ ಜಯರಾಮನ್ ಅವರ ಸೋದರಿ ಬ್ರಹ್ಮಾನಂದಂ ಅವರಿಗೆ ಮೃದಂಗ ನುಡಿಸಿದರು. ಅಲ್ಲಿಗೆ ಚಿಟ್ಟಿಬಾಬು ಆಗಾಗ ಹೇಳುತ್ತಿದ್ದ ಸಂಗೀತದಲ್ಲಿರುವ 'ಕಟ್ಟುಪಾಡು' ಒಂದು ಕಣ್ಮರೆಯಾಯಿತು.

ತಾಯೀ

ಸ್ತ್ರೀಕಂಠಕ್ಕೆ ಹೋಲಿಸಿದರೆ ನಿಮ್ಮದು ತುಸು ತಗ್ಗಿನಲ್ಲಿ ನುಡಿಯುವ ಶಾರೀರ. ಆದರೆ ಅದರಲ್ಲಿನ ಗಾಂಭೀರ್ಯ, ಪುಷ್ಟಿ, ಸ್ಫುಟತೆ ನಿಮ್ಮ ಶೈಲಿಗೆ ತುಂಬ ಒಪ್ಪುತ್ತದೆ. ಇದರಿಂದಾದ ಒಂದು ಅನುಕೂಲವೆಂದರೆ ನಿಮ್ಮ ತಮ್ಮ ಹಾಗೂ ಶಿಷ್ಯ, ಡಿ.ಕೆ. ಜಯರಾಮನ್ ಅವರಿಗೆ ನಿಮ್ಮೊಂದಿಗೆ ಸಹಗಾಯನ ಮಾಡಲು ಸಾಧ್ಯವಾದದ್ದು. (ಪ್ರಾಯಶಃ ಆರೂವರೆ ಕಟ್ಟೆಯಲ್ಲಿ ಹಾಡುತ್ತಿರುವ ನಿತ್ಯಶ್ರೀ ನಿಮ್ಮೊಂದಿಗೆ ಹಾಡುವಾಗ ಹಲವು ಬಾರಿ ಮೇಲುಸ್ಥಾಯಿಯನ್ನು ಬಳಸಿಕೊಳ್ಳುತ್ತಿದ್ದರು) ನಿಮ್ಮದೊಂದು ಸಂಗೀತದಲ್ಲಿ ಅಪರೂಪವೆನ್ನಬಹುದಾದ ಸೋದರ-ಸೋದರಿ ಜೋಡಿಯಾಗಿ ದಶಕಗಳ ಕಾಲ ವಿಜೃಂಭಿಸಿತು.

ನಿಮ್ಮನ್ನು ಚಲನಚಿತ್ರ ಸಂಗೀತಕ್ಕೆ ತಂದವರು ಪಾಪನಾಶಂ ಶಿವನ್. ಅಲ್ಲೂ ನೀವು ಭಕ್ತಿ ಹಾಗೂ ದೇಶಭಕ್ತಿ ಗೀತೆಗಳನ್ನು ಮಾತ್ರ ಹಾಡುವುದಾಗಿ ಶರತ್ತು ಹಾಕಿದಿರಿ. ನೀವು ಹಾಡಿರುವ 'ವಿ ಟು' (ನಾವು ಇಬ್ಬರು) ಎನ್ನುವ ಚಿತ್ರವನ್ನು ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಮಂಗಳೂರಿನ ಸೆಂಟ್ರಲ್ ಟಾಕೀಸಿನಲ್ಲಿ ನೋಡಿದ್ದೆ. ಅದರಲ್ಲಿನ 'ಆಡುವೋಮೆ ಪಳ್ಳಿ ಪಾಡುವೋಮೇ...' ಹಾಡಿನ ಕೆಲವು ಸಾಲು ಈಗಲೂ ನನಗೆ ಕಂಠಸ್ಥವಾಗಿದೆ.

ಉನ್ನತ ಸಾಂಪ್ರದಾಯಿಕ ಶಿಕ್ಷಣ ಪಡೆಯದ ನಿಮ್ಮನ್ನು ಪ್ರಶಸ್ತಿ, ಬಿರುದುಗಳ ಸಾಲೇ ಹುಡುಕಿಕೊಂಡು ಬಂದಿವೆ. ಭಾರತ ಸರಕಾರದ ಪದ್ಮವಿಭೂಷಣ (ಎರಡನೆಯ ಅತ್ಯುನ್ನತ ಗೌರವ) ಪ್ರಶಸ್ತಿ, ಗಾನ ಸರಸ್ವತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಮುಂತಾದವು ಅರ್ಹವಾಗಿಯೇ ನಿಮ್ಮನ್ನು ಅಲಂಕರಿಸಿವೆ.

ತಾಯಿ, ಎರಡು ಬಾರಿ ನಿಮ್ಮೊಂದಿಗೆ ಸಮೀಪದಲ್ಲಿ ಒಡನಾಡುವ ಭಾಗ್ಯ ನನಗೊದಗಿತ್ತು. ಸುಮಾರು ಮೂರು ದಶಕಗಳ ಹಿಂದೆ ನಮ್ಮ ಅನಂತಪುರ ದೇವಾಲಯದ ಮೊದಲ ಬ್ರಹ್ಮಕಲಶ ಮಹೋತ್ಸವ ನಡೆದ ಸಂದರ್ಭದಲ್ಲಿ ಕಛೇರಿ ನೀಡುವಂತೆ ನಿಮ್ಮನ್ನು ಆಮಂತ್ರಿಸುವ, ಬಂದಿದ್ದಾಗ ಸತ್ಕರಿಸುವ, ವೇದಿಕೆಯಲ್ಲಿ ನಿಮ್ಮನ್ನು ಪರಿಚಯಿಸುವ ಜವಾಬ್ದಾರಿ ನನ್ನದಾಗಿತ್ತು. ನಿಮ್ಮನ್ನು ಮುಖತಃ ಕಾಣಲು ಸಾಧ್ಯವಾಯಿತಲ್ಲ ಎಂದು ಅದೆಷ್ಟು ಸಂಭ್ರಮಿಸಿದ್ದೆ! ಮೂರು ಗಂಟೆಗಳ ಕಾಲ ನೀವು ನೀಡಿದ್ದ ಸಂಗೀತವನ್ನು ಮನದೊಳಗೆ ಹೀರಿಕೊಂಡಿದ್ದೆ. ಕೆಲವು ವರ್ಷಗಳ ಹಿಂದೆ ನಿಮ್ಮ ಮತ್ತು ನಿತ್ಯಶ್ರೀಯ ಜಂಟಿ ಗಾಯನ ಬೆಂಗಳೂರಿನ ಪರ್ಕಸಿವ್ ಆರ್ಟ್ ಸೆಂಟರ್‌ನ ಆಶ್ರಯದಲ್ಲಿ ಏರ್ಪಾಡಾಗಿತ್ತು. ಆಗ ನಾನು ಮತ್ತು ಸೆಂಟರ್‌ನ ನಿರ್ದೇಶಕ ಟಿ.ಎ.ಎಸ್.ಮಣಿ ನಿಮ್ಮನ್ನು ಕಾಣಲು ಉಡ್‌ಲ್ಯಾಂಡ್ಸ್ ಹೋಟೆಲಿಗೆ ಬಂದಿದ್ದೆವು. ನಿಮಗೆ ಸರಿಯಾಗಿ ಇಂಗ್ಲಿಷ್ ಬಾರದು, ನನ್ನದು ಹರುಕು ಮುರುಕು ತಮಿಳು. ಹಾಗಾಗಿ ಹೆಚ್ಚು ಮಾತನಾಡಿದ್ದು ನಿಮ್ಮ ಪತಿ ಈಶ್ವರನ್. ನಡುವೆ ನಡುವೆ ನೀವು ಹಾಕುತ್ತಿದ್ದ ವಿನೋದದ ಒಗ್ಗರಣೆ- **'ನಾನು ಪಟ್ಟಮ್ಮಾಳ್, ಪಾಟ್ಟಮ್ಮಾಳ್, ಪಾಡ್ ಪಟ್ಟಮ್ಮಾಳ್ ಎಲ್ಲವೂ ಹೌದು'**- ನಿಮ್ಮ ಮುಗ್ಧ ಮನಸ್ಸಿನ ದ್ಯೋತಕಗಳಾಗಿದ್ದವು.


ತಾಯೀ,

ದೇಶ ವಿದೇಶಗಳ ನೂರಾರು ಮಂದಿ ಶಿಷ್ಯರಿಗೆ ನೀವು ಪಾಠ ಹೇಳಿದ್ದರೂ ನಿಮ್ಮ ಶೈಲಿಯನ್ನು ನೇರವಾಗಿ ಬಳಸಿಕೊಂಡವರು ಯಾರೂ ಇಲ್ಲ. ಪ್ರಾಯಶಃ ಜಯರಾಮನ್ ಅವರ ಶಿಷ್ಯರಾದ ವಿಜಯಶಿವ ಅವರಲ್ಲಿ ಅದರ ಸ್ಪರ್ಶವನ್ನು ಕಾಣಬಹುದೇನೋ. ಪಟ್ಟಮ್ಮಾಳ್ ಅವರನ್ನು ಅರಿಯಬೇಕಿದ್ದರೆ ಪಟ್ಟಮ್ಮಾಳ್ ಅವರ ಸಂಗೀತವನ್ನೇ ಕೇಳಬೇಕು.

ತಾಯೀ, ಇಷ್ಟೆಲ್ಲ ಹೇಳಿಯೂ ನನ್ನಲ್ಲಿ ಕೊನೆಗೂ ಉಳಿದುಬಿಡುತ್ತದೆ ಒಂದು ಉದ್ಗಾರ:

'ಎಪ್ಪಡಿ ಪಾಡಿನರೋ...!'

❑



ಜಾಗೃತ ಪ್ರಜ್ಞೆಯ ಅನಾವರಣ

● *ಡಾ. ಸಬಿತಾ ಬನ್ನಾಡಿ*

ಸಾರಾ ಅಬೂಬಕರ್‌ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಗೆ ಒಂದು ಚಾರಿತ್ರಿಕ ಮಹತ್ವ ಇದ್ದೇ ಇದೆ. ಈಗ ಈ ಕೃತಿಗೆ ಇಪ್ಪತ್ತೈದು ವರ್ಷಗಳು ಸಂದಿವೆ. ಈ ಕಾದಂಬರಿ ಲಂಕೇಶ್ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದಾಗ ಅದು ತನ್ನ ಹೊಸತನಕ್ಕಾಗಿ ಪತ್ರಿಕೆಯ ಓದುಗರಲ್ಲಿ ಸಂಚಲನವನ್ನೇ ಹುಟ್ಟಿಸಿತು. ಮುಸ್ಲಿಂ ಸಮುದಾಯದಲ್ಲಿದ್ದ ಕೆಲವು ಆಚರಣೆಗಳು ಮುಸ್ಲಿಮೇತರರು ಮಾತ್ರವಲ್ಲ, ಮುಸ್ಲಿಮರಿಗೂ ತಿಳಿಯದಿರುವ ಸಂದರ್ಭದಲ್ಲಿ ಈ ಕಾದಂಬರಿ ಅನಾವರಣ ಮಾಡಿದ ಕೆಲವು ಸಂಗತಿಗಳು ತಲ್ಲಣವನ್ನೂ ಹುಟ್ಟುಹಾಕಿತು. ಕೇವಲ ಇದೊಂದೇ ಕಾರಣಕ್ಕೆ ಈ ಕಾದಂಬರಿ ಮುಖ್ಯವಾಗಿದ್ದರೆ, ಇಷ್ಟೊತ್ತಿಗಾಗಲೇ ಇದು ಚರಿತ್ರೆಯ ಕಡತ ಸೇರಿ ಆಗಿರುತ್ತಿತ್ತು. ಸಾರಾ ತನ್ನ ನಲವತ್ತೆರಡನೇ ವಯಸ್ಸಿನಲ್ಲಿ ಬರೆದ ಈ ಮೊದಲ ಕಾದಂಬರಿಯ ನಂತರ ನಿರಂತರವಾಗಿ ಬರೆದಿದ್ದಾರೆ. ಆದರೆ ಈ ಕಾದಂಬರಿ ಇಂದಿಗೂ ಅವರ ಬರಹಗಳಲ್ಲೇ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಅದು ಮುಸ್ಲಿಂ ಮಹಿಳೆಯೊಬ್ಬಳ ಪ್ರಜ್ಞೆಯು ಸ್ಫೋಟಗೊಂಡ ಕಾದಂಬರಿ. ಈ ಕಾದಂಬರಿಯು ಎತ್ತುವ ಪ್ರಶ್ನೆಗಳು ಇಂದಿಗೂ ಮಹತ್ವದ ಪ್ರಶ್ನೆಗಳೇ ಆಗಿವೆ.

ಸಾರಾ ನೇರ ನಡೆ, ನುಡಿಯ ವ್ಯಕ್ತಿ. ತನ್ನ ಮೊದಲ ಕಾದಂಬರಿಗೆ ಬಂದ ತೀವ್ರ ಪ್ರತಿಕ್ರಿಯೆ, ಹಲ್ಲೆಗಳ ನಂತರವೂ ಅವರು ತಾವು ಹೇಳಬೇಕಾದ್ದನ್ನು ಹೇಳದೇ ಬಿಟ್ಟಿಲ್ಲ. ಆ ನಂತರವೂ ಅವರು ಬರೆದ ಕಾದಂಬರಿಗಳಲ್ಲಿ ಮತ್ತು ಕತೆಗಳಲ್ಲಿ ಮಾತ್ರವಲ್ಲ, ತಮ್ಮ ಲೇಖನಗಳಲ್ಲಿ ಇಂತಹ ನೇರವಂತಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈಗಾಗಲೇ ಗುರುತಿಸಿರುವಂತೆ ಅವರ ಗಮನ ಇರುವುದು ಮುಸ್ಲಿಂ ಸಮಾಜದ ಬಡವರ ಕಡೆಗೆ. ಅದರಲ್ಲೂ ಬಡ ಮಹಿಳೆಯ ಕಡೆಗೆ. ಬಡತನ, ಅಪ್ರಜ್ಞೆ, ಧಾರ್ಮಿಕ ನಿರ್ಬಂಧ-ಇವುಗಳೊಂದಿಗೆ ಕುಟುಂಬ ಎಂಬ ಸಂಸ್ಥೆಯೊಳಗೆ ಯಜಮಾನಿಕೆ ನಡೆಸುವ ಗಂಡು, ಈ ಎಲ್ಲಾ ಹೊಡೆತಗಳನ್ನು ಏಕಕಾಲಕ್ಕೆ ಹೊರಬೇಕಾಗುವ ಮಹಿಳೆಯ ಪಾಡುಗಳನ್ನೂ, ಈ ಪಾಡುಗಳನ್ನು ಸೃಷ್ಟಿಸಿರುವ ವ್ಯವಸ್ಥೆಗಳನ್ನೂ ಸಾರಾ ತನ್ನ ಕೃತಿಗಳಲ್ಲಿ ಬಯಲುಗೊಳಿಸುತ್ತಾರೆ.

ಸಾರಾ ಅವರ ಮೊದಲ ಗಮನ ಇರುವುದು ಧಾರ್ಮಿಕ ಅಪವ್ಯಾಖ್ಯಾನಗಳೆಡೆಗೆ. ಧರ್ಮವು ತಾನು ಹುಟ್ಟಿದ ಕಾಲ ಮತ್ತು ಪರಿಸರದ ಕೂಸು. ಈ ಕಾಲ ಮತ್ತು ಪರಿಸರದ ಬದಲಾವಣೆಯೊಂದಿಗೆ ಧರ್ಮದ ಸ್ವರೂಪದಲ್ಲೂ ಬದಲಾವಣೆಯಾದರೆ ಅದೊಂದು ಸಹಜ ಪ್ರಕ್ರಿಯೆ. ಆದರೆ, ಕಾಲಾಂತರದಲ್ಲಿ ಜಡಗೊಳ್ಳುವ ಧರ್ಮ ಕೆಲವೇ ಕೆಲವು ವ್ಯಕ್ತಿಗಳ ಕೈಯೊಳಗೆ ಸಿಲುಕಿ, ಆ ವ್ಯಕ್ತಿಗಳು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಮಾಡಲು ಅವಕಾಶ ಮಾಡಿಕೊಡುತ್ತದೆ. ಇದು ವ್ಯಾಖ್ಯಾನಕ್ಕಿಂತ ಅಪವ್ಯಾಖ್ಯಾನಕ್ಕೆ ಎಡೆ ಕೊಡುವುದೇ ಹೆಚ್ಚು. ಇಂತಹ ಅಪವ್ಯಾಖ್ಯಾನಗಳ ಹೇರಿಕೆಯು ಯಾರ ಮೇಲಾಗುತ್ತದೆ? ಬಡಪಾಯಿಗಳಾದ ಬಡವರ ಮೇಲೆ, ಅತಿಮುಖ್ಯವಾಗಿ ಹೆಂಗಸರ ಮೇಲೆ. ಇದನ್ನು ಸಾರಾ ಕುರಾನ್‌ನ ಆಧಾರ ವಿಟ್ಟುಕೊಂಡೇ ಮಂಡಿಸಿದ್ದಾರೆ. ಸಾರಾರ ನೈತಿಕ ಧೈರ್ಯದ ಮೂಲವೂ ಇದೇ.

ಚಂದ್ರಗಿರಿ ತೀರದಲ್ಲಿ ಕಾದಂಬರಿಯಲ್ಲಿ ಬರುವ ನಾದಿರಾಳಿಗಾಗುವ ಅನ್ಯಾಯದ ಪ್ರಸಂಗಗಳನ್ನೇ ಗಮನಿಸಿದರೂ ಇದು ಸ್ಪಷ್ಟವಾಗುತ್ತದೆ. ನಾದಿರಾಳ ಮದುವೆ, ಅವಳಿಗೆ ನೀಡಲಾದ ತಲಾಖ್, ಅವಳನ್ನು ಮುದುಕನಿಗೆ ಮರುಮದುವೆ ಮಾಡಿಕೊಡಲು ಮಾಡಿದ ಪ್ರಯತ್ನ ಇಲ್ಲೆಲ್ಲೂ ಅವಳ ಅಭಿಪ್ರಾಯವನ್ನೆ ಯಾರೂ ಕೇಳಲಿಲ್ಲ. ಗಂಡನಿಗಿದ್ದ ಒಳ್ಳೆಯತನದಿಂದಾಗಿ ಆಕೆ ಮತ್ತೆ ಅವನನ್ನು ಸೇರುವ ಸಂದರ್ಭ ಬಂದಾಗ ಆಕೆಗೆ ಧರ್ಮವೇ ಶತ್ರುವಾಯಿತು. ತನ್ನ ಗಂಡನನ್ನು ಮರಳಿ ಸೇರಲು ಆಕೆ ಒಂದುದಿನದ ಮಟ್ಟಿಗಾದರೂ ಇನ್ನೊಬ್ಬನನ್ನು ಮದುವೆಯಾಗಿ, ಒಂದುರಾತ್ರಿ ಅವನೊಂದಿಗೆ ಕಳೆಯಬೇಕು. ಅವನಿಂದ ತಲಾಖ್ ಪಡೆದು ಮೂರು ತಿಂಗಳ ನಂತರ ತನ್ನ ಮೊದಲಗಂಡನನ್ನು ಆಕೆ ಸೇರಿಕೊಳ್ಳಬಹುದು ಎಂಬ ಕ್ರೂರ ನಿಯಮವನ್ನು ಎದುರಿಸುವಾಗಲೂ ಯಾರೂ ಆಕೆಯ ಅಭಿಪ್ರಾಯವನ್ನು ಕೇಳಲಿಲ್ಲ. ಆಕೆ ತಾನೇ ಮಾಡಿಕೊಂಡ ಒಂದೇ ಒಂದು ನಿರ್ಧಾರವೆಂದರೆ, ಮಸೀದಿಯ ಕೊಳಕ್ಕೆ ಹಾರಿ ಪ್ರಾಣ ಕಳೆದು ಕೊಂಡದ್ದು.

ಧಾರ್ಮಿಕ ನಿಯಮಗಳು ಇಲ್ಲಿ ಹೇಗೆ ಅಪವ್ಯಾಖ್ಯಾನಕ್ಕೊಳಪಟ್ಟಿವೆಯೆಂದರೆ, ಹೆಣ್ಣಿನ ವಿಷಯಕ್ಕೆ ಮಾತ್ರ ತನ್ನ ಸನಾತನ ನಿಯಮಗಳನ್ನು ನೆನಪಿಸಿಕೊಳ್ಳುತ್ತದೆ. ಆದರೆ ಗಂಡಿನ ವಿಷಯಕ್ಕೆ ಜಾಣ ಮರೆವನ್ನು ನಟಿಸುತ್ತದೆ. ಕುರಾನ್ ಪ್ರಕಾರ ಮೂರು ತಲಾಖ್‌ಗಳನ್ನು ಒಂದೇ ಸಲ ಹೇಳಿದರೆ ಅದು ಮಾನ್ಯವಾಗುವುದಿಲ್ಲ. ಒಂದು ತಲಾಖ್ ನಂತರ ಒಂದು ತಿಂಗಳ ಅಂತರವಿದ್ದು ಮೂರು ತಿಂಗಳ ನಂತರ ತಲಾಖ್ ನೀಡಬೇಕು. ಈ ಅವಧಿಯಲ್ಲಿ ಪತಿ-ಪತ್ನಿ ಒಂದೇ ಮನೆಯಲ್ಲಿರಬೇಕು. ಅಲ್ಲದೆ ತಲಾಖ್ ನಂತರ ಪತ್ನಿಗೆ ಮರುಮದುವೆಯಾಗಿ ಆ ಮದುವೆಯಿಂದಲೂ ಅವಳು ವಿಚ್ಛೇದನಕ್ಕೆ ಒಳಪಟ್ಟಿದ್ದಲ್ಲಿ ಮಾತ್ರ ಮೊದಲ ಪತಿಯು ಅವಳನ್ನು ಬಯಸಿದಲ್ಲಿ ಮರುಮದುವೆಯಾಗಬಹುದು. ಆದರೆ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಗಂಡಿನ ಅನುಕೂಲಗಳನ್ನು ಮಾನ್ಯಮಾಡಿ ಹೆಣ್ಣಿನ ವಿಷಯ ಬಂದಾಗ ಮಾತ್ರ ಧಾರ್ಮಿಕ ನಿರ್ಬಂಧಗಳ ನೆಪ ಹೇಳಲಾಗುತ್ತದೆ. ಕುರಾನ್ ಪ್ರಕಾರ ಹೋದರೂ ನಾದಿರಾಳ ಪತಿ ನೀಡಿದ ತಲಾಖ್ ತಲಾಖ್ ಆಗುವುದೇ ಇಲ್ಲ. ಇದೇ ವಾದ ಮಂಡಿಸಿಯಾದರೂ ಹೆಂಗಸರು ನ್ಯಾಯ ಪಡೆದುಕೊಳ್ಳಬೇಕು. ಆದರೆ ಗಂಡಸರ ಕೈಗೊಂಬೆಯಾಗಿರುವ ಹೆಂಗಸರು ಇದ್ಯಾವುದನ್ನೂ ಮಾಡುತ್ತಿಲ್ಲ ಎಂಬ ವಿಷಾದ ಸಾರಾಅವರಿಗಿದೆ. (ಈಚೆಗೆ ಹೈದರಾಬಾದ್‌ನಲ್ಲಿ ನಡೆದ ಇಂಥದೇ ಘಟನೆಯಲ್ಲಿ ಈ ನಿಯಮಗಳನ್ನು ಧಿಕ್ಕರಿಸಿ ಮತ್ತೆ ಗಂಡ ಹೆಂಡತಿಯರಾಗಿ ಬಾಳಿದ ದಂಪತಿಗಳ ವಿವರವನ್ನು ಸಾರಾ ತಮ್ಮ ಲೇಖನವೊಂದರಲ್ಲಿ ದಾಖಲಿಸಿದ್ದಾರೆ). ಎಲ್ಲಕ್ಕಿಂತ ಹೆಚ್ಚಾಗಿ ಇವರನ್ನು ಕಿತ್ತು ತಿನ್ನುತ್ತಿರುವ ಹಸಿವು, ಆಧುನಿಕ ಸೌಲಭ್ಯ ಮತ್ತು ಚಿಂತನೆಗಳ ಕೊರತೆ ಇವರನ್ನು ಅಸಹಾಯಕತೆಯ ಕೂಪಕ್ಕೆ ತಳ್ಳಿರುವುದನ್ನು, ತಮ್ಮ ಮೇಲೆ ನಡೆಯುತ್ತಿರುವ ದಮನದ ಅರಿವು ತಮಗೇ ಇಲ್ಲದಿರುವುದನ್ನೂ ಸಾರಾ ಈ ಕೃತಿಯ ಮೂಲಕ ಹೇಳಲು ಪ್ರಯತ್ನಿಸುತ್ತಾರೆ.

ಸಾರಾ ತಮ್ಮ ಲೇಖನಗಳಲ್ಲಿ ಈ ಕುರಿತು ಚರ್ಚಿಸುತ್ತಾರೆ. ಕುರಾನ್‌ನಲ್ಲಿ ಆರುಸಾವಿರದ ನೂರು ಶ್ಲೋಕಗಳಿದ್ದು ಇದರಲ್ಲಿ ಮುನ್ನೂರು ಶ್ಲೋಕಗಳಿಗೆ ಮಾತ್ರ ಇದುವರೆಗೂ ಅರ್ಥ ಹೇಳಲು ಸಾಧ್ಯವಾಗಿದೆ. ಇನ್ನಿತರ ಸಾಲುಗಳ ಬಗೆಗಿನ ಭಿನ್ನಾಭಿಪ್ರಾಯದ ಕಾರಣದಿಂದಾಗಿಯೇ ಹಲವು ಪಂಥಗಳು ಹುಟ್ಟಿವೆ. ಆದರೆ ಹೆಣ್ಣಿನ ವಿಷಯಕ್ಕೆ ಬಂದಾಗಮಾತ್ರ ಇವೆಲ್ಲವೂ ಒಂದಾಗುತ್ತವೆ ಎನ್ನುತ್ತಾರೆ ಸಾರಾ. ಹಾಗೆಯೇ ಕುರಾನ್ ಹೆಣ್ಣುಮಕ್ಕಳಿಗೆ ನೀಡಿರುವ ಹಕ್ಕುಗಳನ್ನೂ ಮರೆಮಾಚಿರುವುದನ್ನು ಅವರು ಹೇಳುತ್ತಾರೆ. ಮದುವೆಯ ಸಂದರ್ಭದಲ್ಲಿ ಹೆಣ್ಣು ಬಯಸಿದರೆ, ಆಕೆಗೆ ಸಿಗಬೇಕಾದ

ಮೆಹರ್‌ಅನ್ನು (ದಕ್ಷಿಣೆ ರೂಪದ ಹಣ) ಆಕೆಯೇ ನಿರ್ಧರಿಸಬಹುದು, ತನಗೆ ಆ ಮದುವೆಯಿಂದ ಹೊರಬರಬೇಕು ಎಂದೆನಿಸಿದರೆ ತಾನೇ ತಲಾಖ್ ನೀಡಬಹುದು ಇವೇ ಮುಂತಾದ ಆಕೆಯ ಹಕ್ಕುಗಳು ಇಂದು ಮೂಲೆಗುಂಪಾಗಿವೆ. ಅಲ್ಲದೇ ತನ್ನ ಗಂಡನನ್ನು ತಾನೇ ಮರುವಿವಾಹವಾಗಬೇಕಾದ ಸಂದರ್ಭ ಬಂದರೆ, ಇನ್ನೊಬ್ಬನೊಂದಿಗೆ ವಿಚ್ಛೇದನವಾಗಿರಬೇಕೆಂಬ ನಿಯಮವು ಪೈಗಂಬರರ ಕಾಲಕ್ಕಿಂತಲೂ ಹಿಂದಿನದ್ದಾಗಿದ್ದು ಇದನ್ನು ಸ್ವತಃ ಪೈಗಂಬರರೇ ವಿರೋಧಿಸಿದ್ದರು ಎಂದೂ ಹೇಳಲಾಗಿದೆ. ಮಾತ್ರವಲ್ಲ, ಕುರಾನ್‌ನಲ್ಲಿ 'ನಿನಗೆ ಬುದ್ಧಿಕೊಟ್ಟಿದ್ದೇನೆ. ನ್ಯಾಯಯುತವಾದ ಉತ್ತಮ ನಿರ್ಣಯಗಳನ್ನು ಕೈಗೊಳ್ಳುವ ಅವಕಾಶವನ್ನು ನಿನಗೇ ಬಿಟ್ಟಿದ್ದೇನೆ' (ಹೆಚ್ಚಿನ ವಿವರಗಳಿಗೆ; ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ' ಸಾರಾ ಅಬೂಬಕರ್) ಎಂಬ ಮಾತುಗಳೂ ಇದ್ದು ಇದನ್ನು ಸಮುದಾಯದ ಎಲ್ಲರ ಒಳಿತಿನ ದೃಷ್ಟಿಯಿಂದ ಸದುಪಯೋಗಪಡಿಸಿಕೊಳ್ಳುವ ಅವಕಾಶವೂ ಇದೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದು ಮಾತ್ರ ಅದಕ್ಕೆ ವಿರುದ್ಧವಾದ ಪ್ರಕ್ರಿಯೆಯಾಗಿದೆ.

ಈ ಮೂಲಭೂತ ವಿಚಾರಗಳನ್ನು ಇಟ್ಟುಕೊಂಡು ಕೃತಿ ರಚಿಸುವ ಸಾರಾ ಕತೆಯ ಬಂಧದ ಕಡೆಗೆ ಹೆಚ್ಚು ಗಮನ ಹರಿಸುವುದಿಲ್ಲ. 'ಚಂದ್ರಗಿರಿಯತೀರ'ದಲ್ಲಿ ಕಾದಂಬರಿಗಿರುವುದು ಅದರ ಸಾಚಾತನದಿಂದ ಹುಟ್ಟಿಕೊಂಡ ಸಹಜ ಸೌಂದರ್ಯ. ಆದರೆ ಅವರ 'ಸಹನಾ' ಇತ್ಯಾದಿ ಕಾದಂಬರಿಗಳು ಇದನ್ನು ಸಾಧಿಸಿವೆ ಎಂದು ಹೇಳಲಾಗದು. ಅವರ ನಿಯಮ ನಿಯಮಗಳ ನಡುವೆ, ಚಪ್ಪಲಿಗಳು ಮೊದಲಾದ ಕತೆಗಳು ಮತ್ತೆ ನೇರವಾಗಿಯೇ ಮಹಿಳೆಯ ಕುರಿತಾದ ಪುರುಷ ಧೋರಣೆಗಳನ್ನು ಪ್ರಶ್ನಿಸುವ ಕೆಲಸ ಮಾಡುತ್ತವೆ. ಈ ಕತೆಗಳಷ್ಟೇ ಯಶಸ್ಸನ್ನು ಅವರ ಇನ್ನಿತರ ಕತೆಗಳು ಸಾಧಿಸುತ್ತವೆ ಎಂದೂ ಹೇಳಲಾಗದು. ಆದರೆ, ಸಾರಾ ಎತ್ತುವ ಪ್ರಶ್ನೆಗಳು ದನಿ ಕಳೆದುಕೊಂಡ ಮುಸ್ಲಿಂ ಹೆಣ್ಣುಮಕ್ಕಳನ್ನು ಪ್ರತಿನಿಧಿಸುವ ಪ್ರಶ್ನೆಗಳು. ಅವರು ಇಸ್ಲಾಮಿನ ಚೌಕಟ್ಟಿನೊಳಗೇ ಈ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಹೀಗಿದ್ದೂ ಮೂಲಭೂತವಾದಿಗಳು ಅವರನ್ನು ಬೆದರಿಸುತ್ತಿದ್ದಾರೆ. ಜಾಗೃತಪ್ರಜ್ಞೆಯ ಹೆಣ್ಣನ್ನು ವಂಚಿಸುವುದು ಸುಲಭವಲ್ಲ ಎಂಬ ಕಾರಣ ಇದರ ಹಿಂದಿದೆ. ಸಾರಾ ಅವರ ನಿರಂತರ ಪ್ರಯತ್ನ ಇರುವುದೇ ಹೆಣ್ಣಿನ ಜಾಗೃತಿಯನ್ನು ಉದ್ದೀಪಿಸುವುದರೆಡೆಗೆ. ಇದಕ್ಕೆ ಅವರಿಗೆ ಒದಗಿಬರುವ ಅಸ್ತ್ರ ಸಾಹಿತ್ಯ.

ಎಷ್ಟೋ ಮುಸ್ಲಿಂ ಹೆಣ್ಣುಮಕ್ಕಳು ಅವರ ಬಳಿ ಬಂದು ನೀವು ನಮ್ಮ ಮನಸ್ಸಿನಲ್ಲಿರುವುದನ್ನೇ ಹೇಳುತ್ತಿರುವಿರಿ ಎಂದು ಹೇಳುವುದೇ ಅವರ ಕೃತಿಗಳ ಯಶಸ್ಸೂ ಹೌದು. ಈ ಕಾರಣಕ್ಕಾಗಿಯೇ ಇಪ್ಪತ್ತೈದುವರ್ಷ ತುಂಬಿದ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯನ್ನು ನೆನಪಿಸಿಕೊಳ್ಳುವುದು ಮತ್ತು ಮರು ಓದಿಗೆ ಒಳಪಡಿಸುವುದು ಅರ್ಥಪೂರ್ಣ.

ನಾಡಿನ ಪ್ರಸಿದ್ಧರು ಇರುವ 'ಸಾರಾ ಅಭಿನಂದನ ಸಮಿತಿ'ಯು ಸಾರಾ ಅಬೂಬಕರ್ ಅವರನ್ನು ಗೌರವಿಸಿತು ಮತ್ತು ಡಾ. ಸಬಿಹಾ ಭೂಮಿಗೌಡ ನೇತೃತ್ವದ ಸಂಪಾದಕ ಮಂಡಳಿಯು 'ಚಂದ್ರಗಿರಿ' ಎಂಬ ಅಭಿನಂದನ ಗ್ರಂಥವನ್ನೂ ಪ್ರಕಟಿಸಿದೆ. ಸಬಿತಾ ಬನ್ನಾಡಿ ಅವರು ಸಾರಾ ಅವರಿಗೆ ಅರ್ಪಿಸಿದ ಅಭಿನಂದನಾ ನುಡಿಯ ಸಂಕ್ಷಿಪ್ತ ರೂಪ ಇಲ್ಲಿದೆ. ಈ ಮೂಲಕ ಸಾರಾ ಅವರನ್ನು 'ನಮ್ಮ ಮಾನಸ' ಗೌರವದಿಂದ ಅಭಿನಂದಿಸುತ್ತಿದೆ.

❑

ಸೆಳೆತ

-ದರ್ಶಿನಿ ದಾದಾವಾಲ

ಕೊಳೆತು ನಾರುವ ಪಾಚಿಗಟ್ಟಿ ಹುಳುಬಿದ್ದ ಕೊಳದಲ್ಲಿ
ಅರಳಿದ ಹೂ ನೋಡಿ ಅವನಂದುಕೊಂಡ,
ಈ ಹೂ ನನ್ನ ಕೈಲೇ ಇರಬೇಕಾದ್ದು ಎಂದು.

ಕೂಡಲೇ ಮುನ್ನಡೆದ ಕೊಳದ ಕಡೆಗೆ

ಹೂವೇನೋ ದಡದ ಹತ್ತಿರಕ್ಕೇ ಇತ್ತು
ಕೈ ಚಾಚಿದ, ಆಲೋಚಿಸಿದ.
ಇನ್ನೇನು ಇದು ನನ್ನ ಕೈಗೆ ಬಂದಹಾಗೇ...

ಆದರೆ, ಕೈ ನೀರಲ್ಲಿಳಿದಿದ್ದೇ ತಡ
ಕೊಳ ಕಲಕಿತ್ತು
ಹೂ ಜಾರಿ ಮುಂದೆ ಸರಿದಿತ್ತು.
ಹೂ ಬೇಕಿದ್ದರೆ ಈಗ, ಇನ್ನೊಂಚೂರು
ಮುಂದೆ ಹೋಗಲೇಬೇಕಿತ್ತು ಅನ್ನೋಹಾಗೆ.

ಕೊಳದಲ್ಲಿ ಒಂದು ಕಾಲಿಡಲೇಬೇಕು
ಅಂದುಕೊಂಡ ಅವನು.
ಬೂಟು ಬಿಚ್ಚಿ ಬದಿಗಿಟ್ಟ
ಕೊಳದಲ್ಲಿ ಕಾಲಿಟ್ಟ
ಕೊಂಚ ಮುಂದೆ ಬಾಗಿ ಕೈ ಚಾಚಿದ.
ಆದರೆ ಅವನ ಕೈ ಹೂವಿಂದ ಸ್ವಲ್ಪವೇ ದೂರ ಉಳಿಯಿತು.

ಹೂವ ಹತ್ತಿರ ಹೋಗಬೇಕಿದ್ದರೆ
ಮತ್ತೊಂದು ಕಾಲನ್ನೂ ನೀರಿಗಿಡಲೇಬೇಕೆಂದು
ಈಗವನಿಗನ್ನಿಸಿತು.
ಕೂಡಲೇ ಆ ಕಾಲನ್ನೂ ಕೊಳದೊಳಗಿಟ್ಟ
ಹೂಗಾಗಿ ಮತ್ತೆ ಮುನ್ನಡೆದ.

ಹೀಗೆ ಅವನು ಒಂದರಹಿಂದೊಂದು ಕಾಲಿಟ್ಟದ್ದೇ,
ಕೊಳದಲ್ಲಿ ಅಲ್ಲೋಲ ಕಲ್ಲೋಲ
ಹೂ ಅವನಿಂದ ಮುಂದೆ.. ಇನ್ನೂ ಮುಂದೆ ಜಾರಿತ್ತು.
ಅವನು ನೀರಿಗಿಳಿದಾಗಿತ್ತು, ಈಗ ಯೋಚಿಸಲಿಕ್ಕೇನಿತ್ತು
ಯೋಚಿಸುವ ಜರೂರತ್ತೂ ಇರಲಿಲ್ಲ.

ಅವನು ಇನ್ನೂ ಒಂಚೂರು ಮುನ್ನಡೆದ
ಬಟ್ಟೆ ಎಲ್ಲ ಒದ್ದೆ, ಅವನು ಕೊಳದೊಳಗೆ
ಒಳಗೆ ಇಳಿಯುತ್ತ ಹೋದ
ಇಳಿಯುತ್ತ ಹೋದ... ಇಳಿಯುತ್ತ ಹೋದ... ಇಳಿಯುತ್ತಲೇ ಹೋದ
ಹೂ ಮುಂದಕ್ಕೆ ಜಾರುತ್ತ ಹೋಯ್ತು..
ಜಾರುತ್ತ ಹೋಯ್ತು.. ಜಾರುತ್ತಲೇ ಹೋಯ್ತು..

ತಕ್ಷಣ ಅವನು ತಲೆ ಎತ್ತಿ ನೋಡುತ್ತಾನೆ.
ಅರೆ, ಇದೇನು! ದಡ ಎಷ್ಟು ಹಿಂದಕ್ಕುಳಿಯಿತು!
ಅವನೆಷ್ಟು ಮುಂದೆ ಬಂದಿದ್ದ!

ಈಗವನು...
ಕೊಳೆತು ನಾರುವ ಪಾಚಿಗಟ್ಟಿ ಹುಳುಬಿದ್ದ ಕೊಳದಲ್ಲಿ
ಕೊರಳ ಮಟ್ಟ ಮುಳುಗಿಬಿಟ್ಟಿದ್ದ.
ಕೆಸರಲ್ಲಿ ಸಂಪೂರ್ಣವಾಗಿ ಸಿಕ್ಕಿ ಬಿಟ್ಟಿದ್ದ
ಕಣ್ಣ ದೃಷ್ಟಿ ಹರಿಸುತ್ತಾನೆ..
ಆ ಹೂ ಇನ್ನೂ ಅವನ ಎಟುಕಂದ ದೂರವೇ ಉಳಿದಿತ್ತು
ನೋಡುತ್ತಲೇ ಇದ್ದ...
ಆ ಹೂ ಜಾರುತ್ತಲೇ ನಡೆದಿತ್ತು ಇನ್ನೂ ಮುಂದೆ.

– ಮಮತ. ಜಿ ಸಾಗರ
(ಗುಜರಾತಿಯಿಂದ ಕನ್ನಡಕ್ಕೆ)

Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018